ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3
ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಎಂ.ಪಿ.(ಮೂಡಿಗೆರೆ)
ಉತ್ತರಿಸಬೇಕಾದ ದಿನಾಂಕ : 07.12.2020
ಉತ್ತರಿಸುವವರು : ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಸರ್ಕಾರಿ ಭೂಮಿಯಲ್ಲಿ ವಾಸವಿದ್ದರೂ ಅರಣ್ಯ ಇಲಾಖೆಯವರು 4/1 ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಅರಣ್ಯ ಕಾಯ್ದೆ ಅಧಿನಿಯಮ 4(1) ನ್ನು ಅಧಿಸೂಚಿಸುವಾಗ ಅಧಿಸೂಚನೆಗೊಳಗಾಗುವ ಪ್ರದೇಶದಲ್ಲಿ ವಾಸವಿರುವವರ ಹಕ್ಕುಗಳನ್ನು ಗುರುತಿಸಲು ಅರಣ್ಯ ವ್ಯವಸ್ಥಾಪನಾಧಿಕಾರಿಗಳವರು ಅಧಿನಿಯಮ 4 ರಿಂದ 17 ರವರೆಗೆ ಕ್ರಮ ಕೈಗೊಳ್ಳುವರು. ಅಧಿಸೂಚಿತ ಪ್ರದೇಶದಲ್ಲಿ ಆರ್ಜಿತ ಹಕ್ಕುಗಳಿರುವವರು ಅರಣ್ಯ ವ್ಯವಸ್ಥಾಪನಾಧಿಕಾರಿಯವರ ಮುಂದೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅಹವಾಲುಗಳ ಅರ್ಹತೆ ಆಧಾರದ ಮೇಲೆ ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಕಾಯ್ದೆಯಡಿಯಲ್ಲಿ ಅವರಿಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಂಥ ಅರ್ಜಿಗಳನ್ನು ವಿಲೇ ಮಾಡಲು ಸಕ್ಷಮ ಪ್ರಾಧಿಕಾರಿಯಾಗಿದ್ದಾರೆ.
ಆ)	ಬಂದಿದ್ದಲ್ಲಿ, 4/1 ಆಗಿರುವ ಪ್ರದೇಶದಲ್ಲಿ ವಾಸವಿರುವವರಿಗೆ ಯಾವ ರೀತಿ ಅನುಕೂಲ ಮಾಡಲಾಗಿದೆ;	
ಇ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಇದುವರೆಗೂ ತೆಗೆದುಕೊಂಡಿರುವ ಕ್ರಮಗಳೇನು?	

ಸಂಖ್ಯೆ: ಅಪಜೀ 128 ಎಫ್‌ಎಎಫ್ 2020

(ಆನಂದ್ ಸಿಂಗ್)
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಆನಂದ್ ಸಿಂಗ್
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 4
ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಎಂ.ಪಿ (ಮೂಡಿಗೆರೆ)
ಉತ್ತರಿಸುವ ದಿನಾಂಕ : 07-12-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ನಗರ ಹಾಗೂ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಫಾರಂ 50,53,57 ಅರ್ಜಿಗಳನ್ನು ಮಂಜೂರಾತಿ ಮಾಡಲಾಗುವುದೇ;	ಇಲ್ಲ
ಆ)	ಸದರಿ ಪಂಚಾಯಿತಿ ವ್ಯಾಪ್ತಿಯಲ್ಲಿ ತಲತಲಾಂತರದಿಂದ ಅನಧಿಕೃತವಾಗಿ ಸಣ್ಣ ಮಟ್ಟದ ರೈತರು ಉಳುಮೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಇ)	ಈ ವ್ಯಾಪ್ತಿಯಲ್ಲಿ ಆಜು ಬಾಜಿನಲ್ಲಿ ಅಥವಾ ಮಧ್ಯದಲ್ಲಿ ಜಮೀನು ಹೊಂದಿದ ರೈತರು ಫಾರಂ 50,53,57 ಅರ್ಜಿಗಳು ಸಲ್ಲಿಸಿದಲ್ಲಿ ಅವರಿಗೆ ಯಾವ ರೀತಿ ನ್ಯಾಯ ಒದಗಿಸಲಾಗುವುದು; (ಸಂಪೂರ್ಣ ವಿವರ ನೀಡುವುದು)	ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1964 ರ ಕಲಂ 94ಎ (4) ರನ್ವಯ ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1964 ರ ಉಪಬಂಧಗಳ ಅಡಿಯಲ್ಲಿ ಬರುವ ಎಲ್ಲಾ ನಗರ ಪೌರ ಸಭೆಗಳು 5 ಕಿ.ಮಿ., ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1964 ರ ಉಪಬಂಧಗಳ ಅಡಿಯಲ್ಲಿನ ಎಲ್ಲಾ ಪೌರ ಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳ 3 ಕಿ.ಮಿ., ಅಂತರದೊಳಗಿನ ಭೂಮಿಯನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಿರುವುದಿಲ್ಲ.

ಸಂಖ್ಯೆ: ಆರ್‌ಡಿ 150 ಎಲ್‌ಜಿಕ್ಯೂ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 8
ಸದಸ್ಯರ ಹೆಸರು : ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ.ಕೋಟೆ)
ಉತ್ತರಿಸುವ ಸಚಿವರು : ಕಂದಾಯ ಸಚಿವರು
ಉತ್ತರಿಸುವ ದಿನಾಂಕ : 07.12.2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸರಗೂರು ಹೊಸ ತಾಲ್ಲೂಕು ಕೇಂದ್ರವಾಗಿದ್ದು, ಈ ಕೇಂದ್ರದಲ್ಲಿ ತಾಲ್ಲೂಕು ಮಟ್ಟದ ಕಛೇರಿಗಳ ಸಂಕೀರ್ಣಕ್ಕಾಗಿ ಮಿನಿ ವಿಧಾನ ಸೌಧ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಸರಗೂರು ಹೊಸ ತಾಲ್ಲೂಕು ಕೇಂದ್ರದಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.
ಆ	ಹಾಗಿದ್ದಲ್ಲಿ, ಮಿನಿ ವಿಧಾನಸೌಧ ನಿರ್ಮಾಣಕ್ಕಾಗಿ ಸ್ಥಳ ಗುರುತಿಸಲಾಗಿರುವುದೇ ಮತ್ತು ಕಟ್ಟಡ ನಿರ್ಮಾಣಕ್ಕಾಗಿ ನಿಗದಿಪಡಿಸಿರುವ ಅನುದಾನವೆಷ್ಟು, ಪ್ರಸ್ತುತ, ಪ್ರಸ್ತಾವನೆ ಯಾವ ಹಂತದಲ್ಲಿದೆ: (ವಿವರ ನೀಡುವುದು)	ಮಿನಿ ವಿಧಾನಸೌಧ ನಿರ್ಮಾಣಕ್ಕಾಗಿ ಸ್ಥಳ ಗುರುತಿಸಿ, ಸವಿವರ ಅಂದಾಜು ಪಟ್ಟಿಯೊಂದಿಗೆ ಪ್ರಸ್ತಾವನೆ ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 100 ಡಬ್ಲ್ಯೂಬಿಆರ್ 2017 ದಿ:31.102017 ರಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಂತೆ ರೂ.10.00ಕೋಟಿಗಳ ಅಂದಾಜು ಮೊತ್ತದಲ್ಲಿ ಹೊಸ ಮಿನಿ ವಿಧಾನಸೌಧ ಕಟ್ಟಡ ಕಾಮಗಾರಿ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಕಂಇ 113 ಡಬ್ಲ್ಯೂಬಿಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	14
ಸದಸ್ಯರ ಹೆಸರು	ಶ್ರೀ ಹಾಲಪ್ಪ ಹರತಾಳ್ .ಹೆಚ್.(ಸಾಗರ)
ಉತ್ತರಿಸುವ ದಿನಾಂಕ	07-12-2020
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಕಂದಾಯ ಇಲಾಖೆಯ ಶಿರಸ್ತೆದಾರರುಗಳಿಗೆ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳಿಗೆ ದೈನಂದಿನ ಕಛೇರಿ ಕಾರ್ಯಗಳಿಗೆ ಅನುಕೂಲವಾಗುವಂತೆ ಇಲಾಖೆವತಿಯಿಂದ ಮೊಬೈಲ್ ಫೋನ್‌ಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಕಂದಾಯ ಇಲಾಖೆಯ ಶಿರಸ್ತೆದಾರರುಗಳಿಗೆ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳಿಗೆ ದೈನಂದಿನ ಕಛೇರಿ ಕಾರ್ಯಗಳಿಗೆ ಅನುಕೂಲವಾಗುವಂತೆ ಇಲಾಖೆವತಿಯಿಂದ ಮೊಬೈಲ್ ಫೋನ್‌ಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಆದರೆ ಬೆಳೆ ಸಮೀಕ್ಷೆ ಸಂಯೋಜನೆ ತಂತ್ರಾಂಶದಲ್ಲಿ ಕೆಲಸ ನಿರ್ವಹಿಸಲು ಗ್ರಾಮ ಲೆಕ್ಕಾಧಿಕಾರಿಗಳಿಗೆ ಕಂದಾಯ ಇಲಾಖೆಯ ಭೂಮಿ ಉಸ್ತುವಾರಿ ಕೋಶದಿಂದ ಮೊಬೈಲ್ ಪೋನ್ ವಿತರಿಸಲಾಗಿರುತ್ತದೆ.
(ಆ)	ಹಾಗಿದ್ದಲ್ಲಿ, ಮೊಬೈಲ್ ಫೋನ್‌ಗಳನ್ನು ನೀಡಲು ಇರುವ ತೊಂದರೆಗಳೇನು; ಹಾಗೂ ಈ ಬಗ್ಗೆ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ಅನ್ವಯಿಸುವುದಿಲ್ಲ

ಸಂಖ್ಯೆ: ಕಂಇ 207 ಬಿಎಂಎಂ 2020

(ಆರ್ ಅಶೋಕ್)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 15
ಸದಸ್ಯರ ಹೆಸರು : ಶ್ರೀ ಹಾಲಪ್ಪ ಹರತಾಳ್ ಹೆಚ್ (ಸಾಗರ)
ಉತ್ತರಿಸಬೇಕಾದ ದಿನಾಂಕ : 07-12-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

	ಪ್ರಶ್ನೆ	ಉತ್ತರ
(ಅ)	ಸಾಗರ ತಾಲ್ಲೂಕಿನ ಬಾರಂಗಿ ಹೋಬಳಿಯ ನಂದೋಡಿ ಗ್ರಾಮದಲ್ಲಿ ಇತ್ತೀಚೆಗೆ ಬಿದ್ದ ಭಾರೀ ಮಳೆಯಿಂದಾಗಿ ಗುಡ್ಡ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
(ಆ)	ಬಂದಿದ್ದಲ್ಲಿ, ಗ್ರಾಮದ ಸುಮಾರು 16 ಮನೆಗಳಿಗೆ ಭಾರಿ ನಷ್ಟವಾಗಿದ್ದು ಸದರಿ ಮನೆಗಳಿಗೆ ಪರಿಹಾರ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಪರಿಹಾರ ಮತ್ತು ಕೈಗೊಂಡ ಕ್ರಮದ ಪೂರ್ಣ ವಿವರ ನೀಡುವುದು)	ಸಾಗರ ತಾಲ್ಲೂಕು ಬಾರಂಗಿ ಹೋಬಳಿ ಅರಲಗೋಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಅರವಡೆ ಮತ್ತು ನಂದೋಡಿ ಗ್ರಾಮಗಳಲ್ಲಿ 2020-21ನೇ ಸಾಲಿನಲ್ಲಿ ಅತಿವೃಷ್ಠಿ ಭೂ ಕುಸಿತ ಉಂಟಾದ ನಿರಾಶ್ರಿತರಾದ ಕುಟುಂಬಗಳ ಪುನರ್ವಸತಿ ಉದ್ದೇಶಕ್ಕೆ ಲಿಂಗನಮಕ್ಕಿ ಗ್ರಾಮ ಸ.ನಂ.25ರಲ್ಲಿ 1ಎಕರೆ 20ಗುಂಟೆ ಜಾಗವನ್ನು ಅರಲಗೋಡು ಗ್ರಾಮ ಪಂಚಾಯಿತಿಗೆ ಕಾಯ್ದಿರಿಸಲಾಗಿದೆ.
(ಇ)	ಸದರಿ ಗುಡ್ಡ ಕುಸಿತದ ಪ್ರದೇಶದಲ್ಲಿ ತಡೆಗೋಡೆ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಪೂರ್ಣ ವಿವರ ನೀಡುವುದು)	

ಕಂಇ 609 ಟಿಎನ್ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 18
ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್ (ದೇವನಹಳ್ಳಿ)
ಉತ್ತರಿಸುವ ದಿನಾಂಕ : 07-12-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಸರ್ಕಾರಿ ಜಮೀನಿನಲ್ಲಿ ನಗರ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಮನೆ ಕಟ್ಟಿಕೊಂಡಿರುವವರ ಸಕ್ರಮಕ್ಕಾಗಿ 94ಸಿ ಮತ್ತು 94ಸಿಸಿ ಅರ್ಜಿ ಸಲ್ಲಿಸದೆ ವಂಚಿತರಾದವರಿಗಾಗಿ ಮತ್ತೊಂದು ಅವಕಾಶ ನೀಡುವ ಬಗ್ಗೆ ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು)	ಸರ್ಕಾರಿ ಜಮೀನಿನಲ್ಲಿ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 94ಸಿ ಮತ್ತು 94ಸಿಸಿ ರಡಿಯಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಅರ್ಜಿ ಸಲ್ಲಿಸಲು ದಿನಾಂಕ: 31.03.2019 ರವರೆಗೆ ಕಾಲಾವಕಾಶ ನೀಡಲಾಗಿದ್ದು, ಸದರಿ ಕಾಲಾವಕಾಶ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಒಂದು ವರ್ಷದ ಕಾಲಾವಕಾಶ ವಿಸ್ತರಿಸುವ ಸಂಬಂಧ ಕರ್ನಾಟಕ ಭೂ ಕಂದಾಯ ನಿಯಮಗಳು, 1966 ರ ನಿಯಮ 108 ಕ್ಯೂ ಮತ್ತು 108 ಎಕ್ಸ್ ಗಳಿಗೆ ತಿದ್ದುಪಡಿ ತರಲು ಪರಿಶೀಲಿಸಲಾಗುತ್ತಿದೆ.
ಆ)	ಹಾಗಿದ್ದಲ್ಲಿ, ಅರ್ಜಿ ಸಲ್ಲಿಸದೆ ನಂಬರ್‌ರಾದವರಿಗೆ ಮತ್ತೊಂದು ಅವಕಾಶ ನೀಡವುದರಿಂದ ಸರ್ಕಾರಕ್ಕೆ ಆಗುವ ತೊಂದರೆಗಳೇನು; ಬಡಜನರ ಅನುಕೂಲಕ್ಕಾಗಿ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ: ಆರ್‌ಡಿ 151 ಎಲ್‌ಜಿಕ್ಯೂ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 16
ಸದಸ್ಯರ ಹೆಸರು : **ಶ್ರೀ ಹಾಲಪ್ಪ ಹರತಾಳ್ ಹೆಚ್. (ಸಾಗರ)**
ಉತ್ತರಿಸುವ ಸಚಿವರು : **ಕಂದಾಯ ಸಚಿವರು**
ಉತ್ತರಿಸುವ ದಿನಾಂಕ : 07.12.2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ಶಿರಸ್ತೆದಾರರಿಗೆ ಅವರುಗಳ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳಗಳಲ್ಲಿಯೇ ವಸತಿ ನಿಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಸದರಿ ನೌಕರರು ಸಮಯಕ್ಕೆ ಸರಿಯಾಗಿ ಕಛೇರಿಯಲ್ಲಿ ಹಾಜರಾಗಿ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು ಅನುಕೂಲವಾಗುವಂತೆ ಸರ್ಕಾರ ಕೈಗೊಂಡ ಕ್ರಮಗಳೇನು;	ರಾಜ್ಯದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಅವರುಗಳ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳಗಳಲ್ಲಿಯೇ ವಸತಿ ನಿಲಯ ಕಂ ಕಛೇರಿಗಳನ್ನು ನಿರ್ಮಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಸದರಿ ಪ್ರಸ್ತಾವನೆಗೆ ಸಂಬಂದಿಸಿದಂತೆ ಪೂರಕ ಮಾಹಿತಿ ಒದಗಿಸುವಂತೆ ಎಲ್ಲಾ ಪ್ರಾದೇಶಿಕ ಆಯುಕ್ತರಿಗೆ ಸೂಚಿಸಲಾಗಿದೆ. ಶಿರಸ್ತೆದಾರರಿಗೆ ಅವರುಗಳ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳಗಳಲ್ಲಿಯೇ ವಸತಿ ನಿಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. ಸದರಿ ನೌಕರರು ಸಮಯಕ್ಕೆ ಸರಿಯಾಗಿ ಕಛೇರಿಯಲ್ಲಿ ಹಾಜರಾಗಿ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಕೇಂದ್ರಸ್ಥಾನದಲ್ಲಿಯೇ, ಕಡ್ಡಾಯವಾಗಿ ವಾಸವಿರಲು ನಿರ್ದೇಶನ ನೀಡಲಾಗಿದೆ.
ಆ)	ಗ್ರಾಮೀಣ ಪ್ರದೇಶಗಳಲ್ಲಿ ಕಂದಾಯ ಇಲಾಖೆ ನೌಕರರಿಗೆ ವಸತಿ ನಿಲಯಗಳನ್ನು ನಿರ್ಮಿಸಲು ಇರುವ ತೊಂದರೆಗಳೇನು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	

ಕಂಇ 107 ಡಬ್ಲ್ಯೂಬಿಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 20
ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್ (ದೇವನಹಳ್ಳಿ)
ಉತ್ತರಿಸುವ ಸಚಿವರು : ಕಂದಾಯ ಸಚಿವರು
ಉತ್ತರಿಸುವ ದಿನಾಂಕ : 07.12.2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೇಂದ್ರ ದೇವನಹಳ್ಳಿ ತಾಲ್ಲೂಕು ಚಪ್ಪರದಕಲ್ಲು (ಬೀರಸಂದ್ರ) ಗ್ರಾಮದಲ್ಲಿ ಕಛೇರಿಗಳ ಜಿಲ್ಲಾಡಳಿತ ಭವನ ಸ್ಥಾಪನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೇಂದ್ರ ದೇವನಹಳ್ಳಿ ತಾಲ್ಲೂಕು ಚಪ್ಪರದಕಲ್ಲು (ಬೀರಸಂದ್ರ) ಗ್ರಾಮದಲ್ಲಿ ಕಛೇರಿಗಳ ಜಿಲ್ಲಾಡಳಿತ ಭವನ ಸ್ಥಾಪನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ಕ್ರೀಡಾಂಗಣ, ಪಾರ್ಕ್ ನಿರ್ಮಾಣ, ಜಿಲ್ಲಾ ಆಸ್ಪತ್ರೆ, ವೈದ್ಯಕೀಯ ಕಾಲೇಜು ಸ್ಥಾಪನೆಗಾಗಿ ಅಗತ್ಯ ಭೂಮಿಗೆ ಸರ್ಕಾರಿ ಜಮೀನು ಗುರ್ತಿಸಿ ಮಂಜೂರು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ಕ್ರೀಡಾಂಗಣ ನಿರ್ಮಾಣಕ್ಕಾಗಿ ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ ಆದಿ ನಾರಾಯಣ ಹೊಸಹಳ್ಳಿ ಗ್ರಾಮದ ಸರ್ವೆ ನಂ.71 ರಲ್ಲಿ 9-36 ಎ/ಗು ಜಾಗವನ್ನು ಆದೇಶ ಸಂಖ್ಯೆ: ಎಲ್ಎನ್ ಡಿ(ದೊ) ಸಿಆರ್.72/15-16 ದಿನಾಂಕ 12.08.2015 ರಂತೆ ಸಹಾಯಕ ನಿರ್ದೇಶಕರು, ಜಿಲ್ಲಾ ಯುವಜನ ಸೇವೆ ಕ್ರೀಡಾ ಇಲಾಖೆ ಇವರಿಗೆ ಜಿಲ್ಲಾಧಿಕಾರಿಗಳು, ಜಿಲ್ಲಾ ಕ್ರೀಡಾಂಗಣಕ್ಕಾಗಿ ಮಂಜೂರು ಮಾಡಿರುತ್ತಾರೆ. ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ ಸಿದ್ದನಾಯ್ಕನಹಳ್ಳಿ ಗ್ರಾಮದ ಸರ್ವೆ ನಂ.20 ರಲ್ಲಿ 9-30 ಎ/ಗು ಜಮೀನನ್ನು ಕರ್ನಾಟಕ ಭೂ ಕಂದಾಯ ನಿಯಮಗಳು ಅಧಿನಿಯಮ 1964 ಕಲಂ 71 ರಡಿ ಜಿಲ್ಲಾ ಆಸ್ಪತ್ರೆಗೆ ಕಾಯ್ದಿರಿಸಿ, ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಪತ್ರ ಸಂ: ಎಲ್ಎನ್ ಡಿ(ದೊ) 53/19-20 ದಿನಾಂಕ 19.09.2019 ರಂತೆ ಮುಖ್ಯ ಆಡಳಿತಾಧಿಕಾರಿ, ಸಾರ್ವಜನಿಕ ಆಸ್ಪತ್ರೆ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ವರ್ಗಾಯಿಸಿ ಆದೇಶಿಸಿದೆ. ಪಾರ್ಕ್ ನಿರ್ಮಾಣ, ವೈದ್ಯಕೀಯ ಕಾಲೇಜು ಸ್ಥಾಪನೆಗಾಗಿ ಜಮೀನು ಮಂಜೂರಾತಿ ಕೋರಿ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
ಇ)	ಹಾಗಿದ್ದಲ್ಲಿ, ಸರ್ಕಾರಿ ಜಮೀನು ಗುರ್ತಿಸಿ ಯಾವ ಕಾಲಮಿತಿಯಲ್ಲಿ ಮಂಜೂರು ಮಾಡಲು ಸರ್ಕಾರ ಕ್ರಮವನ್ನು ಕೈಗೊಳ್ಳಲಾಗುವುದು? (ವಿವರ ನೀಡುವುದು)	ಉದ್ಭವಿಸುವುದಿಲ್ಲ.

ಕಂಇ 114 ಡಬ್ಲ್ಯೂಜಿಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**32**
ಸದಸ್ಯರ ಹೆಸರು	:	ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	:	07.12.2020
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

<table>
<tr><th>ಕ್ರ. ಸಂ</th><th>ಚುಕ್ಕೆ ಗುರುತಿಲ್ಲದ ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಯಚೂರು ವಿಧಾನ ಸಭಾ ಕ್ಷೇತ್ರದಲ್ಲಿ 2020-21 ನೇ ಸಾಲಿನ ಆಗಸ್ಟ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಆದ ಅತಿಯಾದ ಮಳೆಯಿಂದ ಹಾನಿಯಾಗಿರುವ ಮನೆಗಳೆಷ್ಟು; (ಭಾಗಶಃ ಹಾಗೂ ಸಂಪೂರ್ಣ ಹಾನಿಯಾದ ಮನೆಗಳ ವಿವರ ನೀಡುವುದು)</td><td>ರಾಯಚೂರು ವಿಧಾನ ಸಭಾ ಕ್ಷೇತ್ರದಲ್ಲೆ 2020-21 ನೇ ಸಾಲಿನ ಆಗಸ್ಟ ರಿಂದ ಅಕ್ಟೋಬರ್ ವರೆಗೆ ಹಾನಿಯಾದ ಮನೆಗಳ ವಿವರ:
<table>
<tr><th>ಸಂಪೂರ್ಣ ಹಾನಿ ('ಎ' ವರ್ಗ)</th><th>ಭಾಗಶಃ ಹಾನಿ ('ಬಿ' ವರ್ಗ)</th><th>ಅಲ್ಪ – ಸ್ವಲ್ಪ ('ಸಿ' ವರ್ಗ)</th><th>ಒಟ್ಟು ಮನೆಗಳು</th></tr>
<tr><td>00</td><td>40</td><td>51</td><td>91</td></tr>
</table>
ಜೂನ್ ಹಾಗೂ ಜುಲೈ ಮಾಹೆಯಲ್ಲಿ 2330 ಮನೆ ಹಾನಿಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಪರಿಹಾರ ಪಾವತಿಸಲಾಗಿದೆ.</td></tr>
<tr><td>ಆ</td><td>ಇಲ್ಲಿಯವರೆಗೂ ಎಷ್ಟು ಮನೆಗಳಿಗೆ ಪರಿಹಾರದ ಹಣವನ್ನು ವಿತರಿಸಲಾಗಿದೆ ? (ಸಂಪೂರ್ಣ ವಿವರ ನೀಡುವುದು)</td><td>2020-21 ನೇ ಸಾಲಿನ ಹಾನಿಯಾದ ಮನೆಗಳಿಗೆ ಪರಿಹಾರ ನೀಡಿರುವ ವಿವರ: (ರೂ ಲಕ್ಷಗಳಲ್ಲಿ)
<table>
<tr><th>ಭಾಗಶಃ ಹಾನಿ ('ಬಿ' ವರ್ಗ)</th><th>ಅಲ್ಪ – ಸ್ವಲ್ಪ ('ಸಿ' ವರ್ಗ) (ಪಕ್ಕಾ ಮನೆಗಳು)</th><th>ಅಲ್ಪ – ಸ್ವಲ್ಪ ('ಸಿ' ವರ್ಗ) (ಕಚ್ಚಾ ಮನೆಗಳು)</th><th>ಒಟ್ಟು</th></tr>
<tr><td>ಪ್ರಗತಿ ಹಂತದಲ್ಲಿದೆ</td><td>ಪ್ರಗತಿ ಹಂತದಲ್ಲಿದೆ</td><td>74.56</td><td>74.56</td></tr>
</table>
ಜೂನ್ ಹಾಗೂ ಜುಲೈ ಮಾಹೆಯಲ್ಲಿ 2330 ಮನೆ ಹಾನಿಯಾಗಿದ್ದು, ಕೇಂದ್ರ ಸರ್ಕಾರದ SDRF /NDRF ಮಾರ್ಗಸೂಚಿಯನ್ವಯ ರೂ.74.56 ಲಕ್ಷಗಳನ್ನು ನೆರೆ ಸಂತ್ರಸ್ಥರಿಗೆ ಪರಿಹಾರ ಪಾವತಿಸಲಾಗಿದೆ.
ಆಗಸ್ಟ ರಿಂದ ಅಕ್ಟೋಬರ್ ವರೆಗೆ ಭಾಗಶಃ ಮತ್ತು ಅಲ್ಪ – ಸ್ವಲ್ಪ ಹಾನಿಯಾದ ಮನೆಗಳಿಗೆ ಪರಿಹಾರವನ್ನು 'ರಾಜೀವ ಗಾಂಧಿ ವಸತಿ ನಿಗಮ ನಿಯಮಿತ' ತಂತ್ರಾಂಶದ ಮೂಲಕ ನೆರೆ ಸಂತ್ರಸ್ಥರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆ.

ಸರ್ಕಾರದಿಂದ ಭಾಗಶಃ ಮನೆಗಳಿಗೆ (ಮರಳಿ ಮನೆ ಕಟ್ಟುವವರಿಗೆ ರೂ.5.00 ಲಕ್ಷಗಳು ಅಥವಾ ರಿಪೇರಿ ಮಾಡುವ ಸಂತ್ರಸ್ಥರಿಗೆ ರೂ.3.00 ಲಕ್ಷಗಳ ಪರಿಹಾರವನ್ನು ನೀಡಲಾಗುವುದು)
ಅಲ್ಪ ಸ್ವಲ್ಪ ಹಾನಿಯಾದ ಮನೆಗಳಿಗೆ ನೇರವಾಗಿ ನೆರೆ ಸಂತ್ರಸ್ಥರಿಗೆ ಪರಿಷ್ಕೃತ ದರ ರೂ 50.00 ಸಾವಿರವನ್ನು ಜಮೆ ಮಾಡಲಾಗುವುದು
</td></tr>
</table>

ಕಂಇ 597 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 36
ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಸಿ.ಎನ್ (ಶ್ರವಣಬೆಳಗೊಳ)
ಉತ್ತರಿಸುವ ದಿನಾಂಕ : 07-12-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಪುರಸಭೆ ವ್ಯಾಪ್ತಿಯಿಂದ 5 ಕಿ.ಮೀ.ಒಳಗೆ ಜಮೀನುಗಳನ್ನು ನಮೂನೆ 50-53ರಲ್ಲಿ ಮಂಜೂರು ಮಾಡಲು ಅವಕಾಶವಿದೆಯೇ;	ಅವಕಾಶವಿರುವುದಿಲ್ಲ.
ಆ)	ಹಾಗಿಲ್ಲದಿದ್ದಲ್ಲಿ, ಮಂಜೂರು ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು;	ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1964 ರ ಕಲಂ 94ಎ (4) ರನ್ವಯ ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1964 ರ ಉಪಬಂಧಗಳ ಅಡಿಯಲ್ಲಿ ಬರುವ ಎಲ್ಲಾ ನಗರ ಪೌರ ಸಭೆಗಳು 5 ಕಿ.ಮಿ., ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1964 ರ ಉಪಬಂಧಗಳ ಅಡಿಯಲ್ಲಿನ ಎಲ್ಲಾ ಪೌರ ಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳ 3 ಕಿ.ಮಿ., ಅಂತರದೊಳಗಿನ ಭೂಮಿಯನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಿರುವುದಿಲ್ಲ.
ಇ)	ಈಗಾಗಲೇ ಮಂಜೂರಾಗಿ ಸಾಗುವಳಿ ಪತ್ರ ನೀಡಿದ್ದರೂ ಸಹ ಖಾತೆ ಮಾಡಲು ನಿರ್ಬಂದ ವಿದಿಸಲಾಗಿದೆಯೇ? (ಆದೇಶದ ಪ್ರತಿ ನೀಡುವುದು)	

ಸಂಖ್ಯೆ: ಆರ್‌ಡಿ 152 ಎಲ್‌ಜಿಕ್ಯೂ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 43
ಸದಸ್ಯರ ಹೆಸರು : ಶ್ರೀ ಹೂಲಗೇರಿ ಡಿ.ಎಸ್. (ಲಿಂಗಸುಗೂರು)
ಉತ್ತರಿಸುವ ಸಚಿವರು : ಕಂದಾಯ ಸಚಿವರು
ಉತ್ತರಿಸುವ ದಿನಾಂಕ : 07.12.2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿ ಪ್ರಸ್ತುತ ಇರುವ ಮಿನಿ ವಿಧಾನಸೌಧವನ್ನು ಇತರೆ ಇಲಾಖೆಗಳ ವಸತಿ ನಿಲಯಗಳ ಉಪಯೋಗಕ್ಕೆ ಹಸ್ತಾಂತರಿಸಿ ಸ.ನಂ.197/03 ರಲ್ಲಿ ನೂತನ ಮಿನಿ ವಿಧಾನಸೌಧ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.
ಆ)	ಈ ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಐತಿಹಾಸಿಕ ಮುದಗಲ್ಲ ಪಟ್ಟಣವನ್ನು ನೂತನ ತಾಲ್ಲೂಕು ಕೇಂದ್ರವಾಗಿ ಘೋಷಣೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಲಿಂಗಸುಗೂರು ತಾಲ್ಲೂಕಿನ ಮುದಗಲ್ಲ ಪಟ್ಟಣವನ್ನು ನೂತನ ತಾಲ್ಲೂಕಾಗಿ ರಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.
ಇ)	ಇತ್ತೀಚೆಗೆ ದೇವದುರ್ಗ ತಾಲ್ಲೂಕಿನ ಅರಕೇರಾ ಗ್ರಾಮ ಪಂಚಾಯತಿಯನ್ನು ಯಾವ ಯಾವ ಮಾನದಂಡಗಳ ಹಾಗೂ ಭೌಗೋಳಿಕ ಲಕ್ಷಣಗಳ ಆಧಾರದ ಮೇಲೆ ನೂತನ ತಾಲ್ಲೂಕು ಕೇಂದ್ರವಾಗಿ ಘೋಷಣೆ ಮಾಡಲಾಗಿದೆ?	ನೂತನ ತಾಲ್ಲೂಕುಗಳನ್ನು ರಚಿಸುವುದು ಸರ್ಕಾರದ ಸಾಮಾನ್ಯ ನೀತಿಯಾಗಿರುತ್ತದೆ. ರಾಜ್ಯದ ಜನತೆಗೆ ಸಮರ್ಥವಾದ ಆಡಳಿತ ನೀಡಲು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೇವೆಗಳನ್ನು ನೀಡುವ ಉದ್ದೇಶದಿಂದ ಭೌಗೋಳಿಕವಾಗಿ ಸೂಕ್ತ ವಿಸ್ತಾರವುಳ್ಳ ಹಾಗೂ ಸೂಕ್ತ ಜನಸಂಖ್ಯೆ ಹೊಂದಿರುವ ತಾಲ್ಲೂಕುಗಳು ಸಮರ್ಥ ಆಡಳಿತಕ್ಕೆ ಅನಿವಾರ್ಯ. ದೇವದುರ್ಗ ತಾಲ್ಲೂಕು ಡಾ॥ ನಂಜುಂಡಪ್ಪ ವರದಿಯನ್ವಯ ಅತ್ಯಂತ ಹಿಂದುಳಿದ ತಾಲ್ಲೂಕಾಗಿದೆ. ಈ ತಾಲ್ಲೂಕಿನ ಅರಕೇರಾ ಪಟ್ಟಣವು ದೇವದುರ್ಗ ತಾಲ್ಲೂಕು ಕೇಂದ್ರದಿಂದ ಸುಮಾರು 20 ಕಿ.ಮೀ ದೂರದಲ್ಲಿದೆ. ಅರಕೇರಾವನ್ನು ತಾಲ್ಲೂಕು ಕೇಂದ್ರವಾಗಿ ರಚಿಸಿದರೆ ಸುತ್ತಮುತ್ತಲಿನ ಹಳ್ಳಿಗಳಿಗೆ ಹಾಗೂ ತಾಂಡಾ/ದೊಡ್ಡಿಗಳಿಗೆ ಅನುಕೂಲವಾಗಲಿದೆ. ಹೀಗಾಗಿ ಆಡಳಿತಾತ್ಮಕವಾಗಿ ಹಾಗೂ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಹಿತದೃಷ್ಟಿಯಿಂದ ಅರಕೇರವನ್ನು ನೂತನ ತಾಲ್ಲೂಕಾಗಿ ರಚಿಸಲು ದಿನಾಂಕ:29-09-2020 ರ ಸರ್ಕಾರದ ಆದೇಶದಲ್ಲಿ ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಕಂಇ 112 ಡಬ್ಲ್ಯೂಬಿಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	45
ಸದಸ್ಯರ ಹೆಸರು	:	ಶ್ರೀ ಕುಮಾರ ಬಂಗಾರಪ್ಪ ಎಸ್. (ಸೊರಬ)
ಉತ್ತರಿಸುವ ಸಚಿವರು	:	ಕಂದಾಯ ಸಚಿವರು
ಉತ್ತರಿಸುವ ದಿನಾಂಕ	:	07.12.2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕಿಗೆ ಮಿನಿ ವಿಧಾನಸೌಧ ಮಂಜೂರಾತಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಮಿನಿ ವಿಧಾನಸೌಧ ನಿರ್ಮಾಣ ಮಾಡಲು ಸ್ಥಳ ಗುರುತಿಸಿ ಜಮೀನು ಮಂಜೂರಾತಿ ಮಾಡಲಾಗಿದೆಯೇ;	ಸೊರಬ ತಾಲ್ಲೂಕಿಗೆ ಮಿನಿ ವಿಧಾನಸೌಧ ಮಂಜೂರಾತಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. ಈಗಾಗಲೇ ಸೊರಬ ತಾಲ್ಲೂಕಿನಲ್ಲಿ ಮಿನಿ ವಿಧಾನ ಸೌಧ ನಿರ್ಮಾಣವಾಗಿದ್ದು, ಸದರಿ ಕಟ್ಟಡವು ಶಿಥಿಲಾವಸ್ಥೆಯಲ್ಲಿರುವುದರಿಂದ ಹೊಸ ಕಟ್ಟಡ ಕಾಮಗಾರಿಗಾಗಿ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರ ಆದೇಶ ಸಂಖ್ಯೆ: ಎಲ್.ಎನ್.ಡಿ.(2)ಎಲ್.ಜಿ.2/115/2020 ದಿನಾಂಕ 21.10.2020 ರಂತೆ ಸೊರಬ ತಾಲ್ಲೂಕು, ಕಸಬಾ ಹೋಬಳಿ, ಹಳೆ ಸೊರಬ ಗ್ರಾಮದ ಸರ್ವೆ ನಂ.18 ರಲ್ಲಿ 5 ಎಕರೆ ಪ್ರದೇಶವನ್ನು ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣಕ್ಕೆ ಕಾಯ್ದಿರಿಸಲಾಗಿದೆ.
ಆ	ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?	ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರಿಂದ ಪ್ರಸ್ತಾವನೆ ಸ್ವೀಕೃತವಾದ ನಂತರ ಪರಿಶೀಲಿಸಲಾಗುತ್ತದೆ.

ಕಂಇ 111 ಡಬ್ಲ್ಯೂಬಿಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 47
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಎ. (ಮಾಗಡಿ)
ಉತ್ತರಿಸುವ ದಿನಾಂಕ : 07-12-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಲವಾರು ವರ್ಷಗಳಿಂದ ರೈತರು ಸರ್ಕಾರಿ ಜಮೀನನ್ನು ಸಾಗುವಳಿ ಮಾಡಿಕೊಂಡು ಬರುತ್ತಿದ್ದ ಹಿನ್ನೆಲೆಯಲ್ಲಿ ಸರ್ಕಾರದಿಂದ ನಮೂನೆ-50-53 ರಂತೆ ರೈತರಿಗೆ ಹಂಚಿಕೆ ಮಾಡಿದ ಜಮೀನಿಗೆ ಸಾಗುವಳಿ ಚೀಟಿ ವಿತರಣೆ ಮಾಡಿರುವುದು ನಿಜವೇ; ಹಾಗಿದ್ದಲ್ಲಿ, ರೈತರ ಹೆಸರಿನಲ್ಲಿ ಪಹಣಿ ಹಾಗೂ ಮ್ಯೂಟೇಷನ್ ಮತ್ತು ಕಂದಾಯ ಇದ್ದರೂ ಸಹ ಅರಣ್ಯ ಇಲಾಖೆಯವರು ಜಮೀನನ್ನು ರೈತರಿಂದ ಕಸಿದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಅರಣ್ಯ ಭೂಮಿಯನ್ನು ಅನಧಿಕೃತವಾಗಿ ಮಂಜೂರು ಮಾಡಿ ರೈತರ ಹೆಸರಿನಲ್ಲಿ ಪಹಣಿ ಹಾಗೂ ಮ್ಯುಟೇಷನ್ ಕಂದಾಯ ಇಲಾಖೆಯಿಂದ ನೀಡಿದ್ದರೂ ಸಹ ಅದು ಅಧಿಸೂಚನೆಯಂತೆ ಅರಣ್ಯ ಪ್ರದೇಶವಾಗಿರುತ್ತದೆ. ಅರಣ್ಯ ಭೂಮಿಯನ್ನು ಮಂಜೂರು ಮಾಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಅರಣ್ಯ ಪ್ರದೇಶದಲ್ಲಿ ಆಗಿರುವ ಅನಧಿಕೃತ ಮಂಜೂರಿ ಪ್ರದೇಶವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 64ಎ ಪ್ರಕಾರ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
ಆ)	ಬಂದಿದ್ದಲ್ಲಿ, ಈ ಹಿಂದೆ ರೈತರಿಗೆ ಹಂಚಿಕೆ ಮಾಡಲಾದ ಜಮೀನಿಗೆ ಸರ್ವೆ ಮಾಡಿಸಿ ವಿನಃ ಕಾರಣ ರೈತರಿಗೆ ಅರಣ್ಯ ಇಲಾಖೆಯವರು ತೊಂದರೆ ನೀಡುತ್ತಿರುವುದನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ;	ಕಂದಾಯ ಇಲಾಖೆ & ಅರಣ್ಯ ಇಲಾಖೆಯಲ್ಲಿ ಪರಸ್ಪರ ಆಗಬೇಕಾಗಿರುವ ವಿಷಯಗಳ ಕುರಿತು ಈಗಾಗಲೇ ಮಾನ್ಯ ಕಂದಾಯ ಸಚಿವರು ಹಾಗೂ ಅರಣ್ಯ, ಪರಿಸರ & ಜೀವಿಶಾಸ್ತ್ರ ಇಲಾಖೆ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:07.01.2015 ರಂದು ನಡೆದ ಸಭೆಯಲ್ಲಿ ಸದರಿ ವಿಷಯದ ಬಗ್ಗೆ ಚರ್ಚಿಸಿ ಕೆಲವು ನಿರ್ಣಯಗಳನ್ನು ಕೈಗೊಳ್ಳಲಾಗಿರುತ್ತದೆ.
ಇ)	ಅರಣ್ಯ ಕಾಯ್ದೆಗೆ ತಿದ್ದುಪಡಿ ತಂದು ಈ ಹಿಂದೆ ಕಂದಾಯ ಇಲಾಖೆಯ ವತಿಯಿಂದ ನೀಡಿದ ಸಾಗುವಳಿ ಭೂಮಿಯನ್ನು ರೈತರಿಗೆ ಹಿಂದಿರುಗಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;	ಅದರಂತೆ ಸರ್ಕಾರದ ಸುತ್ತೋಲೆ ಸಂ:ಅಪಜೀ 45 ಎಫ್‌ಜಿಎಲ್ 2015, ದಿನಾಂಕ:13.03.2015 ರ ಸುತ್ತೋಲೆಯನ್ವಯ ಅರಣ್ಯ ಸಂರಕ್ಷಣಾ ಕಾಯ್ದೆ 1980 ಜಾರಿಗೆ ಬರುವ ಪೂರ್ವದಲ್ಲಿ ಅಧಿಸೂಚನೆಯಂತೆ ಕಂದಾಯ ದಾಖಲೆಗಳಲ್ಲಿ ಅರಣ್ಯ ಎಂದು ನಮೂದಾಗದ ಪ್ರಯುಕ್ತ ಸಕ್ಷಮ ಪ್ರಾಧಿಕಾರಗಳು ಅರಣ್ಯ ಜಮೀನನ್ನು ಮಂಜೂರು ಮಾಡಿರುವ ಪ್ರಕರಣಗಳಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆಯಡಿ ಅರಣ್ಯ ಅಧಿಸೂಚನೆಯಿಂದ ಹೊರತುಪಡಿಸಲು (De-Notification) ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯಲು ಕ್ರಮ ಕೈಗೊಳ್ಳಬೇಕಾಗಿದ್ದು, ಈ ಪ್ರಕರಣಗಳಲ್ಲಿ ರೈತರನ್ನು ಒಕ್ಕಲೆಬ್ಬಿಸಲು ಅವಕಾಶವಿರುವುದಿಲ್ಲ.
ಈ)	ಅರಣ್ಯ ಇಲಾಖೆ ಹಾಗೂ ಕಂದಾಯ ಇಲಾಖೆಯ ಸಂಘರ್ಷದಿಂದಾಗಿ ರೈತರಿಗೆ ಆಗುತ್ತಿರುವ ತೊಂದರೆಯನ್ನು ಸರ್ಕಾರ ಶಾಶ್ವತವಾಗಿ ಬಗೆಹರಿಸಲಾಗುವುದೇ?	

ಸಂಖ್ಯೆ: ಆರ್‌ಡಿ 153 ಎಲ್‌ಜಿಕ್ಯೂ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	49
ಸದಸ್ಯರ ಹೆಸರು	:	ಶ್ರೀ ಶಿವಲಿಂಗೇಗೌಡ. ಕೆ.ಎಂ. (ಅರಸೀಕೆರೆ)
ಉತ್ತರಿಸುವ ದಿನಾಂಕ	:	07.12.2020.
ಉತ್ತರಿಸುವ ಸಚಿವರು	:	ಉಪಮುಖ್ಯಮಂತ್ರಿ ಲೋಕೋಪಯೋಗಿ ಇಲಾಖೆ

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
ಅ)	ತುಮಕೂರು ಹೊನ್ನಾವರ ರಸ್ತೆಯು ಎನ್.ಹೆಚ್. ನಿಂದ ಎನ್.ಹೆಚ್.ಎ.ಐ. ಗೆ ವರ್ಗಾವಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಬಂದಿದೆ.
ಆ)	ಹಾಗಿದ್ದಲ್ಲಿ, ಎನ್.ಹೆಚ್.ಎ.ಐ. ರಸ್ತೆಯ ಅರಸೀಕೆರೆ, ಬೆಂಡೆಕೆರೆ, ಬಾಣಾವರ ಸ್ಥಳಗಳಲ್ಲಿ ಬೈಪಾಸ್ ರಸ್ತೆ ನಿರ್ಮಾಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದಲ್ಲಿ ಇದ್ದ ಹಳೆಯ ಹಾಗೂ ಪ್ರಸ್ತುತ ನಿರ್ಮಾಣವಾಗುತ್ತಿರುವ ರಸ್ತೆಗಳ ನಿರ್ವಹಣೆ ಜವಾಬ್ದಾರಿ ಯಾರಿಗೆ ಸೇರಿರುತ್ತದೆ ? (ವಿವರ ನೀಡುವುದು)	ಹೌದು, ಬಂದಿದೆ. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ರಾಷ್ಟ್ರೀಯ ಹೆದ್ದಾರಿ-206ರ ಪ್ಯಾಕೇಜ್-2ರಲ್ಲಿ ಕೈಗೊಂಡಿರುವ ನಾಲ್ಕು ಪಥದ ಕರಡಿ-ಬಾಣಾವರ ಸೆಕ್ಷನ್ ಅಡಿ ಅರಸೀಕೆರೆ-ಬೆಂಡೆಕೆರೆ ಮತ್ತು ಬಾಣಾವರ ಗಳಲ್ಲಿ ಬೈಪಾಸ್ ನಿರ್ಮಿಸುವ ಯೋಜನೆ ಹೊಂದಿರುತ್ತದೆ. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಕರಡಿ-ಬಾಣಾವರ ವಿಭಾಗದ ಹಾಲಿ ಭಾಗದಲ್ಲಿ 4 ಪಥದ ಕಾಮಗಾರಿಯನ್ನು ಕೈಗೊಂಡಿರುತ್ತದೆ. ಸದರಿ ಯೋಜನೆ ಪೂರ್ಣಗೊಳ್ಳುವವರೆಗೆ ಅರಸಿಕೆರೆ, ಬೆಂಡೆಕೆರೆ ಮತ್ತು ಬಾಣಾವರ ಪಟ್ಟಣಗಳಲ್ಲಿ ನಿರ್ಮಿಸಲಾದ ಬೈಪಾಸ್ ರಸ್ತೆ ಭಾಗವು ಒಳಗೊಂಡಂತೆ ಹಾಲಿ ಅಸ್ತಿತ್ವದಲ್ಲಿರುವ ರಸ್ತೆಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಮತ್ತು ರಿಯಾಯಿತಿ ಒಪ್ಪಂದದ ನಿಬಂಧನೆಗಳ ಪ್ರಕಾರ ರಿಯಾಯಿತಿದಾರರಿಂದ ನಿರ್ವಹಿಸಲ್ಪಡುತ್ತದೆ. ಯೋಜನೆ ಪೂರ್ಣಗೊಂಡ ನಂತರ ಬೈಪಾಸ್ ಮಾಡಿದ ಭಾಗವನ್ನು ಸಂಬಂಧಪಟ್ಟ ಮೂಲ ಇಲಾಖೆಗೆ ಹಸ್ತಾಂತರಿಸಲಾಗುವುದು.

ಕಡತ ಸಂಖ್ಯೆ: ಲೋಇ 241 ಸಿಎನ್‌ಹೆಚ್ 2020 (ಇ)

(ಗೋವಿಂದ ಎಂ. ಕಾರಜೋಳ)
ಉಪಮುಖ್ಯಮಂತ್ರಿ
ಲೋಕೋಪಯೋಗಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 55
ಸದಸ್ಯರ ಹೆಸರು : ಶ್ರೀ ಕೃಷ್ಣಾರೆಡ್ಡಿ ಎಂ (ಚಿಂತಾಮಣಿ)
ಉತ್ತರಿಸುವ ದಿನಾಂಕ : 07-12-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ನಮೂನೆ-57ರ ದರಖಾಸ್ತು ಮಂಜೂರು ಜಮೀನು ಅರ್ಜಿ ಸಲ್ಲಿಸಲು ಮಾಹಿತಿ ಕೊರತೆಯಿಂದ ಫಲಾನುಭವಿಗಳಿಗೆ ಸಾಧ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ)	ಬಂದಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಧಿಯನ್ನು ವಿಸ್ತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ಸರ್ಕಾರಿ ಜಮೀನುಗಳಲ್ಲಿನ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಎ(4)ಗೆ ತಿದ್ದುಪಡಿ ತರಲಾಗಿದ್ದು, ತತ್ಸಂಬಂಧ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಸಿಸಿಸಿ ಅನ್ನು ಸೇರ್ಪಡಿಸಿ, ಹೊಸದಾಗಿ ನಮೂನೆ-57 ರ ಅರ್ಜಿಗಳನ್ನು ಸ್ವೀಕರಿಸಲು ದಿನಾಂಕ: 16.03.2019 ರವರೆಗೆ ಅವಧಿ ಮುಕ್ತಾಯಗೊಂಡಿರುತ್ತದೆ. ಅವಧಿ ವಿಸ್ತರಿಸಲು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.
ಇ)	ಯಾವ ಕಾಲಮಿತಿಯೊಳಗೆ ಮತ್ತೊಂದು ಅವಧಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು? (ವಿವರ ನೀಡುವುದು)	

ಸಂಖ್ಯೆ: ಆರ್‌ಡಿ 154 ಎಲ್‌ಜಿಕ್ಯೂ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 56
ಸದಸ್ಯರ ಹೆಸರು	: ಶ್ರೀ ಕೃಷ್ಣಾರೆಡ್ಡಿ ಎಂ (ಚಿಂತಾಮಣಿ)
ಉತ್ತರಿಸುವ ದಿನಾಂಕ	: 07-12-2020
ಉತ್ತರಿಸುವ ಸಚಿವರು	: ಮಾನ್ಯ ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ನಮೂನೆ-94ಸಿ ಮತ್ತು 94ಸಿಸಿ ಯ ಮಾಹಿತಿ ಕೊರತೆಯಿಂದ ಅರ್ಜಿ ಸಲ್ಲಿಸಲು ಫಲಾನುಭವಿಗಳಿಗೆ ಸಾಧ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಧಿಯನ್ನು ವಿಸ್ತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 94ಸಿ ಮತ್ತು 94ಸಿಸಿ ರಡಿಯಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಅರ್ಜಿ ಸಲ್ಲಿಸಲು ದಿನಾಂಕ: 31.03.2019 ರವರೆಗೆ ಕಾಲಾವಕಾಶ ನೀಡಲಾಗಿದ್ದು, ಸದರಿ ಕಾಲಾವಕಾಶ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಒಂದು ವರ್ಷದ ಕಾಲಾವಕಾಶ ವಿಸ್ತರಿಸುವ ಸಂಬಂಧ ಕರ್ನಾಟಕ ಭೂ ಕಂದಾಯ ನಿಯಮಗಳು, 1966 ರ ನಿಯಮ 108 ಕ್ಯೂ ಮತ್ತು 108 ಎಕ್ಸ್ ಗಳಿಗೆ ತಿದ್ದುಪಡಿ ತರಲು ಪರಿಶೀಲಿಸಲಾಗುತ್ತಿದೆ.
ಇ)	ಯಾವ ಕಾಲಮಿತಿಯೊಳಗೆ ಮತ್ತೊಂದು ಅವಧಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು? (ವಿವರ ನೀಡುವುದು)	

ಸಂಖ್ಯೆ: ಆರ್‌ಡಿ 155 ಎಲ್‌ಜಿಕ್ಯೂ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	157
ಸದಸ್ಯರ ಹೆಸರು	ಶ್ರೀ. ರಾಜೇಗೌಡ ಟಿ.ಡಿ (ಶೃಂಗೇರಿ)
ವಿಷಯ	ಸಾಮಾಜಿಕ ಭದ್ರತಾ ಯೋಜನೆಗಳು
ಉತ್ತರಿಸಬೇಕಾದ ದಿನಾಂಕ	07/12/2020
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಪ್ರಶ್ನೆ	ಉತ್ತರ
ಅ) ರಾಜ್ಯದಲ್ಲಿ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನ, ಸಂಧ್ಯಾ ಸುರಕ್ಷಾ ಯೋಜನೆ ಹಾಗೂ ಇನ್ನಿತರ ಸಾಮಾಜಿಕ ಭದ್ರತಾ ಪಿಂಚಣಿ ವಿತರಣೆ ಸ್ಥಗಿತಗೊಂಡಿರುವುದು / ವಿಳಂಬ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ರಾಜ್ಯದಲ್ಲಿ ಜಾರಿಯಲ್ಲಿರುವ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಿಕ ಪಿಂಚಣಿ ವಿತರಣಾ ವ್ಯವಸ್ಥೆಯನ್ನು ಸಮರ್ಪಕವಾಗಿ ಹಾಗೂ ಪಾರದರ್ಶಕವಾಗಿ ನಿರ್ವಹಿಸುವಲ್ಲಿ ಖಜಾನೆ-2 ಯೋಜನೆಯನ್ನು ಈಗಾಗಲೇ ರಾಜ್ಯಾದ್ಯಂತ ಜಾರಿಗೊಳಿಸಲಾಗಿದೆ. ಈ ವ್ಯವಸ್ಥೆಯಡಿ ಪಿಂಚಣಿ ಮಂಜೂರಾತಿಯಿಂದ ಪಿಂಚಣಿ ಪಾವತಿಯವರೆಗೆ ಎಲ್ಲಾ ಹಂತಗಳಲ್ಲಿ ವಿದ್ಯುನ್ಮಾನ ತಂತ್ರಾಂಶದ ಮೂಲಕ ಮಾಹಿತಿ ವರ್ಗಾವಣೆಯಾಗುವ ಕಾರಣ ಹಂತವಾರು ವಿವರ ಪಡೆಯಲು ಅವಕಾಶವಿದೆ. ಖಜಾನೆ-2 ಯೋಜನೆಯು ಸುಭದ್ರ, ಪಾರದರ್ಶಕ ಹಾಗೂ ನಿಖರ ವ್ಯವಸ್ಥೆಯಾಗಿರುವ ಹಿನ್ನೆಲೆಯಲ್ಲಿ ಈಗಾಗಲೇ ಖಜಾನೆ-1ರಲ್ಲಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಮಾಹಿತಿಯನ್ನು ಸಹ ಕಡ್ಡಾಯ ವಿವರಗಳೊಂದಿಗೆ ಅನುಕಲನೆ ಮೂಲಕ ಖಜಾನೆ-2 ತಂತ್ರಾಂಶಕ್ಕೆ ವರ್ಗಾಯಿಸಲಾಗುತ್ತಿದೆ. ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿಯನ್ನು ಅರ್ಹ ಫಲಾನುಭವಿಗಳಿಗೆ ಬ್ಯಾಂಕ್ ಮತ್ತು ಇ.ಎಂ.ಓ.ಗಳ ಮೂಲಕ ಏಕ ಕಾಲದಲ್ಲಿ ಬಿಡುಗಡೆಗೊಳಿಸಿ ಪಿಂಚಣಿ ಪಾವತಿ ಮಾಡಲಾಗುತ್ತಿದೆ. Core Banking ವ್ಯವಸ್ಥೆಯಡಿ ತ್ವರಿತವಾಗಿ ಪಿಂಚಣಿ ವಿತರಣೆಯಾಗುತ್ತಿದೆ. ಅದೇ ರೀತ್ಯಾ ಅಂಚೆ ಕಛೇರಿಯಿಂದ ಇ.ಎಂ.ಓ. ಮೂಲಕ ಅಂಗವಿಕಲರಿಗೆ ಹಾಗೂ ವಯೋವೃದ್ಧರಿಗೆ ಖುದ್ದು ಮನೆ ಬಾಗಿಲಿಗೆ ಪಿಂಚಣಿಯನ್ನು ತಲುಪಿಸುವ ನಿಟ್ಟಿನಲ್ಲಿ ಇ.ಎಂ.ಓ. (ಮನಿಯಾರ್ಡರ್) ವ್ಯವಸ್ಥೆಯನ್ನು ಸಹ ಹೊಂದಲಾಗಿದೆ. ಕೆಲವು ಪ್ರಕರಣಗಳಲ್ಲಿ ಫಲಾನುಭವಿಗಳ ಬ್ಯಾಂಕ್ ಖಾತೆ ವಿವರ/ IFSC Code/Pin Code ಮಾಹಿತಿಯನ್ನು ನಿಖರವಾಗಿ ನೀಡದೆ ಇರುವ ಕಾರಣ No Such Account/Invalid Bank Details ಮತ್ತು Invalid Address ಕಾರಣದಿಂದ ಪಿಂಚಣಿ ಸ್ಥಗಿತಗೊಂಡಿದ್ದು, ಈ ಬಗ್ಗೆ ಪರಿಶೀಲಿಸಿ ಬ್ಯಾಂಕ್ ಖಾತೆ ವಿವರ ಹಾಗೂ ವಿಳಾಸ ನ್ಯೂನತೆಯನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಫಲಾನುಭವಿಗಳು ಅಗತ್ಯ ಮಾಹಿತಿ ನೀಡಿದಲ್ಲಿ ನ್ಯೂನತೆಯನ್ನು ಸರಿಪಡಿಸಿ, ತಂತ್ರಾಂಶದಲ್ಲಿ ತಹಸೀಲ್ದಾರರು ಅನುಮೋದನೆ ನೀಡಿದ ನಂತರ ಸರಿಪಡಿಸಲಾದ ಮಾಹಿತಿಯನ್ನು ಖಜಾನೆಗೆ ಅನುಕಲನೆ ಮೂಲಕ ವರ್ಗಾಯಿಸಿ ತ್ವರಿತವಾಗಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ.
ಆ) ಹಾಗಿದ್ದಲ್ಲಿ, ಈ ಸಮಸ್ಯೆಗೆ ಕಾರಣಗಳೇನು;	
ಇ) ಈ ಸಮಸ್ಯೆಯನ್ನು ತ್ವರಿತಗತಿಯಲ್ಲಿ ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ಬಗೆಹರಿಸಲಾಗುತ್ತದೆ.?	

ಸಂ. LALC-LAQ/46/2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 163
ಸದಸ್ಯರ ಹೆಸರು ಶ್ರೀ ನರೇಂದ್ರ ಆರ್.(ಹನೂರು)
ಉತ್ತರಿಸುವ ದಿನಾಂಕಃ 07-12-2020
ಉತ್ತರಿಸುವ ಸಚಿವರು: ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
ಅ)	ಚಾಮರಾಜನಗರ ಜಿಲ್ಲೆ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ತೆಳನೂರು ಗ್ರಾಮದಿಂದ ಬಂಡಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯು ತುಂಬಾ ಹದಗೆಟ್ಟು ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಹೌದು, ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ ಈ ರಸ್ತೆಯ ದುರಸ್ಥಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?	ಹನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೊಳ್ಳೇಗಾಲ ತಾಲ್ಲೂಕು ಮತ್ತಿಮರ ಕ್ರಾಸ್‌ನಿಂದ ಬಂಡಳ್ಳಿ ಸೇರುವ ರಸ್ತೆಯು ಸರಪಳಿ 4.70 ಕಿ.ಮೀ ರಿಂದ ಪ್ರಾರಂಭವಾಗಿ 26.00 ಕಿ.ಮೀ ವರೆಗೆ ಸದರಿ ರಸ್ತೆಯ ಒಟ್ಟು ಉದ್ದ 21.50 ಕಿ.ಮೀ. ಉದ್ದವಿರುವ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, 3.75, 5.50 ಮೀ ಅಗಲದ ಕ್ಯಾರಿಯೇಜ್ ವೇ ಹೊಂದಿದ್ದು ಡಾಂಬರ್ ಮೇಲ್ಮೈ ಹೊಂದಿರುತ್ತದೆ. ಸದರಿ ರಸ್ತೆಯ ತೆಳ್ಳನೂರು ಗ್ರಾಮದಿಂದ ಬಂಡಳ್ಳಿ ಗ್ರಾಮಕ್ಕೆ ಹೋಗುವ ಸರಪಳಿ 16.50 ರಿಂದ 22.30 ಕಿ.ಮೀ. ವರೆಗೆ ರೂ.6.00 ಕೋಟಿಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸಲು 2016-17ನೇ ಸಾಲಿನ ಸಿ.ಆರ್.ಎಫ್ ಯೋಜನೆಯಡಿ ಮಂಜೂರಾಗಿದ್ದು, ಅದರಂತೆ ಟೆಂಡರ್ ಕರೆದು, ಗುತ್ತಿಗೆದಾರರಿಗೆ ವಹಿಸಲಾಗಿತ್ತು. ಗುತ್ತಿಗೆದಾರರು 15 ತಿಂಗಳು ಗತಿಸಿದ್ದರೂ ದರ ಸಂಧಾನಕ್ಕೆ ಹಾಜರಾಗದೇ ಇರುವ ಪ್ರಯುಕ್ತ ಸದರಿ ಟೆಂಡರನ್ನು ದಿನಾಂಕ:10-06-2020ರಲ್ಲಿ ತಿರಸ್ಕರಿಸಲಾಗಿರುತ್ತದೆ. ಮುಂದುವರೆದು, ಮರು ಟೆಂಡರ್ ಕರೆಯುವ ಬಗ್ಗೆ ಮರು ಟೆಂಡರ್ ಕರೆಯುವ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿ ನಿರೀಕ್ಷಿಸಿದೆ. ಹಾಗೂ ಸದರಿ ರಸ್ತೆಯ ವಾರ್ಷಿಕ ನಿರ್ವಹಣೆಯನ್ನು ಅನುದಾನದ ಲಭ್ಯತೆಗನುಗುಣವಾಗಿ ಕೈಗೊಂಡಿರುತ್ತದೆ.

ಲೋಇ 102 ಸಿಕ್ಯೂಎನ್ 2020(ಇ)

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**164**
ಸದಸ್ಯರ ಹೆಸರು	:	**ಶ್ರೀ ನರೇಂದ್ರ ಆರ್. (ಹನೂರು)**
ಉತ್ತರಿಸುವ ಸಚಿವರು	:	**ಮಾನ್ಯ ಕಂದಾಯ ಸಚಿವರು**
ಉತ್ತರಿಸುವ ದಿನಾಂಕ	:	**07.12.2020**

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಚಾಮರಾಜನಗರ ಜಿಲ್ಲೆಯ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಹಿಂದೆ ಸರ್ಕಾರದಿಂದ ಸಾಗುವಳಿ ಚೀಟಿ ನೀಡಿರುವ ಪ್ರಕರಣಗಳಿಗೆ ಆರ್‌ಟಿಸಿ ಯಲ್ಲಿ ದಾಖಲೆ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚಾಮರಾಜನಗರ ಜಿಲ್ಲೆಯ ಹನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಹಿಂದೆ ಸರ್ಕಾರದಿಂದ ಸಾಗುವಳಿ ಚೀಟಿ ನೀಡಿರುವ 174 ಪ್ರಕರಣಗಳ 357.14 ಎಕರೆ ವಿಸ್ತೀರ್ಣದ ಜಮೀನುಗಳನ್ನು ಆರ್.ಟಿ.ಸಿ. ಯಲ್ಲಿ ದಾಖಲೆ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ.	ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು)	ಈ ಹಿಂದೆ ಸಾಗುವಳಿ ಚೀಟಿ ನೀಡಿದ ಸಂದರ್ಭದಲ್ಲಿ ಖಾತೆ ಬದಲಾವಣೆ ಮಾಡದೇ ಇರುವುದರಿಂದ ಇಂತಹ ಸಮಸ್ಯೆಯಾಗಿರುತ್ತದೆ.
ಇ.	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?	ಇಂತಹ ಪ್ರಕರಣಗಳಲ್ಲಿ ಅನುಭವ ಹೊಂದಿರುವ ಸರ್ವೆ ನಂಬರಿನ ವಿಸ್ತೀರ್ಣ ಹಾಗೂ ಮಂಜೂರಾಗಿರುವ ಸರ್ವೆ ನಂಬರಿನ ವಿಸ್ತೀರ್ಣಕ್ಕೆ ತಾಳೆ ಇರುವುದಿಲ್ಲ. ಈ ಸಂಬಂಧ ಮೂಲ ಮಂಜೂರಾತಿ ಕಡತಗಳನ್ನು ಪಡೆದು ನೈಜತೆ ಪರಿಶೀಲಿಸಿ ಸ್ವಾಧೀನತೆ ಖಚಿತಪಡಿಸಿಕೊಂಡು ಖಾತೆ ಬದಲಾವಣೆಗೆ ಕ್ರಮವಹಿಸಲಾಗುತ್ತಿದೆ.

ಸಂಖ್ಯೆ:ಆರ್‌ಡಿ 118 ಟಿಆರ್‌ಎಂ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **171**
ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ
(ಕಿತ್ತೂರು ವಿಧಾನ ಸಭೆಯಿಂದ ಚುನಾಯಿತರು)
ಉತ್ತರಿಸಬೇಕಾದ ದಿನಾಂಕ : 07.12.2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಕ್ರ. ಸಂ	ಚುಕ್ಕೆ ಗುರುತಿಲ್ಲದ ಪ್ರಶ್ನೆ	ಉತ್ತರ
ಅ	2019-20ನೇ ಹಾಗೂ 2020-21ನೇ ಸಾಲಿನಲ್ಲಿ ಭೀಕರ ಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ ಬೆಳೆ ನಷ್ಟಕ್ಕೆ ಪರಿಹಾರ ವಿತರಿಸಲಾಗಿದೆಯೇ; (ಕಿತ್ತೂರು ವಿಧಾನಸಭಾ ಕ್ಷೇತ್ರದ ರೈತರ ಪಟ್ಟಿ ನೀಡುವುದು)	ಭೀಕರ ಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ ಬೆಳೆ ನಷ್ಟಕ್ಕೆ ಸಂಬಂಧಿಸಿದಂತೆ 2019-20 ನೇ ಸಾಲಿನಲ್ಲಿ ಜಿಲ್ಲೆಯ ಒಟ್ಟು 156424 ರೈತರಿಗೆ ರೂ.263.71 ಕೋಟಿ ಹಾಗೂ 2020-21 ನೇ ಸಾಲಿನಲ್ಲಿ ಒಟ್ಟು 31140 ರೈತರಗೆ ರೂ.20.14 ಕೋಟಿ ಪರಿಹಾರವನ್ನು ಪರಿಹಾರ ತಂತ್ರಾಂಶದ ಮೂಲಕ ರೈತರ ಬ್ಯಾಂಕ್ ಖಾತೆಗಳಿಗೆ ಸಂದಾಯ ಮಾಡಲಾಗಿದೆ. ಭೀಕರ ಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ ಬೆಳೆ ನಷ್ಟಕ್ಕೆ ಸಂಬಂಧಿಸಿದಂತೆ 2019-20 ನೇ ಸಾಲಿನಲ್ಲಿ ಕಿತ್ತೂರು ವಿಧಾನಸಭಾ ಕ್ಷೇತ್ರದ, ಕಿತ್ತೂರು ತಾಲ್ಲೂಕಿನ 2186 ರೈತರು, ಬೈಲಹೊಂಗಲ ತಾಲ್ಲೂಕಿನ 21295 ರೈತರ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ದಾಖಲಿಸಲಾಗಿರುತ್ತದೆ. (ಫಲಾನುಭವಿಗಳ ವಿವರಗಳು http://parihara.karnataka.gov.in/Pariharahome/ ವೆಬ್‌ಸೈಟ್ ನಲ್ಲಿ ಲಭ್ಯವಿದೆ)
ಆ	2019-20ನೇ ಸಾಲಿನ ಬೆಳೆ ಪರಿಹಾರ ಕಿತ್ತೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕಿನ ಕೆಲ ರೈತರ ಬ್ಯಾಂಕ್ ಖಾತೆಗಳಿಗೆ ಜಮಾ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಬೆಳೆ ಪರಿಹಾರ ಜಮಾ ಆಗದಿರುವ ರೈತರ ಪಟ್ಟಿ ನೀಡುವುದು)	2019-20 ನೇ ಸಾಲಿನ ಬೆಳೆ ಹಾನಿ ಪರಿಹಾರಕ್ಕೆ ಸಂಬಂಧಿಸಿದಂತೆ ಹಾನಿಯಾದ ರೈತರ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ದಾಖಲಿಸಿದ್ದು, ಸದರಿ ತಂತ್ರಾಂಶದಿಂದ ನೇರವಾಗಿ ಪರಿಹಾರ ರೈತರ ಬ್ಯಾಂಕ್ ಖಾತೆಗಳಿಗೆ ಜಮಾ ಆಗುತ್ತದೆ. ಪ್ರಸ್ತುತ ಕಿತ್ತೂರು ವಿಧಾನಸಭಾ ಕ್ಷೇತ್ರದ ಕಿತ್ತೂರು ಹಾಗೂ ಬೈಲಹೊಂಗಲ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಯಾವುದೇ ಪರಿಹಾರ ಬಾಕಿ ಇರುವುದಿಲ್ಲ.
ಇ	ಬಂದಿದ್ದಲ್ಲಿ, ಈ ಬೆಳೆ ಪರಿಹಾರ ಜಮಾ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಉದ್ಭವಿಸುವುದಿಲ್ಲ

ಕಂಇ 598 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

<u>ಕರ್ನಾಟಕ ವಿಧಾನಸಭೆ</u>

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 180

2. ಸದಸ್ಯರ ಹೆಸರು : ಶ್ರೀ ತುಕಾರಾಮ್ ಈ (ಸಂಡೂರು)

3. ಉತ್ತರಿಸುವ ದಿನಾಂಕ : 07.12.2020

4. ಉತ್ತರಿಸುವ ಸಚಿವರು : ಕಂದಾಯ ಸಚಿವರು

	ಪ್ರಶ್ನೆ	ಉತ್ತರ
(ಅ)	ಸಂಡೂರು ತಾಲ್ಲೂಕಿಗೆ ಸೇರ್ಪಡೆಯಾದ 14 ಇನಾಂ ಗ್ರಾಮಗಳಲ್ಲಿನ ಸಾಗುವಳಿಗಾರರಿಗೆ ಅಕ್ರಮ-ಸಕ್ರಮ ಯೋಜನೆಯ ಅಡಿಯಲ್ಲಿ ಪಟ್ಟಾ ನೀಡಲು ಅನುವಾಗುವಂತೆ ಸಂಡೂರು ಇನಾಂ ರದ್ದತಿ, ರದ್ದತಿ ಕಾಯ್ದೆ ಮತ್ತು ಭೂ ಕಂದಾಯ ಕಾಯ್ದೆ ಹಾಗೂ ಭೂ ಸುಧಾರಣೆ ಕಾಯ್ದೆಗಳಿಗೆ ವಿಶೇಷ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇನಾಂ ಜಮೀನುಗಳ ಮರು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಲು ಕಾಲಾವಧಿ ವಿಸ್ತರಿಸುವ ಕುರಿತು ಪರಿಶೀಲಿಸಿ ವರದಿ ನೀಡಲು ಶ್ರೀ ಪಿ.ಎಸ್.ವಸ್ತ್ರದ್, ನಿವೃತ್ತ ಐ.ಎ.ಎಸ್. ಅಧಿಕಾರಿ ಇವರ ಅಧ್ಯಕ್ಷತೆಯಲ್ಲಿ ಇತರೆ ಮೂವರು ಸದಸ್ಯರನ್ನೊಳಗೊಂಡ ಸಮಿತಿಯೊಂದನ್ನು ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 02 ಐಎನ್‌ಎಂ 2019, ದಿನಾಂಕ: 04.11.2019ರಲ್ಲಿ ರಚಿಸಲಾಗಿದೆ. ಈ ಸಮಿತಿಯು ವರದಿ ಸಲ್ಲಿಸಿದ ನಂತರ ಪರಿಶೀಲಿಸಿ ಕ್ರಮವಹಿಸಲಾಗುವುದು.
(ಆ)	ಹಾಗಿದ್ದಲ್ಲಿ, ಯಾವಾಗ ಜಾರಿಗೆ ತರಲಾಗುವುದು?	ಉದ್ಭವಿಸುವುದಿಲ್ಲ.

ಸಂಖ್ಯೆ: ಆರ್‌ಡಿ 12 ಎಲ್‌ಆರ್‌ಎಸ್ 2020

(ಆರ್.ಅಶೋಕ)
ಮಾನ್ಯ ಕಂದಾಯ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	185
ಸದಸ್ಯರ ಹೆಸರು:	ಶ್ರೀ ಆಚಾರ ಹಾಲಪ್ಪ ಬಸಪ್ಪ (ಯಲಬುರ್ಗ)
ಉತ್ತರಿಸಬೇಕಾದ ದಿನಾಂಕ:	07.12.2020
ಉತ್ತರಿಸುವ ಸಚಿವರು:	ಕಂದಾಯ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲ್ಯಾಣ ಕರ್ನಾಟಕ ಭಾಗದ ವಿಭಾಗ ಮಟ್ಟದಲ್ಲಿ ಸರಕಾರಿ ನೌಕರರ ಶೇ. 80 ರಷ್ಟು ಪದೋನ್ನತಿಯಿಂದ ಮುಂಬಡ್ತಿಯಲ್ಲಿ ಅನ್ಯಾಯವಾಗುತ್ತಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ?</td><td>ಬಂದಿದೆ.
ಪ್ರಶ್ನೆ ಸಂಖ್ಯೆ (ಇ)ಗೆ ಉತ್ತರಿಸಿರುವ ಅಂಕಿ ಸಂಖ್ಯೆಗಳ ಅನುಸಾರ ಕಲ್ಯಾಣ ಕರ್ನಾಟಕದಲ್ಲಿ ಸಿ ಮತ್ತು ಡಿ ಗುಂಪಿನ ಹುದ್ದೆಗಳಲ್ಲಿ ಹೆಚ್ಚಾಗಿ ಕಲ್ಯಾಣ ಕರ್ನಾಟಕ ಭಾಗದ ನೌಕರರೇ ಇದ್ದು, ಜೇಷ್ಠತೆಯಲ್ಲಿ ಹಿರಿಯರಾದ ಸದರಿ ನೌಕರರು ಪದೋನ್ನತಿ ಪಡೆಯುವುದರಿಂದ ವಂಚಿತರಾಗಿರುತ್ತಾರೆ. ಜೇಷ್ಠತೆಯಲ್ಲಿ ಕಿರಿಯರಿದ್ದರು ಸಹ ಇತರೆ ಅಂದರೆ ಸ್ಥಳಿಯೇತರ ವೃಂದದ ನೌಕರರಿಗೆ ಅತೀ ಶೀಘ್ರದಲ್ಲಿ ಪದೋನ್ನತಿ ದೊರಕುತ್ತಿದೆ.</td></tr>
<tr><td>ಆ)</td><td>ರಾಜ್ಯದಲ್ಲಿ ಸರಕಾರಿ ನೌಕರರಿಗೆ ಜಿಲ್ಲಾ ಮಟ್ಟದಲ್ಲಿ ಹಾಗೂ ಪ್ರಾದೇಶಿಕ ಮಟ್ಟದಲ್ಲಿ ಪದೋನ್ನತಿಯಲ್ಲಿ ಕಲ್ಯಾಣ ಕರ್ನಾಟಕ ಭಾಗದವರನ್ನು ಹೊರತುಪಡಿಸಿ ಇತರೆ ವಿಭಾಗಗಳಲ್ಲಿ ನೀಡುತ್ತಿರುವ ಮೀಸಲಾತಿ ಪ್ರಮಾಣ ಎಷ್ಟು; (ವಿವರ ನೀಡುವುದು)</td><td>ಕಲ್ಯಾಣ ಕರ್ನಾಟಕ ಹೊರತುಪಡಿಸಿ ಇತರೆ ವಿಭಾಗಗಳಲ್ಲಿ ಯಾವುದೇ ಮೀಸಲಾತಿ ಇರುವುದಿಲ್ಲ. ಮುಂದುವರೆದು ರಾಜ್ಯ ಮಟ್ಟದ ಹಾಗೂ ಬೆಂಗಳೂರು ಮಹಾನಗರ ವ್ಯಾಪ್ತಿಯಡಿ ಬರುವ ಕಛೇರಿಗಳಲ್ಲಿ ಕಲ್ಯಾಣ ಕರ್ನಾಟಕದ ನೌಕರರ ಸಲುವಾಗಿ ಶೇ.8 ರಷ್ಟು ಮೀಸಲಾತಿಯನ್ನು ನಿಗಧಿಪಡಿಸಲಾಗಿದೆ.</td></tr>
<tr><td>ಇ)</td><td>ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸರಕಾರಿ ನೌಕರರ ಪದೋನ್ನತಿಯಲ್ಲಿ ಇತರೆ ವೃಂದದಲ್ಲಿ ಈಗಾಗಲೇ ಪದೋನ್ನತಿಯನ್ನು ಪಡೆದ ನೌಕರರ ಸಂಖ್ಯೆ ಎಷ್ಟು; ಜೇಷ್ಠತಾ ಪಟ್ಟಿಯನುಸಾರ ಇವರಿಗಿಂತಲೂ ಮೇಲಿರುವ ಹಾಗೂ ಪದೋನ್ನತಿಯಿಂದ ವಂಚಿತರಾಗಿರುವ ಹಿರಿಯ ನೌಕರರ ಸಂಖ್ಯೆ ಎಷ್ಟು?</td><td>
<table>
<tr><th>ಕ್ರ.ಸಂ</th><th>ಜಿಲ್ಲೆ</th><th>ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸರಕಾರಿ ನೌಕರರ ಪದೋನ್ನತಿ ಯಲ್ಲಿ ಇತರೆ ವೃಂದ ದಲ್ಲಿ ಈಗಾಗಲೇ ಪದೋನ್ನತಿಯನ್ನು ಪಡೆದ ನೌಕರರ ಸಂಖ್ಯೆ</th><th>ಜೇಷ್ಠತಾ ಪಟ್ಟಿಯ ನುಸಾರ ಇವರಿ ಗಿಂತಲೂ ಮೇಲಿ ರುವ ಹಾಗೂ ಪದೋನ್ನತಿಯಿಂದ ವಂಚಿತರಾಗಿರುವ ಹಿರಿಯ ನೌಕರರ ಸಂಖ್ಯೆ ಎಷ್ಟು?</th></tr>
<tr><td>1.</td><td>ಪ್ರಾದೇಶಿಕ ಆಯುಕ್ತರ ಕಛೇರಿ</td><td>04</td><td>121</td></tr>
<tr><td>1</td><td>ಬೀದರ</td><td>08</td><td>75</td></tr>
<tr><td>2</td><td>ಕಲಬುರಗಿ</td><td>11</td><td>96</td></tr>
<tr><td>3</td><td>ಯಾದಗಿರಿ</td><td>12</td><td>14</td></tr>
<tr><td>4</td><td>ರಾಯಚೂರು</td><td>11</td><td>166</td></tr>
<tr><td>5</td><td>ಕೊಪ್ಪಳ</td><td>11</td><td>44</td></tr>
<tr><td>6</td><td>ಬಳ್ಳಾರಿ</td><td>09</td><td>03</td></tr>
<tr><td colspan="2">ವಿಭಾಗದ ಒಟ್ಟು</td><td>66</td><td>519</td></tr>
</table>
</td></tr>
<tr><td>ಈ)</td><td>ಇದರಿಂದಾಗಿ ಸರಕಾರಿ ನೌಕರರು ತಮಗಿಂತ ಕಿರಿಯ ಸ್ಥಳಿಯೇತರ (ಕಲ್ಯಾಣ ಕರ್ನಾಟಕ ಭಾಗದವರನ್ನು ಹೊರತುಪಡಿಸಿ) ನೌಕರರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುವ ಅನಿವಾರ್ಯತೆ ಸೃಷ್ಟಿಯಾಗಿದ್ದು, ಜೇಷ್ಠತೆಯಲ್ಲಿ ತಮಗಿಂತ ಕಿರಿಯ ನೌಕರರ ಅಧೀನದಲ್ಲಿ ಕಾರ್ಯನಿರ್ವಹಣೆ ಮಾಡುವುದು ಅವರ ಕಾರ್ಯಕ್ಷಮತೆ ಮೇಲೆ ಪರಿಣಾಮ ಬಿರುತ್ತಿದ್ದು, ಈ ಅಸಮತೋಲನವನ್ನು ಸರಿದೂಗಿಸಲು ಸರಕಾರ ರೂಪಿಸಿರುವ ಯೋಜನೆಗಳಾವುವು?</td><td>ಇದೊಂದು ಪಾಲಿಸಿ ನಿರ್ಣಯವಾಗಿರುತ್ತದೆ.</td></tr>
</table>

ಸಂಖ್ಯೆ: ಕಂಇ 38 ವಿಮಕ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 189
ಸದಸ್ಯರ ಹೆಸರು : ಶ್ರೀ ನಂಜೇಗೌಡ ಕೆ.ವೈ. (ಮಾಲೂರು)
ಉತ್ತರಿಸುವ ದಿನಾಂಕ : 07-12-2020
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಮಾಲೂರು ವಿಧಾನಸಭಾ ಕ್ಷೇತ್ರದಲ್ಲಿ 94ಸಿಸಿ ಅಡಿಯಲ್ಲಿ ಸಲ್ಲಿಸಲಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಗ್ರಾಮವಾರು/ಪ್ರದೇಶವಾರು ಅರ್ಜಿಗಳ ವಿವರ ನೀಡುವುದು)	ಮಾಲೂರು ವಿಧಾನಸಭಾ ಕ್ಷೇತ್ರದಲ್ಲಿ 94ಸಿಸಿ ಅಡಿಯಲ್ಲಿ ಸಲ್ಲಿಸಲಾಗಿರುವ ಒಟ್ಟು ಅರ್ಜಿಗಳ ಸಂಖ್ಯೆ: 31 ವಿವರವನ್ನು ಅನುಬಂಧ-1 ರಲ್ಲಿರಿಸಿದೆ.
ಆ)	ಈ ಪೈಕಿ ಇತ್ಯರ್ಥಪಡಿಸಲಾಗಿರುವ ಹಾಗೂ ಬಾಕಿ ಉಳಿದಿರುವ ಅರ್ಜಿಗಳೆಷ್ಟು;(ವಿವರ ನೀಡುವುದು)	ಈ ಪೈಕಿ ಅರ್ಹ 15 ಅರ್ಜಿಗಳಿಗೆ ಮಂಜೂರಾತಿ ನೀಡಿ ಹಕ್ಕುಪತ್ರ ನೀಡಲಾಗಿರುತ್ತದೆ. ಉಳಿಕೆ 16 ಅರ್ಜಿಗಳು ತಿರಸ್ಕೃತಗೊಂಡಿರುತ್ತವೆ.
ಇ)	ಇತ್ಯರ್ಥವಾಗದೇ ಬಾಕಿ ಉಳಿಯಲು ಕಾರಣಗಳೇನು ಹಾಗೂ ಯಾವ ಹಂತದಲ್ಲಿ ಬಾಕಿ ಉಳಿದಿರುತ್ತವೆ;(ವಿವರ ನೀಡುವುದು)	ಉದ್ಭವಿಸುವುದಿಲ್ಲ
ಈ)	ಯಾವ ಕಾಲಮಿತಿಯೊಳಗೆ ಸದರಿ ಅಜಿಗಳನ್ನು ಇತ್ಯರ್ಥಪಡಿಸಲಾಗುವುದು?	ಉದ್ಭವಿಸುವುದಿಲ್ಲ

ಸಂಖ್ಯೆ: ಆರ್‌ಡಿ 159 ಎಲ್‌ಜಿಕ್ಯೂ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	196
ಸದಸ್ಯರ ಹೆಸರು	:	ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)
ಉತ್ತರಿಸುವ ದಿನಾಂಕ	:	07.12.2020.
ಉತ್ತರಿಸುವ ಸಚಿವರು	:	ಉಪಮುಖ್ಯಮಂತ್ರಿ ಲೋಕೋಪಯೋಗಿ ಇಲಾಖೆ

ಕ್ರ ಸಂ:	ಪ್ರಶ್ನೆಗಳು		ಉತ್ತರಗಳು
ಅ)	ಯಾದಗಿರಿ ವಿದಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಯಾದಗಿರಿಯಿಂದ ವಡಗೇರಾ ಕ್ರಾಸ್‌ನ ಭಿಮಾನದಿಯ ಮೇಲಿನ ರಸ್ತೆಯು ಪ್ರವಾಹದಿಂದ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	:	ಹೌದು, ಬಂದಿದೆ.
ಆ)	ಬಂದಿದ್ದಲ್ಲಿ, ಸೇತುವೆ ಮತ್ತು ರಸ್ತೆ ನಿರ್ಮಾಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	:	2019-20ನೇ ಸಾಲಿನ ರಾಜ್ಯ ಹೆದ್ದಾರಿ ನಿರ್ವಹಣೆ ಯೋಜನೆಯಡಿಯಲ್ಲಿ ಸದರಿ ರಸ್ತೆಗಾಗಿ ರೂ.8.32 ಲಕ್ಷಗಳ ಅನುದಾನವನ್ನು ಒದಗಿಸಲಾಗಿ ರುತ್ತದೆ. ಮತ್ತು 2020-21ನೇ ಸಾಲಿನ ಅತಿವೃಷ್ಠಿ ಹಾಗೂ ನೆರೆಹಾವಳಿ ಅನುದಾನದಲ್ಲಿ ಯಾದಗಿರಿ ವಿಭಾಗಕ್ಕೆ ರೂ.6.00 ಕೋಟಿಗಳನ್ನು ಮೊದಲನೇ ಕಂತಿನಲ್ಲಿ ಹಾಗೂ 2ನೇ ಕಂತಿನಲ್ಲಿ ರೂ.8.00 ಕೋಟಿಗಳ ಅನುದಾನವನ್ನು ನೀಡಲಾಗಿದ್ದು, ಇದರಲ್ಲಿ ಒಟ್ಟು ರೂ.5.42 ಕೋಟಿ ಅನುದಾನ ಯಾದಗಿರಿ ವಿಧಾನಸಭಾ ಕ್ಷೇತ್ರಕ್ಕೆ ನೀಡಲಾಗಿದೆ. ಸದರಿ ಸೇತುವೆ ದುರಸ್ತಿ ಕಾಮಗಾರಿಗೆ ಒಟ್ಟು ರೂ.2.00 ಕೋಟಿ ಮೊತ್ತದ ಕಾಮಗಾರಿಯನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಲಾಗಿದೆ. ಅದರಂತೆ ಕಾಮಗಾರಿಯನ್ನು ಅನುಷ್ಠಾನಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಲಾಗುವುದು.

ಕಡತ ಸಂಖ್ಯೆ: ಲೋಇ 175 ಸಿಐಎಸ್ 2020 (ಇ)

(ಗೋವಿಂದ.ಎಂ.ಕಾರಜೋಳ)
ಉಪಮುಖ್ಯಮಂತ್ರಿ
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	197
ವಿಧಾನ ಸಭೆ ಸದಸ್ಯರ ಹೆಸರು	ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)
ಉತ್ತರಿಸಬೇಕಾದ ದಿನಾಂಕ	07.12.2020
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಯಾದಗಿರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಡಗೇರಾ ಹೊಸ ತಾಲ್ಲೂಕು ಗ್ರಾಮಗಳಾಗಿ ಗುಂಡಗುರ್ತಿ, 2 ಗೋನಾಳ ಮತ್ತು ಶಿವಪೂರ ಗ್ರಾಮಗಳು ಮರು ಸರ್ವೆ ಯಾಗಿದ್ದರೂ, ಸರ್ವೆ ಭೂದಾಖಲಾತಿ ಗಳನ್ನು ಇಲ್ಲಿಯವರೆಗೂ ಸರಿಪಡಿಸಿಲ್ಲ ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ (ವಡಗೇರಾ) ಶಿವಪೂರ, ಗೋನಾಳ ಮತ್ತು ಗುಂಡಗುರ್ತಿ ಗ್ರಾಮಗಳಲ್ಲಿ ರೈತರ ಜಮೀನುಗಳ ಅನುಭವದಂತೆ ಸರ್ವೆ ನಂಬರು ಮತ್ತು ವಿಸ್ತೀರ್ಣ, ಪಹಣಿಯಲ್ಲಿನ ಸರ್ವೆ ನಂಬರು ಮತ್ತು ವಿಸ್ತೀರ್ಣಕ್ಕೂ ವ್ಯತ್ಯಾಸವಿರುವ ಕಾರಣ ಸ್ಥಳ ಪರಿಶೀಲನೆ ಮಾಡಿ ವ್ಯತ್ಯಾಸದ ಕುರಿತು ಮಾಹಿತಿ ಸಲ್ಲಿಸಲು ಸೂಚಿಸಲಾಗಿದೆ. ಸದರಿ ಗ್ರಾಮಗಳಲ್ಲಿಯ ರೈತರ ಜಮೀನುಗಳ ಪಹಣಿ ಮತ್ತು ಅನುಭವದ ಸರ್ವೆ ನಂಬರು, ವಿಸ್ತೀರ್ಣದಲ್ಲಿ ವ್ಯತ್ಯಾಸವಿರುವ ಕುರಿತು ಸ್ಥಳ ಪರಿಶೀಲನೆ ಮಾಡಿ ವ್ಯತ್ಯಾಸ ತಖ್ತೆ ತಯಾರಿಸುವ ಕಾರ್ಯ ಪ್ರಗತಿಯಲ್ಲಿದ್ದು, ಜಿಲ್ಲಾಡಳಿತದಿಂದ ಮಾಹಿತಿಯ ನಿರೀಕ್ಷೆಯಲ್ಲಿದೆ.

ಸಂಖ್ಯೆ: ಕಂಇ/166/ಎಸ್ಎಸ್ಸಿ/2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	198
ಸದಸ್ಯರ ಹೆಸರು	ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)
ಉತ್ತರಿಸಬೇಕಾದ ದಿನಾಂಕ	07.12.2020
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಯಾದಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಡಗೇರಾ ಹೊಸ ತಾಲ್ಲೂಕು ರಚನೆಯಾಗಿ ವರ್ಷಗಳು ಕಳೆದಿದ್ದರೂ, ಇಲ್ಲಿಯವರೆಗೂ ತಾಲ್ಲೂಕು ಕಛೇರಿಗಳು ಪೂರ್ಣ ಪ್ರಮಾಣದ ಎಲ್ಲಾ ಇಲಾಖೆಗಳ ಕಛೇರಿಗಳು ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೊಸ ತಾಲ್ಲೂಕುಗಳಲ್ಲಿ ಕಂದಾಯ ಇಲಾಖೆ ವತಿಯಿಂದ ಹೊಸ ತಾಲ್ಲೂಕು ಕಚೇರಿಯನ್ನು ತೆರೆಯಲು ಹಾಗೂ ಇತರೆ ಇಲಾಖೆಗಳ ತಾಲ್ಲೂಕು ಮಟ್ಟದ ಕಚೇರಿಗಳನ್ನು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹಂತ ಹಂತವಾಗಿ ತೆರೆಯಲು ಸರ್ಕಾರದ ದಿನಾಂಕ:06-09-2017 ರ ಆದೇಶದಲ್ಲಿ ಅನುಮತಿ ನೀಡಲಾಗಿದೆ. ಪ್ರಸ್ತುತ, ಯಾದಗಿರಿ ಜಿಲ್ಲೆಯಲ್ಲಿ ಹೊಸದಾಗಿ ರಚನೆಯಾಗಿರುವ ವಡಗೇರಾ ತಾಲ್ಲೂಕಿನಲ್ಲಿ ಕೆಳಕಂಡ ಕಚೇರಿಗಳು ಪ್ರಾರಂಭವಾಗಿವೆ; 1) ತಹಸೀಲ್ದಾರ್ ರವರ ಕಚೇರಿ, 2) ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ, ತಾಲ್ಲೂಕು ಪಂಚಾಯತಿ 3) ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ 4) ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ 5) ಸಹಾಯಕ ನಿರ್ದೇಶಕರ ಕಚೇರಿ, ಕೃಷಿ ಇಲಾಖೆ 6) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ
ಆ)	ಬಂದಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮಗಳೇನು?	ನೂತನ ತಾಲ್ಲೂಕುಗಳಲ್ಲಿ ಪ್ರಮುಖ ಇಲಾಖೆಗಳ ತಾಲ್ಲೂಕು ಮಟ್ಟದ ಕಚೇರಿಗಳನ್ನು ಪ್ರಾರಂಭಿಸಲು ಸಂಬಂಧಪಟ್ಟ ಸಚಿವಾಲಯದ ಇಲಾಖೆಗಳ ಮುಖ್ಯಸ್ಥರೊಂದಿಗೆ ಈ ಹಿಂದೆ ಸಭೆ ನಡೆಸಿ ಹೊಸ ತಾಲ್ಲೂಕುಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಚೇರಿ ಪ್ರಾರಂಭಿಸಲು ಅನುವಾಗುವಂತೆ ತುರ್ತು ಕ್ರಮ ವಹಿಸಲು ಹಾಗೂ ಹುದ್ದೆಗಳನ್ನು ಸೃಜಿಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ.

ಸಂಖ್ಯೆ: ಕಂಇ/35/ಎಲ್ಆರ್‌ಡಿ/2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 200
ಸದಸ್ಯರ ಹೆಸರು : ಶ್ರೀ ಈಶ್ವರ್ ಖಂಡ್ರೆ. (ಭಾಲ್ಕಿ)
ಉತ್ತರಿಸುವ ಸಚಿವರು : ಕಂದಾಯ ಸಚಿವರು
ಉತ್ತರಿಸುವ ದಿನಾಂಕ : 07.12.2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲಾಧಿಕಾರಿಗಳ (ದುರ್ಗದರ್ಶಿನಿ) ಬಂಗ್ಲೋ ಏರಿಯಾ ಪುರಾತತ್ವ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಆ ಇಲಾಖೆಯ ಪರವಾನಿಗಿ ಇಲ್ಲದೆ ಹಾಗೂ ಸರ್ಕಾರದ ಪರವಾನಿಗಿ ಇಲ್ಲದೆ ಕಟ್ಟಡ ಸುಸ್ಥಿತಿಯಲ್ಲಿದ್ದರೂ ಬಂಗ್ಲೋವನ್ನು ಅಕ್ರಮವಾಗಿ ನೆಲಸಮ ಮಾಡಲಾಗಿದೆಯೇ;	ಇಲ್ಲ
ಆ)	ಬೀದರ್ ಜಿಲ್ಲಾಧಿಕಾರಿಯವರ ಹೊಸ ಬಂಗ್ಲೋ ನಿರ್ಮಾಣಕ್ಕೆ ಯಾವುದೇ ಪರವಾನಿಗಿ ಇಲ್ಲದೆ ಟೆಂಡರ್ ಕರೆಯದೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ(ವಿವರ ನೀಡುವುದು)	ಬೀದರ್ ಜಿಲ್ಲಾಧಿಕಾರಿಯವರ ಹೊಸ ಬಂಗ್ಲೋ ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿಯಲ್ಲಿ ರೂ.2.00 ಕೋಟಿಗಳವರೆಗೆ ಯಾವುದೇ ಟೆಂಡರ್ ಕರೆಯದೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಅವಕಾಶವಿದೆ. ಅದರಂತೆ, ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಇವರ ಗೃಹ ಕಚೇರಿ ನಿರ್ಮಾಣವನ್ನು ನಿರ್ಮಿತಿ ಕೇಂದ್ರದಿಂದ ನಿರ್ವಹಿಸಲಾಗಿದೆ.
ಇ)	ಹಾಗಿದ್ದಲ್ಲಿ, ಈ ಬಗ್ಗೆ ತನಿಖೆಗೆ ಆದೇಶಿಸಿ, ಅಕ್ರಮದಲ್ಲಿ ಭಾಗಿಯಾದವರ ವಿರುದ್ಧ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?	ಉದ್ಭವಿಸುವುದಿಲ್ಲ.

ಕಂಇ 115 ಡಬ್ಲ್ಯೂಬಿಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

15ನೇ ವಿಧಾನಸಭೆ

8ನೇ ಅಧಿವೇಶನ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 203

ಸದಸ್ಯರ ಹೆಸರು : **ಶ್ರೀ ಸಂಜೀವ ಮಠಂದೂರ್ (ಪುತ್ತೂರು)**

ಉತ್ತರಿಸುವ ದಿನಾಂಕ : 07-12-2020

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಲೋಕೋಪಯೋಗಿ ಇಲಾಖೆಯಿಂದ ಈಗಾಗಲೇ ಮೇಲ್ದರ್ಜೆಗೇರಿಸಿದ ಗ್ರಾಮೀಣ ರಸ್ತೆಗಳ ನಿರ್ವಹಣೆ ಹಾಗೂ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ನೀಡಲಾಗಿದೆಯೇ;	ಲೋಕೋಪಯೋಗಿ ಇಲಾಖೆಯಿಂದ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಸೆಪ್ಟಂಬರ್ 2020ರ ಮಾಹೆಯಲ್ಲಿ ಮೇಲ್ದರ್ಜೆಗೇರಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಸದರಿ ರಸ್ತೆಗಳನ್ನು ಪ್ರಸಕ್ತ ಸಾಲಿಗೆ ಗಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದಲೇ ನಿರ್ವಹಣೆ ಕಾಮಗಾರಿಗಳನ್ನು ಕೈಗೊಂಡು ನಂತರ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲು ಸೂಚಿಸಲಾಗಿರುತ್ತದೆ. 2021-22ನೇ ಸಾಲಿಗೆ ಸದರಿ ರಸ್ತೆಗಳಿಗೆ ಅನುದಾನ ಒದಗಿಸುವ ಕ್ರಮ ಕೈಗೊಳ್ಳಲಾಗುವುದು.
ಆ)	ಹಾಗಿದ್ದಲ್ಲಿ, ಪುತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮೇಲ್ದರ್ಜೆಗೇರಿಸಿದ ರಸ್ತೆಗಳ ನಿರ್ವಹಣೆ ಹಾಗೂ ಅಭಿವೃದ್ಧಿಗೆ ಸರ್ಕಾರದಿಂದ ಇಲ್ಲಿಯವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ? (ಕಳೆದ ಮೂರು ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು)	

ಸಂ:ಲೋಇ/799/ಐಎಫ್ಎ/2020 (ಇ-ಕಛೇರಿ)

(ಗೋವಿಂದ ಎಂ. ಕಾರಜೋಳ)
ಉಪಮುಖ್ಯಮಂತ್ರಿಗಳು ಹಾಗೂ
ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	205
2	ಸದಸ್ಯರ ಹೆಸರು	ಶ್ರೀ ಸಂಜೀವ ಮಠಂದೂರ್ (ಪುತ್ತೂರು)
3	ಉತ್ತರಿಸಬೇಕಾದ ದಿನಾಂಕ	07.12.2020
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಹೋಬಳಿಯ ನಾಡಕಛೇರಿ ಕಟ್ಟಡ ಶಿಥಿಲಾವಸ್ಥೆಯಲ್ಲಿದ್ದು, ಸರ್ಕಾರದ ದೈನಂದಿನ ಕೆಲಸ ಕಾರ್ಯಗಳ ನಿರ್ವಹಣೆಗೆ ಕಷ್ಟವಾಗಿರುವುದರಿಂದ ನೂತನ ನಾಡಕಛೇರಿ ಕಟ್ಟಡವನ್ನು ನಿರ್ಮಾಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;	ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಹೋಬಳಿಯ ನಾಡಕಛೇರಿಯ ಕಟ್ಟಡ ಅತ್ಯಂತ ಶಿಥಿಲಾವಸ್ಥೆಯಲ್ಲಿರುವ ಕಾರಣ, ಸದರಿ ನಾಡಕಛೇರಿಯನ್ನು ಉಪ್ಪಿನಂಗಡಿ ಗ್ರಾಮಪಂಚಾಯಿತಿ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದ್ದು, ಸುಮಾರು ಒಂದುವರೆ ವರ್ಷಗಳಿಂದ ಗ್ರಾಮಪಂಚಾಯಿತಿ ಕಟ್ಟಡದಲ್ಲಿಯೇ ನಾಡಕಛೇರಿಯ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ಉಪ್ಪಿನಂಗಡಿ ನಾಡಕಛೇರಿಗೆ ಹೊಸ ಕಟ್ಟಡ ನಿರ್ಮಾಣಕ್ಕಾಗಿ ಜಿಲ್ಲಾಧಿಕಾರಿಗಳಿಂದ ಕೋರಿಕೆ ಇರುತ್ತದೆ. ಅನುದಾನದ ಲಭ್ಯತೆಯನ್ನು ಆಧರಿಸಿ ಪರಿಶೀಲಿಸಲಾಗುವುದು.
ಆ)	ತಾಲ್ಲೂಕು ಕೇಂದ್ರಗಳಲ್ಲಿರುವ ಮಿನಿವಿಧಾನಸೌಧದ ವಾರ್ಷಿಕ ನಿರ್ವಹಣೆಗೆ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲಾಗಿದೆಯೇ; ಬಿಡುಗಡೆ ಮಾಡಿದ್ದಲ್ಲಿ, ಇದುವರೆವಿಗೂ ಬಿಡುಗಡೆ ಮಾಡಲಾದ ಅನುದಾನವೆಷ್ಟು?	ತಾಲ್ಲೂಕು ಕೇಂದ್ರಗಳಲ್ಲಿರುವ ಮಿನಿ ವಿಧಾನಸೌಧದ ಕಟ್ಟಡ ವೆಚ್ಚಕ್ಕಾಗಿ (071) ರಡಿ 2020-21ನೇ ಸಾಲಿನಲ್ಲಿ ರೂ.500.00 ಲಕ್ಷಗಳನ್ನು ಒದಗಿಸಲಾಗಿದ್ದು, ಈಗಾಗಲೇ ರೂ.250.00 ಲಕ್ಷಗಳನ್ನು ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ಬಿಡುಗಡೆ ಮಾಡಲಾಗಿದೆ.

ಸಂಖ್ಯೆ: ಕಂಇ 53 ಎಜೆಎಸ್ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	210
ಸದಸ್ಯರ ಹೆಸರು	ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)
ಉತ್ತರಿಸಬೇಕಾದ ದಿನಾಂಕ	07.12.2020
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಜಮಖಂಡಿ ತಾಲ್ಲೂಕಿನ ಸಾವಳಗಿ ಹೋಬಳಿಯನ್ನು ನೂತನ ತಾಲ್ಲೂಕು ಎಂದು ಘೋಷಿಸಲು ಉದ್ದೇಶಿಸಿದೆಯೇ;	ಸಾವಳಗಿ ಹೋಬಳಿಯನ್ನು ನೂತನ ತಾಲ್ಲೂಕು ಎಂದು ಘೋಷಿಸುವ ಕೋರಿಕೆ ಇರುತ್ತದೆ.
ಆ)	ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆಯು ಸರ್ಕಾರದ ಯಾವ ಹಂತದಲ್ಲಿದೆ?	ಆದರೆ ಯಾವುದೇ ಒಂದು ತಾಲ್ಲೂಕನ್ನು ರಚಿಸುವ ಸಂದರ್ಭದಲ್ಲಿ ಅಲ್ಲಿನ ಭೌಗೋಳಿಕ ಸನ್ನಿವೇಶ, ಜನಸಂಖ್ಯೆ, ಹಿಂದುಳಿದಿರುವಿಕೆ, ತಾಲ್ಲೂಕು ರಚನೆಯಿಂದಾಗುವ ಅನುಕೂಲ, ಸಾರ್ವಜನಿಕ ಆಶೋತ್ತರಗಳಿಗೆ ಸ್ಪಂದನೆ, ತಾಲ್ಲೂಕು ಕೇಂದ್ರ ಮತ್ತು ಜಿಲ್ಲಾ ಕೇಂದ್ರಗಳಿಗಿರುವ ದೂರ ಸೇರಿದಂತೆ ಸಾರ್ವಜನಿಕ ಹಿತಾಸಕ್ತಿ ಮತ್ತು ಆಡಳಿತಾತ್ಮಕ ಆಡಳಿತಾತ್ಮಕ ಅಂಶಗಳನ್ನು ಪರಾಮರ್ಶಿಸಲಾಗುತ್ತದೆ. ಇದರ ಜೊತೆಗೆ, ನೂತನ ತಾಲ್ಲೂಕುಗಳನ್ನು ರಚಿಸುವ ವಿಷಯವು ಸರ್ಕಾರದ ನೀತಿಗೆ ಸಂಬಂಧಿಸಿದ್ದಾಗಿದೆ. ಯಾವುದೇ ಒಂದು ಪಟ್ಟಣ / ಪ್ರದೇಶವನ್ನು ತಾಲ್ಲೂಕನ್ನಾಗಿ ರಚಿಸಬೇಕಾದರೆ ಭೌಗೋಳಿಕ ಮತ್ತು ಆಡಳಿತಾತ್ಮಕ ಅಗತ್ಯತೆಗಳ ಜೊತೆಗೆ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ. ಅದರಂತೆ ಹೊಸ ತಾಲ್ಲೂಕುಗಳನ್ನು ರಚಿಸುವ ಪ್ರಸ್ತಾವನೆಗಳು ಹಣಕಾಸಿನ ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಹಣಕಾಸಿನ ಇತಿಮಿತಿಗಳನ್ನು ಒಳಗೊಂಡಿರುತ್ತದೆ. ಪ್ರಸ್ತುತ ಜಮಖಂಡಿ ತಾಲ್ಲೂಕಿನ ಸಾವಳಗಿ ಹೋಬಳಿಯನ್ನು ನೂತನ ತಾಲ್ಲೂಕು ಎಂದು ಘೋಷಿಸಲು ಉದ್ದೇಶಿಸಿರುವುದಿಲ್ಲ.

ಸಂಖ್ಯೆ: ಕಂಇ/34/ಎಲ್ಆರ್‌ಡಿ/2020

(ಆರ್.ಆಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 212
ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)
ಉತ್ತರಿಸುವ ಸಚಿವರು : ಕಂದಾಯ ಸಚಿವರು
ಉತ್ತರಿಸುವ ದಿನಾಂಕ : 07.12.2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಜಮಖಂಡಿ ನಗರದಲ್ಲಿ ನಿರ್ಮಾಣವಾಗಿರುವ ಮಿನಿ ವಿಧಾನಸೌಧ ಕಟ್ಟಡದ 3ನೇ ಹಂತದ ಕಾಮಗಾರಿಗೆ ಯಾವಾಗ ಮಂಜೂರಾತಿ ನೀಡಲಾಗುವುದು.	ಜಮಖಂಡಿ ನಗರದಲ್ಲಿ ನಿರ್ಮಾಣವಾಗಿರುವ ಮಿನಿ ವಿಧಾನ ಸೌಧ ಕಟ್ಟಡದ 3ನೇ ಹಂತದ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ ಸಚಿವ ಸಂಪುಟದ ಸಭೆಯ ಚರ್ಚೆಯ ನಂತರ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ಕಟ್ಟಡದ ಕಾಮಗಾರಿಯನ್ನು ಕೈಗೊಂಡ ಕುರಿತು ತನಿಖೆ ನಡೆಸಿ, ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಜವಾಬ್ದಾರಿ ನಿಹಿತಗೊಳಿಸಿ, ಮರು ಮಂಡಿಸಲು ಸೂಚಿಸಿರುವುದರಿಂದ, ಈ ಬಗ್ಗೆ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ಇವರಿಂದ ವರದಿ ಕೋರಲಾಗಿದ್ದು, ಸದರಿ ವರದಿ ಸ್ವೀಕೃತವಾದ ನಂತರ ಜಮಖಂಡಿ ಮಿನಿ ವಿಧಾನ ಸೌಧ 3ನೇ ಹಂತದ ಕಾಮಗಾರಿಗೆ ಮಂಜೂರಾತಿ ನೀಡುವ ಬಗ್ಗೆ ಕ್ರಮ ವಹಿಸಲಾಗುತ್ತದೆ.
ಆ)	ಜಮಖಂಡಿಯು ಬಾಗಲಕೋಟೆ ಜಿಲ್ಲೆಯ ಅತಿದೊಡ್ಡ "ಸಬ್ ಡಿವಿಜನ್" ಆಗಿರುವುದರಿಂದ ಮಿನಿ ವಿಧಾನಸೌಧ 3ನೇ ಹಂತದ ಕಾಮಗಾರಿಗೆ ಮಂಜೂರಾತಿ ನೀಡುವ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ)	ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುವುದು?	

ಕಂಇ 110 ಡಬ್ಲ್ಯೂಬಿಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ
15ನೇ ವಿಧಾನಸಭೆ
8ನೇ ಅಧಿವೇಶನ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 214

ಸದಸ್ಯರ ಹೆಸರು : **ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ)**

ಉತ್ತರಿಸುವ ದಿನಾಂಕ : 07-12-2020

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ರಾಜ್ಯ ಮತ್ತು ಜಿಲ್ಲಾ / ಇತರೆ ಮುಖ್ಯ ರಸ್ತೆಗಳ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ 5054-ರಸ್ತೆ ಮತ್ತು ಸೇತುವೆ ನಿರ್ಮಾಣ, 3054-ರಸ್ತೆ ಮತ್ತು ಸೇತುವೆ ನಿರ್ಮಾಣ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಹೆದ್ದಾರಿ ಯೋಜನೆ, ಫಾರಂ-ಸಿ ಯೋಜನೆ ಮುಂತಾದ ಯೋಜನೆಗಳ ಅಡಿಯಲ್ಲಿ 2019-20 ಮತ್ತು 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ, ಆರ್ಥಿಕ ಇಲಾಖೆಯ ಅನುಮೋದನೆ ನಿರೀಕ್ಷಣೆ ಮೇರೆಗೆ ಮತ್ತು ಅಪೆಂಡಿಕ್ಸ್-ಇ ಒಳಗೆ ಸೇರಿಸುವ ಷರತ್ತಿಗೆ ಒಳಪಟ್ಟು ಮಂಜೂರು ಮಾಡಿರುವ ಕಾಮಗಾರಿಗಳು ಎಷ್ಟು; ರ ಕಾಮಗಾರಿಗಳ ಅಂದಾಜು ಮೊತ್ತವೆಷ್ಟು (ಕಾಮಗಾರಿವಾರು, ಯೋಜನಾವಾರು ಹಾಗೂ ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ವಿವರ ನೀಡುವುದು);	ಲೋಕೋಪಯೋಗಿ ಇಲಾಖೆಯಿಂದ ಶಿವಮೊಗ್ಗ ಜಿಲ್ಲೆಗೆ ರಾಜ್ಯ ಮತ್ತು ಜಿಲ್ಲಾ / ಇತರೆ ಮುಖ್ಯ ರಸ್ತೆಗಳ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ 5054-ರಸ್ತೆ ಮತ್ತು ಸೇತುವೆ ನಿರ್ಮಾಣ, 3054-ರಸ್ತೆ ಮತ್ತು ಸೇತುವೆ ನಿರ್ಮಾಣ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಹೆದ್ದಾರಿ ಯೋಜನೆ, ಫಾರಂ-ಸಿ ಯೋಜನೆ ಮುಂತಾದ ಯೋಜನೆಗಳ ಅಡಿಯಲ್ಲಿ 2019-20 ಹಾಗೂ 2020-21ನೇ ಸಾಲಿಗೆ ಆರ್ಥಿಕ ಇಲಾಖೆಯ ಅನುಮೋದನೆ ನಿರೀಕ್ಷಣೆ ಮೇರೆಗೆ ಅಪೆಂಡಿಕ್ಸ್-ಇ ಒಳಗೆ ಸೇರಿಸುವ ಷರತ್ತಿಗೆ ಒಳಪಟ್ಟು ಯಾವುದೇ ಕಾಮಗಾರಿಗಳು ಮಂಜೂರು ಮಾಡಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆಯೇ ಮತ್ತು ರ ಕಾಮಗಾರಿಗಳ ಅನುಷ್ಠಾನ ಯಾವ ಹಂತದಲ್ಲಿದೆ (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ವಿವರ ನೀಡುವುದು);	ಉದ್ಭವಿಸುವುದಿಲ್ಲ.
ಇ)	ರ ಮೇಲ್ಕಂಡ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಹಣ ಭರವಸೆ ಪತ್ರಗಳೆಷ್ಟು ಮತ್ತು ಇವುಗಳಲ್ಲಿ ಎಷ್ಟು ತೀರುವಳಿ ಮಾಡಲಾಗಿದೆ (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು);	ಉದ್ಭವಿಸುವುದಿಲ್ಲ.
ಈ)	ಹಣ ಭರವಸೆ ಪತ್ರವನ್ನು ಜೇಷ್ಟತೆ ಆಧಾರದ ಮೇಲೆ ನೀಡಲಾಗಿದೆಯೇ; ಹಾಗಿದ್ದಲ್ಲಿ ಜೇಷ್ಠತೆಯನ್ನು ಪಾಲಿಸದೆ ನೀಡಲಾದ ಹಣವೆಷ್ಟು (ಭರವಸೆ ಪತ್ರಗಳ ವಿಭಾಗವಾರು ಸಂಪೂರ್ಣ ವಿವರ ನೀಡುವುದು)	ಉದ್ಭವಿಸುವುದಿಲ್ಲ.

ಸಂ:ಲೋಇ/788/ಐಎಫ್ಎ/2020 (ಇ-ಕಛೇರಿ)

(ಗೋವಿಂದ ಎಂ. ಕಾರಜೋಳ)
ಉಪಮುಖ್ಯಮಂತ್ರಿಗಳು ಹಾಗೂ
ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	223
ಸದಸ್ಯರ ಹೆಸರು	:	ಶ್ರೀ ರಘುಪತಿ ಭಟ್.ಕೆ (ಉಡುಪಿ)
ಉತ್ತರಿಸುವ ದಿನಾಂಕ	:	07.12.2020
ಉತ್ತರಿಸುವ ಸಚಿವರು	:	ಕಂದಾಯ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಉಡುಪಿ ಜಿಲ್ಲೆಯಲ್ಲಿ ಅಕ್ರಮ-ಸಕ್ರಮ ಕಾನೂನಿನಡಿಯಲ್ಲಿ ಅರಣ್ಯ ಇಲಾಖೆ ಆಕ್ಷೇಪಣೆ ಇರುವ ಪ್ರಕರಣಗಳ ಮಂಜೂರಾತಿಗೆ ಸರ್ಕಾರದ ಮಾನದಂಡಗಳೇನು;</td><td>ಡೀಮ್ಡ್ ಫಾರೆಸ್ಟ್ ವ್ಯಾಪ್ತಿಯಲ್ಲಿ ಬರುವ ಪ್ರಕರಣಗಳನ್ನು ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯಿಂದ ಜಂಟಿಯಾಗಿ ಅಳತೆ ಮಾಡಿ ಡೀಮ್ಡ್ ಫಾರೆಸ್ಟ್ ವ್ಯಾಪ್ತಿಯಿಂದ ಹೊರಗಿದ್ದಲ್ಲಿ ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು ಮಂಜೂರಾತಿಗೆ ಕ್ರಮ ವಹಿಸಲಾಗುತ್ತಿದೆ.</td></tr>
<tr><td>ಆ)</td><td>ಮಂಜೂರಾತಿಗೆ ಸಂಬಂಧಿಸಿದಂತೆ ಬಂದ ಅರ್ಜಿಗಳನ್ನು ತಿರಸ್ಕೃತಗೊಳಿಸಿ ಫಲಾನುಭವಿಗಳಿಗೆ ಹಿಂಬರಹ ನೀಡದ ಪ್ರಕರಣಗಳೆಷ್ಟು; ತಿರಸ್ಕೃತಗೊಂಡರಿಗೆ ಸರ್ಕಾರದ ತೆಗೆದುಕೊಂಡಿರುವ ಪರ್ಯಾಯ ಕ್ರಮವೇನು (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)</td><td>ಮಂಜೂರಾತಿಗೆ ಸಂಬಂಧಿಸಿದಂತೆ ಬಂದ ಅರ್ಜಿಗಳನ್ನು ತಿರಸ್ಕೃತಗೊಳಿಸಿ ಫಲಾನುಭವಿಗಳಿಗೆ ಹಿಂಬರಹ ನೀಡದ ಪ್ರಕರಣಗಳ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ:-
<table>
<tr><th>ಕ್ರಮ ಸಂಖ್ಯೆ</th><th>ತಾಲ್ಲೂಕುಗಳು</th><th>ಪ್ರಕರಣಗಳ ಸಂಖ್ಯೆ</th></tr>
<tr><td>1</td><td>ಉಡುಪಿ</td><td>128</td></tr>
<tr><td>2</td><td>ಬ್ರಹ್ಮಾವರ</td><td>1287</td></tr>
<tr><td>3</td><td>ಕಾಪು</td><td>0</td></tr>
<tr><td>4</td><td>ಕುಂದಾಪುರ</td><td>6875</td></tr>
<tr><td>5</td><td>ಬೈಂದೂರು</td><td>1580</td></tr>
<tr><td>6</td><td>ಕಾರ್ಕಳ</td><td>855</td></tr>
<tr><td>7</td><td>ಹೆಬ್ರಿ</td><td>378</td></tr>
<tr><td></td><td>ಒಟ್ಟು</td><td>11103</td></tr>
</table>
ತಿರಸ್ಕೃತಗೊಂಡ ಪ್ರಕರಣಗಳಲ್ಲಿ ಅರ್ಜಿದಾರರಿಗೆ ಕರ್ನಾಟಕ ಭೂ ಕಂದಾಯ ನಿಯಮ 1966 ನಿಯಮ 108(ಡಿ)(6) ರಂತೆ ಸಕ್ಷಮ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ</td></tr>
</table>

(ಕಡತ ಸಂಖ್ಯೆ:ಕಂಇ 99 ಎಲ್‌ಜಿಎ 2020)

(ಆರ್.ಅಶೋಕ)
ಕಂದಾಯ ಸಚಿವರು.

ಕರ್ನಾಟಕ ವಿಧಾನಸಭೆ	
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	228
ಸದಸ್ಯರ ಹೆಸರು	ಶ್ರೀ ಕೃಷ್ಣ ಭೈರೇಗೌಡ
ಉತ್ತರಿಸುವ ಸಚಿವರು	ಮಾನ್ಯ ಕಂದಾಯ ಸಚಿವರು
ಉತ್ತರಿಸುವ ದಿನಾಂಕ	07.12.2020

ಕ್ರ.ಸಂ	ಪ್ರಶ್ನೆ	ಉತ್ತರ
1	ಇತ್ತೀಚೆಗೆ ಬೆಂಗಳೂರು ಉತ್ತರ ಉಪ ವಿಭಾಗಾಧಿಕಾರಿ, ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ಕಂದಾಯ ವ್ಯಾಜ್ಯ ಪ್ರಕರಣಗಳಲ್ಲಿ ನಿಯಮಗಳನ್ನು ಮೀರಿ ಹಾಗೂ ಅಸಾಧಾರಣ ಸಂಖ್ಯೆಯಲ್ಲಿ ವಿಲೇ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
2	ಹಾಗಿದ್ದಲ್ಲಿ, ಈ ಬಗ್ಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ;	ಹೌದು
3	ಸಲ್ಲಿಸಿದ್ದಲ್ಲಿ, ನಿಯಮಗಳನ್ನು ಉಲ್ಲಂಘಿನೆ ಮಾಡಲಾಗಿರುವ ಅಧಿಕಾರಿಯನ್ನು ಅಮಾನತ್ತುಗೊಳಿಸುವ ಅಥವಾ ಅವರ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಾಗಿದೆಯೇ;	ಶಿಫಾರಸ್ಸು ಮಾಡಲಾಗಿದೆ.
4	ಮಾಡಿದ್ದಲ್ಲಿ, ಈ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳಲಾಗಿದೆಯೇ?	ಈ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ.

ಕಂಇ 117 ಟಿಆರ್‌ಎಂ 2020

ಆರ್. ಅಶೋಕ್

(ಕಂದಾಯ ಸಚಿವರು)

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	236
ಮಾನ್ಯ ಸದಸ್ಯರ ಹೆಸರು	:	ಶ್ರೀ ಶಿವಣ್ಣ ಬಿ. (ಆನೇಕಲ್)
ಉತ್ತರಿಸುವ ದಿನಾಂಕ	:	07/12/2020
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯ ಮಂತ್ರಿಗಳು, ಲೋಕೋಪಯೋಗಿ ಇಲಾಖೆ.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಆನೇಕಲ್ ತಾಲ್ಲೂಕು ಕೇಂದ್ರದಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಭವನದ ಕಾಮಗಾರಿಯು ಯಾವ ಹಂತದಲ್ಲಿದೆ; (ವಿವರ ನೀಡುವುದು)</td><td>ಆನೇಕಲ್ ತಾಲ್ಲೂಕು ಕೇಂದ್ರದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಠೇವಣಿ ವಂತಿಕೆ ಕಾಮಗಾರಿಯಡಿಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಭವನದ ಕಾಮಗಾರಿಯ ನೆಲಮಹಡಿ Mezzanine floor, ಮೊದಲನೇ ಮಹಡಿ, ಎರಡನೇ ಮಹಡಿ ಕಾಮಗಾರಿ ಮುಗಿದಿದ್ದು, Terrace floor roof ಕಾಮಗಾರಿ ಮತ್ತು Basement floor ನ Granite flooring ಕಾಮಗಾರಿ ಪ್ರಗತಿಯಲ್ಲಿರುತ್ತವೆ.</td></tr>
<tr><td>ಆ)</td><td>ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಮಂಜೂರಾದ ಇದುವರೆವಿಗೂ ಖರ್ಚಾಗಿರುವ ಹಾಗೂ ಬಿಡುಗಡೆಗೆ ಬಾಕಿಯಿರುವ ಅನುದಾನವೆಷ್ಟು; (ಪೂರ್ಣ ವಿವರ ನೀಡುವುದು)</td><td>ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಮಂಜೂರಾದ ಇದುವರೆವಿಗೂ ಖರ್ಚಾಗಿರುವ ಹಾಗೂ ಬಿಡುಗಡೆಗೆ ಬಾಕಿಯಿರುವ ಅನುದಾನದ ವಿವರ ಈ ಕೆಳಂಡಂತ್ತಿರುತ್ತದೆ.
(ರೂ.ಲಕ್ಷಗಳಲ್ಲಿ)
<table><tr><td>ಮಂಜೂರಾದ ಮೊತ್ತ</td><td>ರೂ.1325.00</td></tr><tr><td>ಬಿಡುಗಡೆಯಾದ ಮೊತ್ತ</td><td>ರೂ.399.25</td></tr><tr><td>ಇದುವರೆವಿಗೂ ಖರ್ಚಾಗಿರುವ ಮೊತ್ತ</td><td>ರೂ.399.25</td></tr><tr><td>ಪಾವತಿಗಾಗಿ ಬಾಕಿ ಇರುವ ಬಿಲ್ಲಿನ ಮೊತ್ತ</td><td>ರೂ.103.00</td></tr><tr><td>ಬಿಡುಗಡೆಗೆ ಬಾಕಿ ಇರುವ ಅನುದಾನ</td><td>ರೂ.925.75</td></tr></table></td></tr>
<tr><td>ಇ)</td><td>ಅಂಬೇಡ್ಕರ್ ಭವನವನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)</td><td>ಸದರಿ ಕಾಮಗಾರಿಯನ್ನು ದಿನಾಂಕ:30.09.2021 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.</td></tr>
</table>

ಸಂಖ್ಯೆ: ಲೋಇ 35 ಬಿಎಲ್ ಕ್ಯೂ 2020

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯ ಮಂತ್ರಿಗಳು,
ಲೋಕೋಪಯೋಗಿ ಇಲಾಖೆ.

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 237
ಸದಸ್ಯರ ಹೆಸರು : ಶ್ರೀ ಶಿವಣ್ಣ ಬಿ.
(ಆನೇಕಲ್)
ಉತ್ತರಿಸುವ ದಿನಾಂಕ : 07-12-2020
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಆನೇಕಲ್ ತಾಲ್ಲೂಕಿನಲ್ಲಿ 94c ಅಡಿಯಲ್ಲಿ ಮಂಜೂರಾದ ಹಕ್ಕುಪತ್ರಗಳೆಷ್ಟು; (ಪೂರ್ಣ ವಿವರ ನೀಡುವುದು)	ಆನೇಕಲ್ ತಾಲ್ಲೂಕಿನಲ್ಲಿ 94c ಅಡಿಯಲ್ಲಿ ಮಂಜೂರಾದ ಒಟ್ಟು 4,148 ಅರ್ಜಿಗಳಿಗೆ ಹಕ್ಕುಪತ್ರಗಳನ್ನು ನೀಡಲಾಗಿದೆ.
ಆ)	94c ಅಡಿಯಲ್ಲಿ ಅರ್ಜಿ ಸಲ್ಲಿಸಿರುವವರ, ಹಕ್ಕು ಪತ್ರ ಪಡೆದಿರುವವರ ಹಾಗೂ ಹಕ್ಕು ಪತ್ರ ಪಡೆಯದಿರುವವರ ಸಂಖ್ಯೆ ಎಷ್ಟು; (ಪೂರ್ಣ ವಿವರ ನೀಡುವುದು)	94c ಅಡಿಯಲ್ಲಿ ಒಟ್ಟು 7,309 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಈ ಪೈಕಿ 4,148 ಅರ್ಜಿಗಳಿಗೆ ಹಕ್ಕು ಪತ್ರ ವಿತರಿಸಲಾಗಿದ್ದು, 3,161 ಅರ್ಜಿಗಳನ್ನು ವಜಾ ಮಾಡಲಾಗಿರುತ್ತದೆ. ಹಕ್ಕುಪತ್ರ ವಿತರಣೆಗೆ ಯಾವುದು ಬಾಕಿ ಇರುವುದಿಲ್ಲ.
ಇ)	94c ಅಡಿಯಲ್ಲಿ ಹಕ್ಕುಪತ್ರ ಪಡೆದಿದ್ದು, ಅವುಗಳು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಣಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ಹೌದು. ನೋಂದಣಿ ಮಾಡಲು ಅಗತ್ಯ ಕ್ರಮವಹಿಸಲಾಗುವುದು.

ಸಂಖ್ಯೆ: ಆರ್‌ಡಿ 158 ಎಲ್‌ಜಿಕ್ಯೂ 2020 (ಇ)

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	240
2	ಸದಸ್ಯರ ಹೆಸರು	ಶ್ರೀ ಲಿಂಗೇಶ ಕೆ.ಎಸ್. (ಬೇಲೂರು)
3	ಉತ್ತರಿಸಬೇಕಾದ ದಿನಾಂಕ	07.12.2020
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೇಲೂರು ವಿಧಾನಸಭಾ ಕ್ಷೇತ್ರದ ಪರಿಮಿತಿಯಲ್ಲಿ ಬರುವ ಉಪ ತಹಶೀಲ್ದಾರರ ಕಚೇರಿಗಳೆಷ್ಟು ಹಾಗೂ ಯಾವುವು;	ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 06 ಉಪ ತಹಶೀಲ್ದಾರರ (ನಾಡಕಛೇರಿ)ಕಛೇರಿಗಳಿದ್ದು, ವಿವರ ಈ ಕೆಳಕಂಡಂತೆ ಇದೆ. 1) ಬೇಲೂರು ಕಸಬಾ 2) ಬಿಕ್ಕೋಡು 3) ಮಾದಿಹಳ್ಳಿ 4) ಹಳೆಬೀಡು 5) ಅರೇ ಹಳ್ಳಿ 6) ಜಾವಗಲ್
ಆ)	ಸದರಿ ಕಛೇರಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಎಷ್ಟು ಕಛೇರಿಗಳ ಕಟ್ಟಡಗಳಲ್ಲಿ ಮೂಲ ಭೂತ ಸೌಕರ್ಯಗಳಿವೆ;	ಹಾಸನ ಜಿಲ್ಲೆಯ ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಮಾದಿಹಳ್ಳಿ ಹೋಬಳಿ ನಾಡಕಛೇರಿ ಹೊರತುಪಡಿಸಿ, ಉಳಿದ ಎಲ್ಲಾ ನಾಡಕಛೇರಿ ಕಟ್ಟಡಗಳು ಶಿಥಿಲವಾಗಿದ್ದು, ಹೊಸ ಕಟ್ಟಡ ನಿರ್ಮಿಸಲು ಜಿಲ್ಲಾಧಿಕಾರಿಗಳ ಕಛೇರಿಯಿಂದ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. ಉಳಿದಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿರುತ್ತದೆ.
ಇ)	ಉಳಿದ ಕಛೇರಿಗಳಿಗೆ ಯಾವ ಕಾಲಮಿತಿಯೊಳಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	

ಸಂಖ್ಯೆ: ಕಂಇ 53 ಎಜೆಎಸ್ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	241
ಸದಸ್ಯರ ಹೆಸರು :	ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ.
ಉತ್ತರಿಸುವ ದಿನಾಂಕ:	07-12-2020
ಉತ್ತರಿಸುವವರು	ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

	ಪ್ರಶ್ನೆ	ಉತ್ತರ
ಅ	ಬಂಗಾರಪೇಟೆ ಪಟ್ಟಣದ ಮುಜರಾಯಿ ಇಲಾಖೆಯ ಶ್ರೀ ಕೋದಂಡರಾಮ ಸ್ವಾಮಿ ದೇವಾಲಯದ ಆವರಣದಲ್ಲಿ ವಾಣಿಜ್ಯ ಸಂಕೀರ್ಣ, ಪಾರ್ಕಿಂಗ್, ಕಲ್ಯಾಣ ಮಂಟಪ ಇತ್ಯಾದಿಗಳನ್ನು ನಿರ್ಮಿಸಿ ಪ್ರತಿ ಮಾಹೆ ಸರ್ಕಾರಕ್ಕೆ 25 ಲಕ್ಷ ರೂಗಳ ಆದಾಯ ತರುವಂತಹ ಯೋಜನೆಗೆ ಮಂಜೂರು ಮಾಡಲಾಗಿದ್ದು, ರೂ.8.00 ಕೋಟಿಗಳ ಅನುದಾನವನ್ನು ರದ್ದುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೋಲಾರ ಜಿಲ್ಲೆ, ಬಂಗಾರಪೇಟೆ ಪಟ್ಟಣದ ಮುಜರಾಯಿ ಇಲಾಖೆಯ ಶ್ರೀ ಕೋದಂಡರಾಮ ಸ್ವಾಮಿ ದೇವಾಲಯದ ಆವರಣದಲ್ಲಿ ವಾಣಿಜ್ಯ ಸಂಕೀರ್ಣ ಪಾರ್ಕಿಂಗ್, ಕಲ್ಯಾಣ ಮಂಟಪ ಇತ್ಯಾದಿಗಳನ್ನು ನಿರ್ಮಿಸಿ ಪ್ರತಿ ಮಾಹೆ ಸರ್ಕಾರಕ್ಕೆ ರೂ.25.00ಲಕ್ಷಗಳ ಆದಾಯ ತರುವಂತಹ ಯೋಜನೆಗೆ ಮಂಜೂರು ಮಾಡಲಾಗಿದ್ದು, ರೂ.8.00 ಕೋಟಿಗಳ ಅನುದಾನವನ್ನು ರದ್ದುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ	ಹಾಗಿದ್ದಲ್ಲಿ, ಮಂಜೂರಾತಿಯನ್ನು ರದ್ದುಗೊಳಿಸಲು ಕಾರಣಗಳೇನು;	ಸರ್ಕಾರದ ಆದೇಶ ಸಂಖ್ಯೆ:ಕಂಇ 117 ಮುಲಬಿ 2019, ದಿನಾಂಕ:18.07.2019ರಲ್ಲಿ ಕೋಲಾರ ಜಿಲ್ಲೆ ಬಂಗಾರಪೇಟೆ ಪಟ್ಟಣದ ಮುಜರಾಯಿ ಇಲಾಖೆಯ ಶ್ರೀ ಕೋದಂಡರಾಮ ಸ್ವಾಮಿ ದೇವಾಲಯದ ಆವರಣದಲ್ಲಿ ಬಡವರಿಗಾಗಿ ಕಲ್ಯಾಣ ಮಂಟಪ ಹಾಗೂ ಅಂಗಡಿ ಮಳಿಗೆ ಆಡಳಿತ ಕಛೇರಿ, ಫಲಹಾರ ಮಂದಿರ ವಾಣಿಜ್ಯ ಕಟ್ಟಡ ನಿರ್ಮಾಣಕ್ಕಾಗಿ ರೂ.850.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. ಆದರೆ ಈ ಆದೇಶವನ್ನು ಸರ್ಕಾರವು ಆಡಳಿತಾತ್ಮಕ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ:ಕಂಇ 15 ಮುಲಬಿ 2019, ದಿನಾಂಕ:08.01.2020 ರಲ್ಲಿ ರದ್ದುಪಡಿಸಿರುತ್ತದೆ.
ಇ	ಮಂಜೂರಾತಿಯನ್ನು ಮುಂದುವರೆಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಉದ್ದೇಶ ಸರ್ಕಾರದ ಮುಂದಿದೆಯೇ; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)?	ಮಂಜೂರಾತಿಯನ್ನು ಮುಂದುವರೆಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು ಈ ಉದ್ದೇಶಿತ ಕಾಮಗಾರಿಗೆ ಅನುದಾನವನ್ನು ಪುನರ್ ಮಂಜೂರಾತಿ ಮಾಡುವ ಬಗ್ಗೆ ಕಡತ ಸಂಖ್ಯೆ:ಕಂಇ 88 ಮುಅಬಿ 2020ರಲ್ಲಿ ಆರ್ಥಿಕ ಇಲಾಖೆಯೊಂದಿಗೆ ವ್ಯವಹರಿಸಲಾಗುತ್ತಿದೆ.

(ಸಂಖ್ಯೆ: ಕಂಇ 164 ಮುಸಪ್ರ 2020)

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲ ಸಾರಿಗೆ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 242
ಸದಸ್ಯರ ಹೆಸರು	: ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ (ಬಂಗಾರಪೇಟೆ)
ಉತ್ತರಿಸುವ ದಿನಾಂಕ	: 07-12-2020
ಉತ್ತರಿಸುವ ಸಚಿವರು	: ಮಾನ್ಯ ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕಂದಾಯ ಇಲಾಖೆಯಿಂದ ಬಗರ್‌ಹುಕುಂ ಯೋಜನೆಯಲ್ಲಿ ನಮೂನೆ-57ರ ಅರ್ಜಿಗಳನ್ನು ಸಲ್ಲಿಸುವ ಕಾಲಮಿತಿಯನ್ನು ಮುಕ್ತಾಯಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರಿ ಜಮೀನುಗಳಲ್ಲಿನ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಎ(4)ಗೆ ತಿದ್ದುಪಡಿ ತರಲಾಗಿದ್ದು, ತತ್ಸಂಬಂಧ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಸಿಸಿಸಿ ಅನ್ನು ಸೇರ್ಪಡಿಸಿ, ಹೊಸದಾಗಿ ನಮೂನೆ-57 ರ ಅರ್ಜಿಗಳನ್ನು ಸ್ವೀಕರಿಸಲು ದಿನಾಂಕ: 16.03.2019 ಕ್ಕೆ ಅವಧಿ ಮುಕ್ತಾಯಗೊಂಡಿರುತ್ತದೆ. ಅವಧಿ ವಿಸ್ತರಿಸಲು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.
ಆ)	ಬಂದಿದ್ದಲ್ಲಿ, ಸೂಕ್ತ ಮಾಹಿತಿ ಇಲ್ಲದೇ ಅರ್ಜಿಗಳನ್ನು ಸಲ್ಲಿಸಲು ಸಾಧ್ಯವಾಗಿಲ್ಲದಿರುವುದರಿಂದ ನಮೂನೆ 57ನ್ನು ಸಲ್ಲಿಸಲು ಅವಧಿಯನ್ನು ಮತ್ತೊಮ್ಮೆ ವಿಸ್ತರಿಸಿ ಅವಕಾಶವನ್ನು ನೀಡಲಾಗುವುದೇ? (ವಿವರ ನೀಡುವುದು)	

ಸಂಖ್ಯೆ: ಆರ್‌ಡಿ 156 ಎಲ್‌ಜಿಕ್ಯೂ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**246**
ಸದಸ್ಯರ ಹೆಸರು	:	ಶ್ರೀ ವೆಂಕಟರಮಣಯ್ಯ ಟಿ (ದೊಡ್ಡಬಳ್ಳಾಪುರ)
ಉತ್ತರಿಸಬೇಕಾದ ದಿನಾಂಕ	:	07-12-2020
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

ಪ್ರಶ್ನೆ	ಉತ್ತರ
(ಅ) 2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಎಷ್ಟು ತಾಲ್ಲೂಕುಗಳು ಪ್ರವಾಹಕ್ಕೆ ಸಿಲುಕಿರುತ್ತದೆ;	2018-19ನೇ ಸಾಲಿನಲ್ಲಿ 45 ತಾಲ್ಲೂಕುಗಳನ್ನು, 2019-20ನೇ ಸಾಲಿನಲ್ಲಿ 119 ತಾಲ್ಲೂಕುಗಳನ್ನು ಮತ್ತು 2020-21ನೇ ಸಾಲಿನಲ್ಲಿ 180 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ.
(ಆ) ಇದರಿಂದ ನಷ್ಟವಾಗಿರುವ ಪ್ರಾಣಹಾನಿ, ಬೆಳೆಹಾನಿ ಮತ್ತು ಆಸ್ತಿ-ಪಾಸ್ತಿಗಳೆಷ್ಟು;	(see table below)

ವರ್ಷ	ಪ್ರಾಣಹಾನಿ	ಬೆಳೆಹಾನಿ	ಆಸ್ತಿ-ಪಾಸ್ತಿ ಹಾನಿ
2018-19	67	2.26 ಲಕ್ಷ ಹೆಕ್ಟೇರ್	ರೂ.1813.88 ಕೋಟಿ
2019-20	137	10.46 ಲಕ್ಷ ಹೆಕ್ಟೇರ್	ರೂ.9642.67 ಕೋಟಿ
2020-21	104	20.60 ಲಕ್ಷ ಹೆಕ್ಟೇರ್	ರೂ.6180.79 ಕೋಟಿ

(ಇ) ನಷ್ಟದ ಸಮೀಕ್ಷೆಯ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿ ಪರಿಹಾರಕ್ಕೆ ಒತ್ತಾಯಿಸಲಾಗಿದೆಯೇ;

(ಈ) ರಾಜ್ಯ ಮತ್ತು ಕೇಂದ್ರದಿಂದ ಬಂದಿರುವ ಪರಿಹಾರ ಮೊತ್ತವೆಷ್ಟು? (ಗ್ರಾಮ ಪಂಚಾಯಿತಿವಾರು ಮಾಹಿತಿ ನೀಡುವುದು)

(ರೂ.ಕೋಟಿಗಳಲ್ಲಿ)

ವರ್ಷ	ಕೇಂದ್ರ ಸರ್ಕಾರಕ್ಕೆ ಕೋರಿರುವ ಮೊತ್ತ	ಕೇಂದ್ರದಿಂದ ಬಿಡುಗಡೆ ಯಾದ ಮೊತ್ತ	ರಾಜ್ಯ ಸರ್ಕಾರ ಭರಿಸಿರುವ ಹೆಚ್ಚುವರಿ ಮೊತ್ತ
2018-19	722.70	525.22	200.00
2019-20	3891.80	1682.00	1080.25
2020-21	2384.89	577.84	74.19

ಕಂಇ 608 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 247
ಸದಸ್ಯರ ಹೆಸರು : ಶ್ರೀ ವೆಂಕಟರಮಣಯ್ಯ.ಟಿ. (ದೊಡ್ಡಬಳ್ಳಾಪುರ)
ಉತ್ತರಿಸುವ ದಿನಾಂಕ : 07-12-2020
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ದೊಡ್ಡಬಳ್ಳಾಪುರ ನಗರ ಸಭೆ ವ್ಯಾಪ್ತಿಯಲ್ಲಿ ಮಹಿಳಾ ಪ್ರಥಮ ದರ್ಜೆ ಕಾಳೇಜಿಗೆ ಜಮೀನು ಮಂಜೂರು ಮಾಡಲು ನಿವೇಶನದ ಸ್ಥಳ ಗುರುತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದೊಡ್ಡಬಳ್ಳಾಪುರ ಮಹಿಳಾ ಪ್ರಥಮ ದರ್ಜೆ ಕಾಲೇಜಿಗೆ ದೊಡ್ಡಬಳ್ಳಾಪುರ ನಗರ ಕೇಂದ್ರ ಭಾಗದಲ್ಲಿರುವ ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ ಜಮೀನಿನಲ್ಲಿ ಅಥವಾ ದೊಡ್ಡಬಳ್ಳಾಪುರ ನಗರ ಭಾಗದಲ್ಲಿ ಜಮೀನನ್ನು ಮಂಜೂರು ಮಾಡುವಂತೆ ಪ್ರಾಂಶುಪಾಲರು ಮನವಿ ಸಲ್ಲಿಸಿರುತ್ತಾರೆ.
ಆ)	ಹಾಗಿದ್ದಲ್ಲಿ, ಜಮೀನು ಮಂಜೂರು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆಗೆ ಮಂಜೂರಾಗಿರುವ ಜಮೀನನ್ನು ಬಳಸಲು ಸದರಿ ಇಲಾಖೆಯ ಅನುಮತಿ ಪಡೆಯಬೇಕಾಗಿರುತ್ತದೆ ಆದ್ದರಿಂದ ಮಹಿಳಾ ಪ್ರಥಮ ದರ್ಜೆ ಕಾಲೇಜಿಗೆ ಬದಲಿ ಜಾಗ ಗುರ್ತಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಆರ್‌ಡಿ 160 ಎಲ್‌ಜಿಕ್ಯೂ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	248
ಸದಸ್ಯರ ಹೆಸರು	ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳಿ–ಧಾರವಾಡ ಪೂರ್ವ)
ಉತ್ತರಿಸಬೇಕಾದ ದಿನಾಂಕ:	07.12.2020
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹೊಸದಾಗಿ ಮತದಾರರಿಗೆ ಗುರುತಿನ ಚೀಟಿ ವಿಸ್ತರಣೆ ಮಾಡುವ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಗಮನಿಸಲಾಗಿದೆ.
ಆ)	ಬಂದಿದ್ದಲ್ಲಿ, ಕೈಗೊಂಡ ಕ್ರಮವೇನು? (ವಿವರ ನೀಡುವುದು)	ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಈ ವರ್ಷದಿಂದ ಯುವ ಮತದಾರರಿಗೆ ಹಾಗೂ ಹೊಸದಾಗಿ ಸೇರ್ಪಡೆಗೊಳ್ಳುವ ಮತದಾರರಿಗೆ ಬಣ್ಣದ ಮತದಾರ ಗುರುತಿನ ಚೀಟಿಯನ್ನು ಸರ್ಕಾರದ ವತಿಯಿಂದ ಉಚಿತವಾಗಿ ನೀಡಲಾಗುತ್ತಿದೆ. ಈ ಸಂಬಂಧ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶಿಸಿ ಅಗತ್ಯವಾಗಿ ಬೇಕಾಗಿರುವ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಪ್ರಸುತ್ತ ವಿಶೇಷ ಮತದಾರ ಪರಿಷ್ಕರಣೆ 2021 ರಾಜ್ಯಾದ್ಯಾಂತ ನಡೆಯುತ್ತಿದ್ದು, ಮತದಾರರು ನಿಕರವಾದ ಮೂಲ ಮಾಹಿತಿಯನ್ನು ನಮೂನೆಯ ಮೂಲಕ ಮಾರ್ಪಡಿಸಬಹುದು ಅಥವಾ ಗಣಕಯಂತ್ರದ ಅನುಭವವಿರುವ ಯಾವುದೇ ಮತದಾರ ಭಾರತ ಚುನಾವಣಾ ಆಯೋಗದ https://www.nvsp.in/ ಪೋರ್ಟಲ್‌ನಲ್ಲಿ ಸಲ್ಲಿಸಬಹುದಾಗಿದೆ. ಅದಲ್ಲದೆ ಮತದಾರ ಬಣ್ಣದ ಮತದಾರ ಗುರುತಿನ ಚೀಟಿ ಪಡೆಯಲು ಇಚ್ಚಿಸಿದಲ್ಲಿ ಸಂಬಂಧಪಟ್ಟ ಸೇವಾ ಕೇಂದ್ರದಲ್ಲಿ ಅಥವಾ ನೋಂದಣಾಧಿಕಾರಿ ಬಳಿ ರೂ.30.00 ರೂಗಳನ್ನು ಪಾವತಿಸಿ ಪಡೆಯಬಹುದಾಗಿದೆ. ಈಗಾಗಲೇ ಇರುವ ಹಳೆಯ ಮತದಾರ ಗುರುತಿನ ಚೀಟಿಯು ಸಹ ಅಧಿಕೃತವಾಗಿರುತ್ತದೆ.

ಸಂಖ್ಯೆ: ಕಂಇ 39 ವಿಮಕ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	253
ಸದಸ್ಯರ ಹೆಸರು:	ಶ್ರೀ ಕೃಷ್ಣ ಭೈರೇಗೌಡ (ಬ್ಯಾಟರಾಯನಪುರ)
ಉತ್ತರಿಸಬೇಕಾದ ಸಚಿವರು	ಮಾನ್ಯ ಕಂದಾಯ ಸಚಿವರು
ಉತ್ತರಿಸಬೇಕಾದ ದಿನಾಂಕ:	07-12-2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	2019 ಮತ್ತು 2020ನೇ ವರ್ಷದ ಅವಧಿಯಲ್ಲಿ ಯಲಹಂಕ ತಾಲ್ಲೂಕು ತಹಶೀಲ್ದಾರ್ ಆಗಿ ಕಾರ್ಯನಿರ್ವಹಿಸಿದ್ದವರ ಮೇಲೆ ಬೆಂಗಳೂರು ಜಿಲ್ಲಾಧಿಕಾರಿಗಳು ಮತ್ತು ಇಲಾಖಾ ಪ್ರಧಾನ ಕಾರ್ಯದರ್ಶಿಗಳು ನೀಡಿರುವ ವರದಿ ಏನು (ವರದಿಯ ನಕಲು ನೀಡವುದು);	2019-20 ನೇ ಸಾಲಿನಲ್ಲಿ ಯಲಹಂಕ ತಹಶೀಲ್ದಾರ್ ಆಗಿ ಶ್ರೀ ಬಿ.ಆರ್. ಮಂಜುನಾಥ್. ಇವರು ದಿನಾಂಕ:10-11-2016 ರಿಂದ 15-07-2019 ರವರೆಗೆ. ಶ್ರೀ ಶ್ರೀನಿವಾಸಯ್ಯ. ಇವರು ದಿನಾಂಕ:15-07-2019 ರಿಂದ 17-08-2019ರವರೆಗೆ ಹಾಗೂ ಶ್ರೀ ಎನ್. ರಘುಮೂರ್ತಿ ಇವರು ದಿನಾಂಕ:17-08-2019 ರಿಂದ 14-10-2020ರವರೆಗೆ ಕರ್ತವ್ಯ ನಿರ್ವಹಿಸಿದ್ದು. ಪ್ರಸ್ತುತ ಶ್ರೀ ಕೆ.ನರಸಿಂಹಮೂರ್ತಿ ಇವರು ದಿನಾಂಕ:14-10-2020 ರಿಂದ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.
ಆ)	ವರದಿಯಲ್ಲಿ ಸದರಿ ಅಧಿಕರಿಯನ್ನು ಅಮಾನತ್ತುಗೊಳಸುವ ಅಥವಾ ಇತರೆ ಶಿಸ್ತು ಕ್ರಮವನ್ನು ತೆಗೆದುಕೊಳ್ಳಲು ವರದಿಯಲ್ಲಿ ಶಿಫಾರಸ್ಸು ಮಾಡಲಾಗಿದೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು;	ಇವರಲ್ಲಿ ಶ್ರೀ ಎನ್. ರಘುಮೂರ್ತಿ. ತಹಶೀಲ್ದಾರ್. ಯಲಹಂಕ ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಸಂಬಂಧ ಜಿಲ್ಲಾಧಿಕಾರಿ. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಿಂದ ವರದಿ ಸ್ವೀಕೃತವಾಗಿರುತ್ತದೆ.
ಇ)	ಸದರಿ ಅಧಿಕಾರಿಯನ್ನು ಅಮಾನತ್ತುಗೊಳಿಸಿ. ಶಿಸ್ತು ಕ್ರಮ ಕೈಗೊಳದೆ ಇರಲು ಕಾರಣವೇನು (ವಿವರ ನೀಡುವುದು)?	ಅದರಂತೆ ಸರ್ಕಾರದಲ್ಲಿ ಪರಿಶೀಲಿಸಿ ಶ್ರೀ ಎನ್. ರಘುಮೂರ್ತಿ. ತಹಶೀಲ್ದಾರ್ ಇವರನ್ನು ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ.

ಸಂ: ಕಂಇ 53 ಎಎಸ್‌ಡಿ 2020

(ಆರ್. ಅಶೋಕ್)
ಕಂದಾಯ ಸಚಿವರು.

ಕರ್ನಾಟಕ ವಿಧಾನಸಭೆ

15ನೇ ವಿಧಾನಸಭೆ

8ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.	:	256
ಮಾನ್ಯ ಸದಸ್ಯರ ಹೆಸರು	:	ಶ್ರೀ. ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)
ಉತ್ತರಿಸುವ ದಿನಾಂಕ	:	07-12-2020
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಗಳು, (ಲೋಕೋಪಯೋಗಿ ಇಲಾಖೆ)

ಕ್ರಸಂ	ಪ್ರಶ್ನೆ	ಉತ್ತರ
ಅ)	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಅರಭಾವಿ-ಚಳ್ಳಕೆರೆ ರಾಜ್ಯ ಹೆದ್ದಾರಿ-45 ರ ಕಿ.ಮೀ.231.0 ರಿಂದ 237.2 ರವರೆಗೆ ರಸ್ತೆ ಹದಗೆಟ್ಟು ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
ಆ)	ಬಂದಿದ್ದಲ್ಲಿ, ಸದರಿ ರಸ್ತೆ ದುರಸ್ಥಿಗೆ ಸರ್ಕಾರ ಕೈಗೊಂಡ ಕ್ರಮಗಳೇನು; ಹಾಗೂ ಕಾಮಗಾರಿಗೆ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು;	ಹಗರಿ ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಅರಭಾವಿ-ಚಳ್ಳಕೆರೆ ರಾಜ್ಯ ಹೆದ್ದಾರಿ-45 ರ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಂತ-4 ಘಟ್ಟ-2 ರಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
ಇ)	ಸದರಿ ರಸ್ತೆ ದುರಸ್ಥಿ ಕುರಿತಂತೆ ರೂ.500.00 ಲಕ್ಷ ಮೊತ್ತಕ್ಕೆ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ; ಬಂದಿದ್ದಲ್ಲಿ ಸದರಿ ಪ್ರಸ್ತಾವನೆ ಯಾವ ಹಂತದಲ್ಲಿದೆ;	
ಈ)	ಈ ವಿಧಾನ ಸಭಾ ಕ್ಷೇತ್ರದ ಅರಭಾವಿ-ಚಳ್ಳಕೆರೆ ರಾಜ್ಯ ಹೆದ್ದಾರಿ 45ರ ಕಿ.ಮೀ 231.2 ರ ಹತ್ತಿರ ಮಳೆಗಾಲದಲ್ಲಿ ಹಳ್ಳಬಂದು ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಉ)	ಬಂದಿದ್ದಲ್ಲಿ, ಸೇತುವೆ ನಿರ್ಮಾಣ ಕುರಿತಂತೆ ರೂ.1000.00 ಲಕ್ಷ ಮೊತ್ತದ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿದ್ದು, ಪ್ರಸ್ತಾವನೆ ಯಾವ ಹಂತದಲ್ಲಿದೆ ಮತ್ತು ಸೇತುವೆ ನಿರ್ಮಾಣವನ್ನು ಯಾವ ಕಾಮಮಿತಿಯೊಳಗೆ ಮಾಡಲಾಗುವುದು?	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಒಟ್ಟು 504 ಸೇತುವೆಗಳ ಪಟ್ಟಿಯನ್ನು ಅನುಮೋದನೆಗಾಗಿ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದ್ದು, ಇದರಲ್ಲಿ ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಅರಭಾವಿ-ಚಳ್ಳಕೆರೆ ರಾಜ್ಯ ಹೆದ್ದಾರಿ-45ರ ಕಿಮೀ 231.20 ರಲ್ಲಿ ರೂ.8.00 ಕೋಟಿಗಳ ಮೊತ್ತದಲ್ಲಿ ಸೇತುವೆ ನಿರ್ಮಾಣ ಕಾಮಗಾರಿ ಸೇರ್ಪಡೆಯಾಗಿತ್ತು. ಆರ್ಥಿಕ ಇಲಾಖೆಯು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಈ ಕೆಳಗಿನಂತೆ ತಿಳಿಸಿರುತ್ತಾರೆ. "The outstanding commitments of KRDCL are already being very high. Hence, Administrative Department is advised not to take up or approve any new works till the previous works are completed and closed financially" ಅದರಂತೆ, ಸದರಿ ಸೇತುವೆಯನ್ನು ಕೈಬಿಡಲಾಗಿದೆ.

ಸಂಖ್ಯೆ. ಲೋಇ E-169 ಇಎಪಿ 2020

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 257
ಸದಸ್ಯರ ಹೆಸರು : ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)
ಉತ್ತರಿಸುವ ಸಚಿವರು : ಕಂದಾಯ ಸಚಿವರು
ಉತ್ತರಿಸುವ ದಿನಾಂಕ : 07.12.2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಕೊಟ್ಟೂರು ಪಟ್ಟಣವು ನೂತನ ತಾಲ್ಲೂಕು ಕೇಂದ್ರವಾಗಿದ್ದು, ಮಿನಿ ವಿಧಾನಸೌಧ ನಿರ್ಮಾಣ ಯಾವಾಗ ಪ್ರಾರಂಭಿಸಲಾಗುವುದು;	ಕೊಟ್ಟೂರು ಮಿನಿ ವಿಧಾನಸೌಧ ನಿರ್ಮಾಣಕ್ಕಾಗಿ ಕೊಟ್ಟೂರು ತಾಲ್ಲೂಕು ಮತ್ತು ಗ್ರಾಮದ ಸ. ನಂ.732/ಎ ಮತ್ತು 733/ಎ ಗಳಲ್ಲಿ ಒಟ್ಟು 2.61 ಎಕರೆ ವಿಸ್ತೀರ್ಣದ ಜಮೀನನ್ನು ಗುರುತಿಸಿದ್ದು, ಸದರಿ ಜಮೀನು Local Fund Road ವರ್ಗಕ್ಕೆ ಸೇರಿರುವುದರಿಂದ, ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1) ರಡಿ ಡಿ ರಿಜರ್ವ್ ಮಾಡಿ ಜಮೀನು ಕಾಯ್ದಿರಿಸಲು ಜಿಲ್ಲಾಧಿಕಾರಿಗಳ ಹಂತದಲ್ಲಿ ಪ್ರಾಥಮಿಕ ಅಧಿಸೂಚನೆ ನಮೂನೆ 27 ನ್ನು ಪ್ರಕಟಿಸಲಾಗಿರುತ್ತದೆ. ಸದರಿ ಕಟ್ಟಡ ಕಾಮಗಾರಿಗೆ ಜಮೀನು ಕಾಯ್ದಿರಿಸುವ ಅಂತಿಮ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೊಟ್ಟೂರು ತಾಲ್ಲೂಕಿನಲ್ಲಿ ಹೊಸ ಮಿನಿ ವಿಧಾನಸೌಧ ಕಟ್ಟಡ ನಿರ್ಮಿಸಲು ಜಿಲ್ಲಾಧಿಕಾರಿಗಳಿಂದ ಸವಿವರ ಅಂದಾಜು ಪಟ್ಟಿ ಪಡೆದು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಕ್ರಮವಹಿಸಲಾಗುತ್ತದೆ.
ಆ)	ಸದರಿ ಮಿನಿ ವಿಧಾನಸೌಧ ನಿರ್ಮಾಣಕ್ಕೆ ನಿವೇಶನವನ್ನು ಗುರುತಿಸಲಾಗಿದೆಯೇ; ಹಾಗಿದ್ದಲ್ಲಿ, ನಿವೇಶನ ಹಸ್ತಾಂತರ ಪ್ರಕ್ರಿಯೆ ಯಾವ ಹಂತದಲ್ಲಿದೆ; (ವಿವರ ನೀಡುವುದು)	
ಇ)	ಕೊಟ್ಟೂರು ಮಿನಿ ವಿಧಾನಸೌಧ ನಿರ್ಮಾಣಕ್ಕೆ ಮಂಜೂರು ಮಾಡಲಾದ ಅನುದಾನವೆಷ್ಟು?	ಉದ್ಭವಿಸುವುದಿಲ್ಲ

ಕಂಇ 109 ಡಬ್ಲ್ಯೂಬಿಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	259
2	ಸದಸ್ಯರ ಹೆಸರು	ಶ್ರೀ ನರೇಂದ್ರ ಆರ್. (ಹನೂರು)
3	ಉತ್ತರಿಸಬೇಕಾದ ದಿನಾಂಕ	07.12.2020
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ಲೊಕ್ಕನಹಳ್ಳಿ ಹೋಬಳಿ ಯಿಂದ ಇಪ್ಪತ್ತು ಗ್ರಾಮಗಳನ್ನು ರಾಮಪುರ ಹೋಬಳಿಗೆ ವಿಲೀನ ಗೊಳಿಸಲು ನಿಧಾನಗತಿಯ ಧೋರಣೆ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಇವರ ವರದಿಯನ್ನು ಆಧರಿಸಿ, ಸಾರ್ವಜನಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕಿನ (ಹಿಂದಿನ ಕೊಳ್ಳೇಗಾಲ ತಾಲ್ಲೂಕು) ಲೊಕ್ಕನಹಳ್ಳಿ ಹೋಬಳಿಯಿಂದ ಹೂಗ್ಯಂ ಮತ್ತು ಮೀಣ್ಯಂ ಗ್ರಾಮಗಳನ್ನು (ಜನವಸತಿ ಗ್ರಾಮಗಳನ್ನು ಒಳಗೊಂಡಂತೆ) ರಾಮಾಪುರ ಹೋಬಳಿಗೆ ಸೇರ್ಪಡೆ ಮಾಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಗ್ರಾಮಗಳನ್ನು ಸೇರ್ಪಡೆ ಮಾಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸುವ ಪ್ರಕ್ರಿಯೆಯಲ್ಲಿದೆ.
ಆ)	ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	

ಸಂಖ್ಯೆ: ಕಂಇ/37/ಎಲ್‌ಆರ್‌ಡಿ/2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	10
ಮಾನ್ಯ ವಿಧಾನಸಭೆಯ ಸದಸ್ಯರ ಹೆಸರು	:	ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ. ಕೋಟೆ)
ಉತ್ತರಿಸುವ ದಿನಾಂಕ	:	07.12.2020
ಉತ್ತರಿಸುವ ಸಚಿವರು	:	ಮಾನ್ಯ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಮತ್ತು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.

ಕ್ರ. ಸಂಖ್ಯೆ	ಪ್ರಶ್ನೆ	ಉತ್ತರ
1	ರಾಜ್ಯದಲ್ಲಿ ಕಾರ್ಯಾಚರಣೆಯಲ್ಲಿರುವ ಅಥವಾ ಅನುಮತಿ ನೀಡಲಾಗಿರುವ ಒಳನಾಡು ಜಲಮಾರ್ಗಗಳು ಯಾವುವು:	ಕೇಂದ್ರ ಸರ್ಕಾರದಿಂದ National Waterways Act, 2016 ರಡಿ 111 ರಾಷ್ಟ್ರೀಯ ಒಳನಾಡು ಜಲಮಾರ್ಗಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸಲಾಗಿದೆ. ಕರ್ನಾಟಕ ರಾಜ್ಯದ ಕಬಿನಿ, ಗುರುಪುರ, ಕಾಳಿ, ನೇತ್ರಾವತಿ, ಶರಾವತಿ, ಪಂಚಗಂಗಾವಳಿ, ಉದ್ಯಾವರ, ಘಟಪ್ರಭಾ, ಮಲಪ್ರಭಾ, ತುಂಗಭದ್ರ ಮತ್ತು ಭೀಮಾನದಿ ಸೇರಿ ಒಟ್ಟು 11 ರಾಷ್ಟ್ರೀಯ ಒಳನಾಡು ಜಲಮಾರ್ಗಗಳು ಒಳಗೊಂಡಿರುತ್ತದೆ.
2	ಆಂತರಿಕ ಜಲಮಾರ್ಗಗಳನ್ನು ಪ್ರಾರಂಭಿಸಲು ಇರುವ ನಿಯಮಗಳೇನು ಹಾಗೂ ಇದರ ಆಡಳಿತ ಹಾಗೂ ನಿರ್ವಹಣೆಗಳಾವುವು; (ವಿವರ ನೀಡುವುದು)	ರಾಜ್ಯದಲ್ಲಿ ಆಂತರಿಕ ಜಲಮಾರ್ಗಗಳನ್ನು ಪ್ರಾರಂಭಿಸಲು ಪ್ರತ್ಯೇಕ ನಿಯಮಗಳು ಇರುವುದಿಲ್ಲ. ರಾಜ್ಯದ ನದಿಗಳಲ್ಲಿ ಮತ್ತು ಮುಳುಗಡೆ ಪ್ರದೇಶಗಳಲ್ಲಿ ಹಾಗೂ ಹಿನ್ನೀರಿನಲ್ಲಿ ಪ್ರಯಾಣಿಕರನ್ನು ಸಾಗಿಸಲುಸರ್ಕಾರದ ವತಿಯಿಂದ ಕಡವು ಸೇವೆಯನ್ನು ಒದಗಿಸಲಾಗಿರುತ್ತದೆ. ಸದ್ರಿ ಕಡವು ಸೇವೆಗಳನ್ನು ಮೂಲಸೌಲಭ್ಯ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಮೂಲಕ ಮತ್ತು ಸಾರ್ವಜನಿಕ ಹರಾಜು ಮೂಲಕ ನಡೆಸಲಾಗುತ್ತಿದೆ. ಸರ್ಕಾರದಿಂದ ಒದಗಿಸುವ ವಾರ್ಷಿಕ ಅನುದಾನದಡಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಈ ಕಡವು ಸೇವೆಗಳ ಖರ್ಚು ವೆಚ್ಚಗಳನ್ನು ನಿರ್ವಹಿಸಲಾಗುತ್ತಿದೆ.

ಕ್ರ. ಸಂ ಖ್ಯೆ	ಪ್ರಶ್ನೆ	ಉತ್ತರ
3	ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕಿನ ಕಬಿನಿ ಜಲಾಶಯದ ಹಿನ್ನೀರಿನಲ್ಲಿರುವ ಗ್ರಾಮಗಳಿಗೆ ಸಂಪರ್ಕ ಕಲ್ಪಿಸಲು ಅಂತರಿಕ ಜಲಸಾರಿಗೆ ಸೇವೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆ ತಾಲೂಕಿನ ಕಬಿನಿ ಜಲಾಶಯದ ಹಿನ್ನೀರಿನಲ್ಲಿರುವ ಗ್ರಾಮಗಳಿಗೆ ಸಂಪರ್ಕ ಕಲ್ಪಿಸಲು ಅಂತರಿಕ ಜಲಸಾರಿಗೆ ಸೇವೆಯನ್ನು ಪ್ರಾರಂಭಿಸುವ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
4	ಜಲಾಶಯದ ನಿರ್ಮಾಣದಿಂದ ಮುಳುಗಡೆಗೊಂಡು ದಡದಲ್ಲಿ ಪುನರ್ ವಸತಿಗೊಂಡ ಗ್ರಾಮಗಳು ಸೇರಿದಂತೆ 35 ಗ್ರಾಮಗಳ ಸಾರ್ವಜನಿಕರಿಗೆ ತಮ್ಮ ದೈನಂದಿನ ಚಟುವಟಿಕೆಗಳಿಗೆ ಕೇಂದ್ರ ಸ್ಥಾನಕ್ಕೆ ಆಗಮಿಸಲು ಸುಮಾರು 32 ಕಿ.ಮೀ. ನಿಂದ 40 ಕಿ.ಮೀ. ಬಳಸಿ ಕ್ರಮಿಸಬೇಕಾದ ಅನಿವಾರ್ಯತೆ ಇದ್ದು; ಹಾಗಿದ್ದಲ್ಲಿ, ಅಂತರಿಕ ಜಲಸಾರಿಗೆ ಸಂಪರ್ಕದಿಂದ 8 ರಿಂದ 12 ಕಿ.ಮೀ. ಇಳಿಯುವರಿಂದ ಸುರಕ್ಷಿತ ಜಲಮಾರ್ಗವನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದ ನಿಲುವೇನು?	ಪ್ರಸ್ತಾವನೆ ಬಂದಲ್ಲಿ ಈ ಕುರಿತು ಪರಿಶೀಲಿಸಿ ಸದ್ರಿ ಮುಳುಗಡೆ ಪ್ರದೇಶದ ಜನರಿಗೆ ಅನುಕೂಲವಾಗುವಂತೆ ಸರ್ಕಾರದ ವತಿಯಿಂದ ಕಡವು ಸೇವೆಯನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು.

ಕಡತ ಸಂಖ್ಯೆ: IDD 110 PSP 2020 (E-388825)

(ಕೋಟ ಶ್ರೀನಿವಾಸ ಪೂಜಾರಿ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**29**
ಸದಸ್ಯರ ಹೆಸರು	:	ಶ್ರೀ ಸಿದ್ದು ಸವದಿ (ತೇರದಾಳ)
ಉತ್ತರಿಸಬೇಕಾದ ದಿನಾಂಕ	:	07-12-2020
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

ಪ್ರಶ್ನೆ	ಉತ್ತರ
(ಅ) 2019-20ರಲ್ಲಿ ಭಾರಿ ಪ್ರವಾಹದಿಂದ ಸಂಪೂರ್ಣ ಬೆಳೆ ಹಾಳಾಗಿರುವ ಸಂಬಂಧ ಪರಿಹಾರ ವಿತರಣೆಗೆ ಬಾಕಿ ಇರುವ ರೈತರುಗಳ ಸಂಖ್ಯೆಯೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಗಳನ್ವಯ ನೆರೆಹಾವಳಿಯಿಂದ ಶೇ.33 ಕ್ಕಿಂತ ಹೆಚ್ಚಿನ ಬೆಳೆ ಹಾನಿಗೆ ತುತ್ತಾದ ಕೃಷಿಕರಿಗೆ ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಇನ್‌ಪುಟ್ ಸಬ್ಸಿಡಿಯನ್ನು ನೀಡಲಾಗುತ್ತದೆ. 2019-20ನೇ ಸಾಲಿನ ಪ್ರವಾಹದಿಂದ ಬೆಳೆಹಾನಿಯಾಗಿರುವ ಎಲ್ಲಾ ಅರ್ಹ ರೈತರಿಗೆ ರೂ.1232.20 ಕೋಟಿ ಇನ್‌ಪುಟ್ ಸಬ್ಸಿಡಿಯನ್ನು ಪರಿಹಾರ ತಂತ್ರಾಂಶದ ಮೂಲಕ ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)
(ಆ) ಶೇಕಡ 5 ರಿಂದ 6ರಷ್ಟು ರೈತರನ್ನು ಕಡೆಗಣಿಸಲು ಕಾರಣಗಳೇನು; ಡಾಟಾ ಎಂಟ್ರಿ ಆದರೂ ಈ ರೈತರು ಪರಿಹಾರ ವಂಚಿತರಾಗಿರುವುದಕ್ಕೆ ಕಾರಣಗಳೇನು; ಈ ರೀತಿ ಪರಿಹಾರ ವಂಚಿತ ರೈತರಿಗೆ ಯಾವ ಕಾಲಮಿತಿಯಲ್ಲಿ ಪರಿಹಾರ ನೀಡಲಾಗುವುದು?	ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಗಳನ್ವಯ ಬೆಳೆಹಾನಿಯ ಇನ್‌ಪುಟ್ ಸಬ್ಸಿಡಿ ಪಡೆಯಲು ಅರ್ಹರಿರುವ/ ದಾಖಲೆಗಳು ಹೊಂದಾಣಿಕೆಯಾಗಿರುವ ಎಲ್ಲಾ ಸಂತ್ರಸ್ಥ ರೈತರನ್ನು ಪರಿಗಣಿಸಲಾಗಿದೆ.

ಕಂಇ 604 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ವಿಧಾನ ಸಭಾ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:29ಕ್ಕೆ ಅನುಬಂಧ

2019 Input Subsidy payment details			
Sl.No.	District	No of Beneficaries	amount Paid in crores
1	Belagavi	164033	264.88
2	Dharwad	128969	279.33
3	Haveri	114634	210.22
4	Bagalkot	42209	94.87
5	Kodagu	39109	103.14
6	Shivamogga	37373	41.25
7	Chikkamgaluru	31672	66.89
8	Hassan	25923	41.55
9	Ballari	20721	29.83
10	Uttara Kananda	17875	15.43
11	Davanagere	8487	10.20
12	Vijayapura	8133	18.25
13	Mysuru	5870	6.68
14	Raichur	5517	13.87
15	Yadgir	5461	14.79
16	Gadag	5180	13.07
17	Kalaburagi	4481	7.39
18	Dakshina Kananda	2231	2.62
19	Tumakuru	1658	1.55
20	Mandya	725	0.61
21	Udupi	477	0.24
22	Chamarajanagara	399	0.51
23	Koppal	177	0.19
		671314	1232.20

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	31
ಸದಸ್ಯರ ಹೆಸರು	:	ಶ್ರೀ ಸಿದ್ದು ಸವದಿ (ತೇರದಾಳ)
ಉತ್ತರಿಸುವ ದಿನಾಂಕ	:	07.12.2020
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ

	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದಲ್ಲಿ ಅತಿವೃಷ್ಠಿ ಮಳೆಯಿಂದ ಬಹುತೇಕ ಸಂಪೂರ್ಣ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು;	ಹೌದು, ಸರ್ಕಾರದ ಗಮನಕ್ಕೆ ಬಂದಿದೆ. ರಾಜ್ಯದಲ್ಲಿ ಅತಿವೃಷ್ಠಿಯಿಂದ 826 ಸ್ಥಳಗಳಲ್ಲಿ 1517.75 ಕಿ.ಮೀ. ಉದ್ದದ ರಸ್ತೆಗಳು, 253 ಸೇತುವೆ/ಸಿಡಿ ಕಲ್ವರ್ಟ್‌ಗಳು ಹಾಳಾಗಿರುತ್ತವೆ. ಇವುಗಳ ದುರಸ್ತಿ ಹಾಗೂ ಪುನರ್ ನಿರ್ಮಾಣಕ್ಕಾಗಿ ರೂ.3120.00 ಕೋಟಿ ಅನುದಾನದ ಅವಶ್ಯಕತೆ ಇದ್ದು, ಅನುದಾನ ಬಿಡುಗಡೆಗೊಳಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿರುತ್ತದೆ. ತತಕ್ಷಣದ ದುರಸ್ತಿಗಾಗಿ ಮೊದಲನೇ ಕಂತಿನಲ್ಲಿ ರೂ.400.00 ಕೋಟಿ ಮತ್ತು 2ನೇ ಕಂತಿನಲ್ಲಿ ರೂ.200.00 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದ್ದು, 906 ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ವಾರ್ಷಿಕ ನಿರ್ವಹಣೆ ಅನುದಾನದಲ್ಲಿ 13254.72 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ಹಾಗೂ 33032.95 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಗುಂಡಿ ಮುಚ್ಚುವ ಕಾರ್ಯವು ಪ್ರಗತಿಯಲ್ಲಿದ್ದು, ಡಿಸೆಂಬರ್ ಅಂತ್ಯದೊಳಗೆ ಮುಕ್ತಾಯಗೊಳಿಸಲಾಗುವುದು. ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದಂತೆ ಸುರಿದ ಭಾರಿ ಮಳೆಯಿಂದ ಹಾಳಾದ ರಸ್ತೆ ಹಾಗು ಸೇತುವೆಗಳ ದುರಸ್ತಿ / ಪುನರ್ ನಿರ್ಮಾಣಕ್ಕಾಗಿ ರೂ.101.00 ಕೋಟಿಗಳ ಅನುದಾನ ಕೋರಿ ಪ್ರಾದೇಶಿಕ ಕಚೇರಿ – ಕೇಂದ್ರ ಭೂಸಾರಿಗೆ ಮಂತ್ರಾಲಯ, ಬೆಂಗಳೂರು, ಇವರಿಗೆ ದಿನಾಂಕ:02-09-2020ರಂದು ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಕೇಂದ್ರ ಭೂಸಾರಿಗೆ ಮಂತ್ರಾಲಯದ ಪತ್ರ ದಿನಾಂಕ:26-10-2020ರಲ್ಲಿ ರಾಜ್ಯದಲ್ಲಿ ಮಳೆಯಿಂದ ಹಾನಿಗೊಳಗಾದ ರಸ್ತೆ / ಸೇತುವೆಗಳ ದುರಸ್ತಿ / ಪುನರ್ ನಿರ್ಮಾಣ ಕಾಮಗಾರಿ ಕೈಗೊಳ್ಳಲು ರೂ.5.00 ಕೋಟಿಗಳಿಗೆ ಅನುಮೋದನೆ ನೀಡಿರುತ್ತದೆ. ಅದರನ್ವಯ ರೂ.7.50 ಕೋಟಿಗಳಿಗೆ ಮರುಹಂಚಿಕೆ ಮಾಡಿ ಆದ್ಯತೆಮೇರೆಗೆ ಅಂದಾಜುಪಟ್ಟಿ ತಯಾರಿಸಿ ದುರಸ್ತಿ / ಪುನರ್ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.
ಆ)	ತೇರದಾಳ ಮತಕ್ಷೇತ್ರದಲ್ಲಿ ಹತ್ತಾರು ಸಕ್ಕರೆ ಕಾರ್ಖಾನೆಗಳಿದ್ದು, ಹೆವಿ ಲೋಡಿನ ಟ್ರ್ಯಾಕ್ಟರ್‌ಗಳಿಂದ ರಸ್ತೆಗಳು ಹಾಳಾಗುತ್ತಿದ್ದು, ಸಾಧಾರಣ ದುರಸ್ತಿಗಳಿಂದ ಪುನಃ ಒಂದೇ ತಿಂಗಳಲ್ಲಿ ರಸ್ತೆಗಳು	ತೇರದಾಳ ಮತಕ್ಷೇತ್ರದ ಸಕ್ಕರೆ ಕಾರ್ಖಾನೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ವಾರ್ಷಿಕ ನಿರ್ವಹಣೆ ಅಡಿಯಲ್ಲಿ ಗುಂಡಿ ತುಂಬಿ ವಾಹನಗಳ ಸುಗಮ ಸಂಚಾರಕ್ಕಾಗಿ ಅನುಕೂಲ ಮಾಡಿಕೊಡುವಂತಹ ರಸ್ತೆಗಳನ್ನು ಸಾಧಾರಣ ದುರಸ್ತಿ ಎಂದು ಪರಿಗಣಿಸಿ ನಿರ್ವಹಿಸಲಾಗುತ್ತಿದೆ. ಅತಿಯಾಗಿ ಹಾನಿಯಾಗಿರುವ ರಸ್ತೆಗಳನ್ನು ಅನುದಾನದ ಲಭ್ಯತೆಯನುಸಾರ ದುರಸ್ತಿಗೊಳಿಸಿ

	ಪ್ರಶ್ನೆಗಳು	ಉತ್ತರಗಳು
	ಹಾಳಾಗುತ್ತಿರುವುದನ್ನು ಯಾವ ರೀತಿ ಅಭಿವೃದ್ಧಿಪಡಿಸಲಾಗುವುದು;	ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತದೆ.
ಇ)	ರಬಕವಿ ಮಹಾಲಿಂಗಪುರ ಮತ್ತು ತೇರದಾಳ ರಬಕವಿ ರಸ್ತೆಗಳಲ್ಲಿ ಸಂಚಾರ ದಟ್ಟಣೆಯಿರುವುದರಿಂದ ಒನ್‌ವೇ ರಸ್ತೆಗಳ (ಡಬಲ್) ಅವಶ್ಯಕತೆ ಇರುವುದಕ್ಕೆ ಹಣ ಮಂಜೂರು ಮಾಡಿ ಯಾವ ಕಾಲಮಿತಿಯಲ್ಲಿ ಸರಿಪಡಿಸಲಾಗುವುದು?	ರಬಕವಿ-ಮಹಾಲಿಂಗಪೂರ ಜಾಂಬೋಟಿ-ರಬಕವಿ ಎಸ್‌ಎಚ್-54 ಕಿಮೀ 130.472 ರಿಂದ 141.56 ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆಯನ್ನು ರೂ.2000.00 ಲಕ್ಷಗಳಲ್ಲಿ ಎಸ್‌ಎಚ್‌ಡಿಪಿ ಫೇಸ್-4 ಸ್ಟೇಜ್-2 ಅಡಿಯಲ್ಲಿ 14.00ಮೀ ಅಗಲಕ್ಕೆ ರಸ್ತೆ ಡಾಂಬರೀಕರಣ ಮಾಡಲು ಪ್ರಸ್ತಾಪಿಸಲಾಗಿದ್ದು, ಪರಿಶೀಲನೆಯಲ್ಲಿದೆ. ತೇರದಾಳ-ರಬಕವಿ ರಸ್ತೆಯು ಕಾಗವಾಡ-ಕಲಾದಗಿ ಎಸ್‌ಎಚ್-53 ರ ಭಾಗವಾಗಿದ್ದು, ಎಸ್‌ಎಚ್‌ಡಿಪಿ ಫೇಸ್-4 ಅಡಿಯಲ್ಲಿ ಕಿಮೀ 44.49 ರಿಂದ 49.74 ರವರೆಗೆ ರೂ.576.00 ಲಕ್ಷಗಳಲ್ಲಿ 7.00ಮೀ ಅಗಲಕ್ಕೆ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿರುತ್ತದೆ. ಕಿಮೀ 49.74 ರಿಂದ 51.10 ರವರೆಗಿನ ರಸ್ತೆಯು ಉತ್ತಮ ಸ್ಥಿತಿಯಲ್ಲಿದ್ದು, ಸುಗಮ ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ. ಕಿಮೀ 51.10 ರಿಂದ 51.35 ರವರೆಗೆ 7.00ಮೀ ಅಗಲಕ್ಕೆ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು 2020-21ನೇ ಸಾಲಿನ ಲೆಕ್ಕ ಶೀರ್ಷಿಕೆ 3054 ರಾಜ್ಯ ಹೆದ್ದಾರಿ ನಿರ್ವಹಣೆ (ಅತಿವೃಷ್ಠಿ ಹಾಗೂ ನೆರೆಹಾವಳಿ ಅನುದಾನ) ಅಡಿಯಲ್ಲಿ ರೂ.100.00 ಲಕ್ಷಗಳಲ್ಲಿ ದುರಸ್ತಿಗೊಳಿಸಲು ಅನುಮೋದನೆಗೊಂಡಿರುತ್ತದೆ. ಕಿಮೀ 51.35 ರಿಂದ 52.50 ರವರೆಗಿನ ರಸ್ತೆಯು ನಗರ ವ್ಯಾಪ್ತಿಯಲ್ಲಿ ಬರುತ್ತಿದ್ದು, ಅತಿಯಾದ ವಾಹನಗಳ ಸಂಚಾರದಿಂದ ಹಾಗೂ ಅತಿವೃಷ್ಟಿಯಿಂದ ರಸ್ತೆಯು ಹಾಳಾಗಿದ್ದು, ಮುಂದಿನ ದಿನಗಳಲ್ಲಿ ಅನುದಾನದ ಲಭ್ಯತೆಗನುಗುಣವಾಗಿ ಸುಧಾರಣೆ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ಕಿಮೀ 52.50 ರಿಂದ 56.72 ರವರೆಗೆ ರೂ.598.20 ಲಕ್ಷಗಳಲ್ಲಿ 7.00ಮೀ ಅಗಲಕ್ಕೆ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ, ಕಾಮಗಾರಿ ಪ್ರಗತಿಯಲ್ಲಿದೆ ಮುಂದುವರೆದು, ವಾಹನಗಳ ಸಾಂದ್ರತೆಗೆ (ದಟ್ಟಣೆಗೆ) ಅನುಗುಣವಾಗಿ ರಸ್ತೆ ಅಗಲೀಕರಣ ಕಾಮಗಾರಿಯನ್ನು ಪ್ರಸ್ತಾಪಿಸಲಾಗುವುದು.

ಲೋಇ 105 ಸಿಕ್ಯೂಎನ್ 2020(ಇ)

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	34
ಸದಸ್ಯರ ಹೆಸರು	ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)
ಉತ್ತರಿಸುವ ದಿನಾಂಕ	07-12-2020
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೃಷಿ ಇಲಾಖೆಯಿಂದ ರೈತರಿಗೆ 24 ಮತ್ತು 25 ಹೆಚ್.ಪಿ ಟ್ರಾಕ್ಟರ್ ಗಳಿಗೆ ಸಬ್ಸಿಡಿ ನೀಡಿದಂತೆ 25ಕ್ಕಿಂತ ಹೆಚ್ಚು ಹೆಚ್.ಪಿ. ಟ್ರಾಕ್ಟರ್ ಗಳಿಗೆ ಸಬ್ಸಿಡಿ ನೀಡದಿರಲು ಕಾರಣಗಳೇನು	ಕೃಷಿ ಇಲಾಖೆಯು 2013-14 ನೇ ಸಾಲಿನಿಂದ ರಾಜ್ಯ ಸರ್ಕಾರದ ಆಯವ್ಯಯ ಘೋಷಣೆಯನ್ವಯ ರಾಜ್ಯದಲ್ಲಿ 25 ಹೆಚ್.ಪಿ ವರೆಗೆ ಟ್ರಾಕ್ಟರ್ ಗಳನ್ನು ಸಹಾಯಧನ ಯೋಜನೆಗಳಡಿ ವಿತರಿಸಲಾಗುತ್ತಿದೆ. ಮುಂದುವರೆದು, ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ, ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡಿರುವ ಎಲ್ಲಾ ಹೆಚ್.ಪಿ ಟ್ರಾಕ್ಟರ್‌ಗಳನ್ನು ರೈತರ ಅಗತ್ಯತೆಗೆ ಅನುಗುಣವಾಗಿ ಕಡಿಮೆ ಬಾಡಿಗೆ ಆಧಾರದ ಮೇಲೆ ರೈತರಿಗೆ ಒದಗಿಸಲಾಗುತ್ತಿದೆ.
ಆ	ಕೃಷಿ ಭಾಗ್ಯ ಯೋಜನೆಯನ್ನು ಮುಂದುವರೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಂದಿನಿಂದ ಮುಂದುವರೆಸಲಾಗುವುದು:	2020-21 ನೇ ಸಾಲಿಗೆ ಕೃಷಿ ಭಾಗ್ಯ ಯೋಜನೆಯನ್ನು ಮುಂದುವರೆಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಇದಕ್ಕಾಗಿ ರೂ.40.00 ಕೋಟಿ ಅನುದಾನ ಮೀಸಲಿರಿಸಲಾಗಿದೆ. ಸದರಿ ಅನುದಾನವನ್ನು ಕಳೆದ ಸಾಲಿನಲ್ಲಿ ಯೋಜನೆಯ ಮಾರ್ಗಸೂಚಿಯನ್ವಯ ಈಗಾಗಲೇ ಅನುಷ್ಠಾನ ಮಾಡಿರುವ ಘಟಕಗಳಿಗೆ ಮಾತ್ರ ಬಾಕಿ ಸಹಾಯಧನ ಪಾವತಿಸಲು ನಿಗಧಿಯಾಗಿರುತ್ತದೆ.
ಇ	ಸ್ಪಿಂಕ್ಲರ್ ಸೆಟ್ ಗಳಿಗೆ ಹೆಚ್ಚುವರಿ ಅನುದಾನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಎಂದಿನಿಂದ ಎಷ್ಟು ಮೊತ್ತದ ಅನುದಾನವನ್ನು ಹೆಚ್ಚಿಸಲಾಗುವುದು.	ಹೌದು, 2020-21ನೇ ಸಾಲಿನ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮಕ್ಕಾಗಿ ಆಯವ್ಯಯದಲ್ಲಿ ಒಟ್ಟು ರೂ.336.00 ಕೋಟಿ ಒದಗಿಸಲಾಗಿರುತ್ತದೆ. ರಾಜ್ಯದಲ್ಲಿ ಸೂಕ್ಷ್ಮ ನೀರಾವರಿ ಘಟಕಗಳಿಗೆ ಹೆಚ್ಚಿನ ಬೇಡಿಕೆಯಿರುವುದರಿಂದ ಈಗಾಗಲೇ ರೂ.530.00 ಕೋಟಿಗಳ ಕ್ರಿಯಾ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ. ಮುಂದುವರೆದು ಮೊದಲನೇ ಕಂತಿನ ಅನುದಾನವಾಗಿ ರೂ.256.78 ಕೋಟಿಗಳನ್ನು ಕೇಂದ್ರ ಸರ್ಕಾರದಿಂದ ಪಡೆಯಲಾಗಿರುತ್ತದೆ.

<table>
<tr>
<td>ಈ</td>
<td>ಗೋವು ಕಟ್ಟೆ, ಕೃಷಿ ಹೊಂಡ, ಕಟ್ಟೆ ದುರಸ್ತಿಗಳಿಂದ ಅಂತರ್ಜಲ ಹೆಚ್ಚಾಗಿರುವುದರಿಂದ ಜಲಾನಯನ ಕಾಮಗಾರಿಗಳಿಗೆ ಹೆಚ್ಚು ಅನುದಾಣ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ</td>
<td>ಜಲಾನಯನ ಕಾಮಗಾರಿಗಳ ಮೂಲಕ ಅಂತರ್ಜಲ ಹೆಚ್ಚಳಕ್ಕೆ ಅನುಕೂಲವಾಗುವಂತೆ ಪ್ರಸ್ತುತ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳ ಜೊತೆಗೆ 2021-22ನೇ ಸಾಲಿನಿಂದ ಕೇಂದ್ರ ಭೂ ಸಂಪನ್ಮೂಲ ಇಲಾಖೆಯಿಂದ ಜಾರಿಗೊಳಿಸಲಾಗುವ "ಹೊಸ ಪೀಳಿಗೆಯ ಜಲಾನಯನ ಅಭಿವೃದ್ಧಿ ಯೋಜನೆ" ಗೆ ರೂ.2196.51 ಕೋಟಿಗಳ ವೆಚ್ಚದಲ್ಲಿ 7.83ಲಕ್ಷ ಹೆಕ್ಟೇರ್ ಪ್ರದೇಶವನ್ನು ವಿವಿಧ ಜಲಾನಯನ ಚಟುವಟಿಕೆಗಳಡಿ ಉಪಚರಿಸಲು 161 ಯೋಜನೆಗಳಿಗೆ (projects) ರಾಜ್ಯದಿಂದ ಪ್ರಸ್ತಾವನೆಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ.</td>
</tr>
<tr>
<td>ಉ</td>
<td>ಹಾಗಿದ್ದಲ್ಲಿ, ಕಾಮಗಾರಿಗಳಿಗೆ ಎಂದಿನಿಂದ ಎಷ್ಟು ಮೊತ್ತದ ಅನುದಾನವನ್ನು ಹೆಚ್ಚಿಸಲಾಗುವುದು?</td>
<td>ಜಲಾನಯನ ಯೋಜನೆಗಳ ಅನುಷ್ಠಾನದ ಮೂಲಕ ಅಂತರ್ಜಲ ಹೆಚ್ಚಿಸಲು 2021-22ನೇ ಸಾಲಿಗೆ ಈ ಕೆಳಕಂಡಂತೆ ಯೋಜನಾವಾರು ಅನುದಾನವನ್ನು ಪ್ರಸ್ತಾಪಿಸಲಾಗುತ್ತದೆ
ರೂ.ಲಕ್ಷಗಳಲ್ಲಿ
<table>
<tr><th>ಕ್ರ.ಸಂ</th><th>ಯೋಜನೆ ಹೆಸರು</th><th>2021-22ನೇ ಸಾಲಿನಲ್ಲಿ ಇಲಾಖೆಯಿಂದ ಪ್ರಸ್ತಾಪಿಸಲಾಗುತ್ತಿರುವ ಒಟ್ಟು ಮೊತ್ತ</th></tr>
<tr><td>1</td><td>ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ</td><td>15000.00</td></tr>
<tr><td>2</td><td>ರಿವಾರ್ಡ್ ಯೋಜನೆ (Reward Project)</td><td>10000.00</td></tr>
<tr><td>3</td><td>ಜಲಾನಯ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ</td><td>22000.00</td></tr>
<tr><td>4</td><td>ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ-ಮಳೆಯಾಶ್ರಿತ ಪ್ರದೇಶ ಅಭಿವೃದ್ಧಿ</td><td>3000.00</td></tr>
<tr><td></td><td>ಒಟ್ಟು</td><td>50000.00</td></tr>
</table>
</td>
</tr>
</table>

ಸಂಖ್ಯೆ: AGRI-ASC/63/ 2020

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**41**
ಸದಸ್ಯರ ಹೆಸರು	:	ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸಬೇಕಾದ ದಿನಾಂಕ	:	07-12-2020
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

ಪ್ರಶ್ನೆ	ಉತ್ತರ
(ಅ) 2020ರ ಅಕ್ಟೋಬರ್ ಮಾಹೆಯಲ್ಲಿ ಮಹಾರಾಷ್ಟ್ರ ರಾಜ್ಯದಲ್ಲಿ ಸುರಿದ ಭಾರಿ ಮಳೆಯಿಂದ ವಿವಿಧ ಜಲಾಯಶಗಳಿಂದ ಹೆಚ್ಚುವರಿ ನೀರನ್ನು ಭೀಮಾನದಿಗೆ ಹರಿಬಿಟ್ಟ ಪರಿಣಾಮ ಪ್ರವಾಹ ಉಂಟಾಗಿ ಅಪಾರ ಪ್ರಮಾಣದ ಬೆಳೆನಷ್ಟ, ಪ್ರಾಣಹಾನಿ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ) ಬಂದಿದ್ದಲ್ಲಿ, ಸದರಿ ನಷ್ಟದ ಪ್ರಮಾಣ ಎಷ್ಟು: (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)	ಕಲಬುರ್ಗಿ, ವಿಜಯಪುರ, ರಾಯಚೂರು, ಯಾದಗಿರಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಒಟ್ಟು ರೂ.5480.21 ಕೋಟಿ ಅಂದಾಜು ಹಾನಿಯಾಗಿದ್ದು, ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ರೂ.583.61 ಕೋಟಿಗಳಾಗುತ್ತದೆ. (ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಿದೆ)
(ಇ) ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಮಂಜೂರು ಮಾಡಲಾದ ನಷ್ಟ ಪರಿಹಾರವೆಷ್ಟು;	ಅಕ್ಟೋಬರ್-2020 ರಲ್ಲಿ ಉಂಟಾದ ಪ್ರವಾಹದ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದಿಂದ ಅನುದಾನ ಕೋರಲಾಗಿದ್ದು, ಕೇಂದ್ರ ಸರ್ಕಾರದಿಂದ ಆರ್ಥಿಕ ನೆರವು ನಿರೀಕ್ಷಿಸಲಾಗಿದೆ. ರಾಜ್ಯ ಸರ್ಕಾರದಿಂದ ಈ ಜಿಲ್ಲೆಗಳಿಗೆ ಪ್ರವಾಹ ಪರಿಹಾರಗಳಿಗಾಗಿ ರೂ.60.91 ಕೋಟಿ ಹಾಗೂ ಬೆಳೆಹಾನಿ ಇನ್‌ಪುಟ್ ಸಬ್ಸಿಡಿಗಾಗಿ ರೂ.112.29 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)
(ಈ) ಸದರಿ ಅನುದಾನದಲ್ಲಿ ಕೈಗೊಂಡಿರುವ ನಷ್ಟದ ಪರಿಹಾರ ಹಾಗೂ ಕಾಮಗಾರಿಗಳು ಯಾವುವು; (ವಿವರ ನೀಡುವುದು)	
(ಉ) ಸಂತ್ರಸ್ಥರಿಗೆ ಪರಿಹಾರ ವಿತರಿಸಲಾಗಿದೆಯೇ; ಹಾಗಿಲ್ಲದಿದ್ದಲ್ಲಿ ಯಾವಾಗ ವಿತರಿಸಲಾಗುವುದು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?	

ಕಂಇ 595 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ವಿಧಾನ ಸಭೆಯ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 41 ಕ್ಕೆ ಅನುಬಂಧ

Districtwise details of Sector wise damages due to flood in October 2020 in Bhima River Basin

Rs. In Crores

		Crop loss			House Damages			Infra Structure			Total			
Sl.no	**District**	**Area affected**	**Estimated Loss**	**Relief Claimed**	**No of Houses**	**Estimated Loss**	**Relief Claimed**	**Estimated Loss**	**Relief Claimed**	**Other relief items**	**Estimated Loss**	**Relief Claimed**	**Amount Released for Relief**	**Amount Released for Input Subsidy**
1	Yadagiri	33755.38	252.85	34.83	1171	5.91	0.39	66.85	5.24	0.48	325.61	40.94	15.20	8.03
2	Vijapura	219073.00	1640.41	173.33	4669	24.74	2.32	251.37	23.46	2.10	1916.53	199.08	10.42	22.15
3	Raichur	76098.50	570.10	69.33	601	4.20	0.74	9.61	2.75	0.09	583.91	72.91	5.16	7.91
4	Kalburgi	182525.79	1661.62	125.26	3542	17.71	1.13	439.76	31.67	47.35	2119.09	205.22	20.13	49.06
5	Bidar	69113.00	517.49	55.18	440	2.20	0.14	15.38	10.12	0.01	535.07	65.45	10.00	25.14
	Total	**580565.67**	**4642.48**	**457.93**	**10423.00**	**54.76**	**4.72**	**782.98**	**73.24**	**50.03**	**5480.21**	**583.61**	**60.91**	**112.29**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 44
ಮಾನ್ಯ ಸದಸ್ಯರ ಹೆಸರು : ಶ್ರೀ ಹೂಲಗೇರಿ.ಡಿ.ಎಸ್.(ಲಿಂಗಸುಗೂರು)
ಉತ್ತರಿಸುವ ದಿನಾಂಕ : 07/12/2020
ಉತ್ತರಿಸುವ ಸಚಿವರು : ಮಾನ್ಯ ಉಪಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ.

ಕ್ರಸ	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿ ನೂತನ ಪ್ರವಾಸಿ ಮಂದಿರ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು:	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದ ಹಳೆಯ ಪ್ರವಾಸಿ ಮಂದಿರದ ಆವರಣದಲ್ಲಿ ಸ್ಥಳ ಲಭ್ಯವಿದ್ದು, ಅನುದಾನದ ಲಭ್ಯತೆಯನುಸಾರ ನೂತನ ಪ್ರವಾಸಿ ಮಂದಿರ ನಿರ್ಮಿಸಲಾಗುವುದು.
ಆ)	ಈ ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಆಮದಿಹಾಳ ಗ್ರಾಮದ ಹತ್ತಿರ ಲೋಕೋಪಯೋಗಿ ಇಲಾಖೆಯ ವತಿಯಿಂದ ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು:	ಈ ಕಾಮಗಾರಿಯು ಮೂಲತ: ಸಮಾಜ ಕಲ್ಯಾಣ ಇಲಾಖೆಯ ಕಾಮಗಾರಿಯಾಗಿರುತ್ತದೆ. ಲೋಕೋಪಯೋಗಿ ಇಲಾಖೆಯ ಎಸ್.ಸಿ.ಪಿ. ಯೋಜನೆಯಡಿ 2020-21ನೇ ಸಾಲಿನ ಅನುದಾನದಲ್ಲಿ ಈ ಕಾಮಗಾರಿಯನ್ನು ಕೈಗೊಳ್ಳಲು ರೂ.25.00 ಕೋಟಿ ಮೊತ್ತಕ್ಕೆ ಡಿ.ಪಿ.ಆರ್ ತಯಾರಿಸಲಾಗಿದ್ದು ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
ಇ)	ಈ ತಾಲ್ಲೂಕಿನಲ್ಲಿ ಹಾದು ಹೋಗುವ SH-41 ಲಿಂಗಸುಗೂರು ದಿಂದ ಶಿರಡೋಣ ಹಾಗೂ SH-20 ರಾಯಚೂರುದಿಂದ ಬಾಚಿವರೆಗೆ ಎರಡು ರಾಜ್ಯ ಹೆದ್ದಾರಿಗಳು ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ಎರಡೂ ರಾಜ್ಯ ಹೆದ್ದಾರಿಗಳು ಅಲ್ಲಲ್ಲಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಈ)	ಹಾಗಿದ್ದಲ್ಲಿ, ರಾಜ್ಯ ಹೆದ್ದಾರಿಗಳನ್ನು ತ್ವರಿತವಾಗಿ ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	1)ರಾಜ್ಯ ಹೆದ್ದಾರಿ-41, ಲಿಂಗಸುಗೂರು-ಶಿರಡೋಣ ರಸ್ತೆಯು ಒಟ್ಟು 24.20 ಕಿಮೀ ಇದ್ದು, 2018-19ನೇ ಸಾಲಿನಲ್ಲಿ ರೂ.150.00 ಲಕ್ಷ ಅಂದಾಜು ಮೊತ್ತದಲ್ಲಿ ಸರಪಳಿ 179-182, 183-189 ಮತ್ತು 195-196.70 ಭಾಗದ ಮರು ಡಾಂಬರೀಕರಣವನ್ನು ಪೂರ್ಣಗೊಳಿಸಿದೆ. ಉಳಿದ ಭಾಗದಲ್ಲಿ ವಾರ್ಷಿಕ ನಿರ್ವಹಣೆ ಅಡಿಯಲ್ಲಿ ಗುಂಡಿ ಮುಚ್ಚುವ ಕಾಮಗಾರಿ ಕೈಗೊಂಡಿದ್ದು, ರೂ.12.00 ಲಕ್ಷಗಳ ಕಾಮಗಾರಿ ಪೂರ್ಣಗೊಂಡಿರುತ್ತದೆ ಹಾಗೂ ರೂ.15.00 ಲಕ್ಷಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಪ್ರಸ್ತುತ ನೆರೆ ಪರಿಹಾರದಡಿ (flood damage relief works) 3 ಕಿಮೀ ರಸ್ತೆ ಅಭಿವೃದ್ಧಿಗೊಳಿಸಲು ರೂ.1.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

		2) ರಾಜ್ಯ ಹೆದ್ದಾರಿ-20, ರಾಯಚೂರು-ಭಾಚಿ ರಸ್ತೆಯು ಒಟ್ಟು 46 ಕಿಮೀ ಆಗಿದ್ದು, ವಾರ್ಷಿಕ ನಿರ್ವಹಣೆ ಕಾಮಗಾರಿಗಳನ್ನು ಕೈಗೊಂಡು ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ಸಂಖ್ಯೆ: ಲೋಇ 31 ಬಿಎಲ್‌ಕ್ಯೂ 2020

(ಗೋವಿಂದ.ಎಂ.ಕಾರಜೋಳ)
ಉಪಮುಖ್ಯಮಂತ್ರಿ,
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 46
ಸದಸ್ಯರ ಹೆಸರು : ಶ್ರೀ ಮಂಜುನಾಥ್.ಎ
(ಮಾಗಡಿ)
ಉತ್ತರಿಸುವ ದಿನಾಂಕ : 07-12-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಾನಂದೂರು ಗ್ರಾಮದ ಸ.ನಂ.106, 109, 110, 111 ರ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಲ್ಯಾಂಡ್ ಡೆವಲಪರ್ಸ್‌ಗಳು ಬಡಾವಣೆ ನಿರ್ಮಾಣ ಮಾಡಲು 60 ಅಡಿ ರಸ್ತೆ ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಾನಂದೂರು ಗ್ರಾಮದ ಸ.ನಂ.106, 109, 110, 111 ರ ಸರ್ಕಾರಿ ಜಮೀನಿನಲ್ಲಿ ಈ ಹಿಂದಿನಿಂದಲೂ ರೂಢಿ ದಾರಿ ಅಸ್ತಿತ್ವದಲ್ಲಿರುತ್ತದೆ.
ಆ)	ಬಂದಿದ್ದಲ್ಲಿ ಸುಮಾರು 5-20 ಎ/ಗುಂ ಜಮೀನನ್ನು ಸರ್ಕಾರಿ ಗೋಮಾಳದಲ್ಲಿ ಕಾಯ್ದಿರಿಸಲಾಗಿದೆಯೇ?	ಇಲ್ಲ; ಗ್ರಾಮಸ್ಥರ ಕೋರಿಕೆಯಂತೆ ಪ್ರಸ್ತಾವನೆ ತಹಶೀಲ್ದಾರ್ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.
ಇ)	ಸರ್ವೆ ನಂ.106 ರಲ್ಲಿ ಅನಧೀಕೃತವಾಗಿ ಸರ್ಕಾರಿ ಗೋಮಾಳ ಜಮೀನನ್ನು ಪೋಡಿ ದುರಸ್ಥಿ ಮಾಡಿಸಿಕೊಂಡು ಮಂಜೂರಿದಾರರ ಅನುಭವಕ್ಕೂ ಪೋಡಿಯಾಗಿರುವ ಸ್ಥಳಕ್ಕೆ ವ್ಯತ್ಯಾಸ ಮಾಡಿ ಸರ್ಕಾರಿ ಗೋಮಾಳ ಜಮೀನನ್ನು ಕಬಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಾನಂದೂರು ಗ್ರಾಮದ ಸ.ನಂ.106 ರಲ್ಲಿ ಮಂಜೂರಿದಾರರು ಪೋಡಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಗಳ ಮೇರೆಗೆ ಸರ್ವೆ ನಂಬರ್ 106 ರಲ್ಲಿ ನಮೂನೆ 1 ರಿಂದ 5 ನ್ನು ಭರ್ತಿ ಮಾಡಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡಿರುತ್ತದೆ. ಏಕವ್ಯಕ್ತಿ ಪ್ರಕರಣದಲ್ಲಿ ತಹಶೀಲ್ದಾರ್, ರಾಮನಗರ ಇವರು ಮಂಜೂರಿ ದಾಖಲೆಗಳನ್ನು ಪರಿಶೀಲಿಸಿ ದಾಖಲೆಗಳ ಲಭ್ಯತೆಯ ಆಧಾರದಲ್ಲಿ ಮಂಜೂರಿಯು ನೈಜವಾಗಿರುವುದಾಗಿ ಹಾಗೂ ಪೋಡಿ ಮಾಡುವಂತೆ ಆದೇಶ ಮಾಡಿರುತ್ತಾರೆ. ಮಂಜೂರಿದಾರರುಗಳ ಮಂಜೂರಿ ದಾಖಲೆಗಳು, ಸ್ವಾಧೀನಾನುಭವ ಮತ್ತು ರೆವಿನ್ಯೂ ನಕ್ಷೆ ಮತ್ತು ತಹಸೀಲ್ದಾರ್, ರಾಮನಗರ ಇವರಿಂದ ಅನುಮೋದನೆಗೊಂಡ ಪೋಡಿ ನಕ್ಷೆಯಂತೆ ಪೋಡಿ ದುರಸ್ತಿ ಮಾಡಲಾಗಿರುತ್ತದೆ. ಸದರಿ ಪೋಡಿ ದುರಸ್ತಿಯನ್ನು ಸರ್ಕಾರಿ ಸುತ್ತೋಲೆಗಳು ಮತ್ತು ಇಲಾಖೆಯ ಸುತ್ತೋಲೆಗಳ ನಿರ್ದೇಶನಗಳಿಗನುಸಾರವಾಗಿ ನೈಜ ಮಂಜೂರಿದಾರರಿಗೆ ಮಾತ್ರ ಪೋಡಿ ಮಾಡಿರುವುದು

		ಕ್ರಮಬದ್ಧವಾಗಿದ್ದು, ಸರ್ಕಾರಿ ಜಮೀನಿನ ಕಬಳಿಕೆ ಆಗಿರುವುದಿಲ್ಲ.
ಈ)	ಅನಧಿಕೃತವಾಗಿ ಬಡಾವಣೆ ನಿರ್ಮಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಿಂದ ಸಾರ್ವಜನಿಕರಾಗಲಿ ರೈತರಿಗಾಗಲೀ ಮತ್ತು ಬೇರೆ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಯಾವುದೇ ಉದ್ದೇಶ ಇಲ್ಲದಿದ್ದರೂ 50 ಎಕರೆ ಜಮೀನನ್ನು ಲ್ಯಾಂಡ್ ಡೆವಲಪರ್ಸ್ ಕ್ರಯಕ್ಕೆ ಪಡೆದಿರುವುದರಿಂದ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಉಲ್ಲಂಘನೆಯಾಗಿರುವುದಿಲ್ಲವೆ:	ಬಾನಂದೂರು ಗ್ರಾಮದಲ್ಲಿ ಸಂಪರ್ಕ ರಸ್ತೆ ಕಲ್ಪಿಸುವ ಸುತ್ತಮುತ್ತ ಬರುವ ಜಮೀನುಗಳಲ್ಲಿ ಕ್ರಯದ ವಹಿವಾಟು ನಡೆದಿರುವ ಒಟ್ಟು 12.01.08 ಎ:ಗು ಜಮೀನಿಗೆ ಸಂಬಂಧಿಸಿದಂತೆ ಕರ್ನಾಟಕ ಭೂ-ಸುಧಾರಣೆ ಕಾಯ್ದೆ 1961ರ ಕಲಂ 79(ಎ) ಮತ್ತು (ಬಿ) ಉಲ್ಲಂಘಿಸಿರುವ ಬಗ್ಗೆ ಒಟ್ಟು 05 ಪ್ರಕರಣ ದಾಖಲಾಗಿದ್ದು, ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಅಂತಿಮವಾಗಿ ಪ್ರಕರಣ ಕೈಬಿಡಲಾಗಿರುತ್ತದೆ. ಪ್ರಸ್ತುತ ಕರ್ನಾಟಕ ಭೂ-ಸುಧಾರಣೆ ಕಾಯ್ದೆ 1961ರ ಕಾಯ್ದೆಗೆ ತಿದ್ದುಪಡಿ ತಂದು ಕಲಂ 79(ಎ) ಮತ್ತು (ಬಿ) ಅನ್ನು ನಿರಸನಗೊಳಿಸಲಾಗಿರುತ್ತದೆ.
ಉ)	ಹಾಗಿದ್ದಲ್ಲಿ, ಉಲ್ಲಂಘನೆ ಮಾಡಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?	ಉದ್ಭವಿಸುವುದಿಲ್ಲ.

ಸಂಖ್ಯೆ: ಆರ್‌ಡಿ 156 ಎಲ್‌ಜಿಕ್ಯೂ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	57
2	ಸದಸ್ಯರ ಹೆಸರು	ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)
3	ಉತ್ತರಿಸಬೇಕಾದ ದಿನಾಂಕ	07.12.2020
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಚಿಂತಾಮಣಿ ತಾಲ್ಲೂಕಿನಲ್ಲಿ ಮಂಜೂರಾಗಿರುವ ನಾಡಕಛೇರಿಗಳ ಕಾಮಗಾರಿಯು ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕೈವಾರ ನಾಡಕಛೇರಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು 2019-20ನೇ ಸಾಲಿನಲ್ಲಿ ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದ ಮೂಲಕ ರೂ.18,84,000/-ಗಳ ಅನುದಾನವನ್ನು ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಆದರೆ ಆ ಸಮಯದಲ್ಲಿ ಕೈವಾರ ನಾಡಕಛೇರಿ ಕಟ್ಟಡದ ಜಮೀನಿನ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿರುವುದರಿಂದ, ಈ ಅನುದಾನವನ್ನು ಗೌರಿಬಿದನೂರು ತಾಲ್ಲೂಕು, ನಗರಗೆರೆ ಹೋಬಳಿ ನಾಡಕಛೇರಿ ಕಟ್ಟಡ ನಿರ್ಮಾಣಕ್ಕೆ ಜಿಲ್ಲಾಧಿಕಾರಿಗಳ ಹಂತದಲ್ಲಿಯೇ ವರ್ಗಾಯಿಸಿಕೊಳ್ಳಲಾಗಿರುತ್ತದೆ ನಂತರ, ಚಿಕ್ಕಬಳ್ಳಾಪುರ ಜಿಲ್ಲೆಯ ವಿಶೇಷ ಅಭಿವೃದ್ಧಿ ಯೋಜನೆ ಅನುದಾನದಲ್ಲಿನ ರೂ.30,00,000/- ಗಳನ್ನು ಜಿಲ್ಲಾಧಿಕಾರಿಗಳ ಹಂತದಲ್ಲಿಯೇ ಕೈವಾರ ನಾಡಕಛೇರಿ ನಿರ್ಮಾಣಕ್ಕಾಗಿ ಹಂಚಿಕೆ ಮಾಡಿಕೊಂಡಿದ್ದು, ಪ್ರಸ್ತುತ ಸದರಿ ನಾಡಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿಯು ಸ್ಥಗಿತಗೊಂಡಿಲ್ಲದೇ, ತಾರಸಿ ನಿರ್ಮಾಣ ಕಾರ್ಯದ ಹಂತದಲ್ಲಿರುತ್ತದೆ. ಮುಂದುವರೆದು, 2019-20ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಂಇ 60 ಎಜಿಎಸ್ 2018 (ಭಾಗ-2); ದಿನಾಂಕ:23.01.2020 ರಲ್ಲಿ ಒದಗಿಸಿರುವ ಅನುದಾನವನ್ನು ಆಧರಿಸಿ, ಚಿಂತಾಮಣಿ ತಾಲ್ಲೂಕಿನ ಅಂಬಾಜಿದುರ್ಗ ಮತ್ತು ಚಿಲಕಲನೇರ್ಪು ನಾಡಕಛೇರಿಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ತಲಾ ರೂ.3,52,634-00 ರಂತೆ ಒಟ್ಟು ರೂ.7,05,268-00 ಗಳನ್ನು ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದ ಮೂಲಕ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಜೊತೆಗೆ, ಚಿಲಕಲನೇರ್ಪು ನಾಡಕಛೇರಿ ಕಟ್ಟಡ ನಿರ್ಮಾಣಕ್ಕೆ ಚಿಕ್ಕಬಳ್ಳಾಪುರ ಜಿಲ್ಲೆಯ ವಿಶೇಷ ಅಭಿವೃದ್ಧಿ ಯೋಜನೆ ಅನುದಾನದಲ್ಲಿ ಹಂಚಿಕೆ ಮಾಡಿದ ರೂ.30,00,000/- ಗಳನ್ನು ಹಾಗೂ ನಿರ್ದೇಶನಾಲಯದಿಂದ ಹಂಚಿಕೆ ಮಾಡಿರುವ ರೂ.3,52,634-00 ಗಳ ಅನುದಾನದಿಂದ ಶೇ.90 ರಷ್ಟು ಕಾಮಗಾರಿಯು ಪೂರ್ಣಗೊಂಡಿದ್ದು, ಕಾಮಗಾರಿಯು ಸ್ಥಗಿತಗೊಂಡಿರುವುದಿಲ್ಲ. ಅಂಬಾಜಿದುರ್ಗ ನಾಡಕಛೇರಿ ಕಟ್ಟಡ ನಿರ್ಮಾಣಕ್ಕೆ ನಿರ್ದೇಶನಾಲಯದಿಂದ ಬಿಡುಗಡೆ ಮಾಡಿರುವ ರೂ.3,52,634-00 ಗಳ ಅನುದಾನದಿಂದ ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಸದರಿ ನಾಡಕಛೇರಿ ಕಟ್ಟಡ ಕಾಮಗಾರಿಯು ಸ್ಥಗಿತಗೊಂಡಿರುವುದಿಲ್ಲ. ಪ್ರಸ್ತುತ 2020-21ನೇ ಸಾಲಿನಲ್ಲಿ ಹಂಚಿಕೆಯಾಗಿರುವ ಅನುದಾನದಲ್ಲಿ ಚಿಲಕಲನೇರ್ಪು ಹಾಗೂ ಅಂಬಾಜಿದುರ್ಗ ನಾಡಕಛೇರಿಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಎರಡನೇ ಕಂತಿನಲ್ಲಿ ಪ್ರತಿ ನಾಡಕಛೇರಿಗೆ ರೂ.9,14,634-00 ಗಳಂತೆ ಒಟ್ಟು ರೂ.18,29,268-00 ಗಳನ್ನು ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದ ಮೂಲಕ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
ಆ)	ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;	ಅನ್ವಯಿಸುವುದಿಲ್ಲ.

ಇ) ನಾಡಕಛೇರಿಗಳ ನಿರ್ಮಾಣಕ್ಕೆ ಇಲ್ಲಿಯ ವರೆಗೆ ಮಾಡಲಾಗಿರುವ ಮೊತ್ತ ಎಷ್ಟು; (ಕಳೆದ ಮೂರು ವರ್ಷಗಳ ವಿವರ ನೀಡುವುದು)

ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ನಾಡಕಛೇರಿಗಳಿಗೆ ಕಟ್ಟಡ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಕ್ಕಾಗಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುವಂತೆ, ನಿರ್ದೇಶನಾಲಯದ ಅಧಿಕೃತ ಜ್ಞಾಪನ ಸಂಖ್ಯೆ: ಅಜನಿ/ಲೆಕ್ಕ-64/2019-20; ದಿನಾಂಕ: 26.06.2019, 18.01.2020 ಮತ್ತು 30.01.2020 ರಂತೆ, ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಈ ಕೆಳಕಂಡ ನಾಡಕಛೇರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ಕ್ರ. ಸಂ.	ತಾಲ್ಲೂಕು	ಹೋಬಳಿ	ಅನುದಾನ (ರೂ. ಲಕ್ಷಗಳಲ್ಲಿ)	ಷರಾ
01	ಚಿಂತಾಮಣಿ	ಕೈವಾರ	12,25,500/- 6,58,500/-	
ಒಟ್ಟು			18,84,000/-	
02	ಚಿಂತಾಮಣಿ	ಅಂಬಾಜಿ ದುರ್ಗ	3,52,634/-	ಪ್ರತಿ ನಾಡಕಛೇರಿಗೆ ರೂ.9,14,634/- ಗಳಂತೆ ಒಟ್ಟು ರೂ. 18,29,268/- ಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
03		ಚಿಲಕಲನೇರ್ಪು	3,52,634/-	

ಈ) ಯಾವ ಯಾವ ಗುತ್ತಿಗೆದಾರರಿಗೆ ಈ ತನಕ ಎಷ್ಟು ಮೊತ್ತ ನೀಡಲಾಗಿದೆ; (ಕಳೆದ ಮೂರು ವರ್ಷಗಳ ವಿವರ ನೀಡುವುದು)

ತಾಲ್ಲೂಕು	ಹೋಬಳಿ	ನಿರ್ದೇಶನಾಲಯದಿಂದ ಬಿಡುಗಡೆ ಮಾಡಿರುವ ಅನುದಾನ	ಗುತ್ತಿಗೆದಾರರಿಗೆ ನೀಡಿರುವ ಅನುದಾನ (ರೂ. ಲಕ್ಷಗಳಲ್ಲಿ)	ಗುತ್ತಿಗೆದಾರರ ಹೆಸರು
ಚಿಂತಾಮಣಿ	ಕೈವಾರ	18,84,000-00 (*)	ಚಿಕ್ಕಬಳ್ಳಾಪುರ ಜಿಲ್ಲೆಯ ವಿಶೇಷ ಅಭಿವೃದ್ಧಿ ಯೋಜನೆ ಅನುದಾನದಲ್ಲಿನ ರೂ.30.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳ ಹಂತದಲ್ಲಿಯೇ ಕೈವಾರ ನಾಡಕಛೇರಿ ನಿರ್ಮಾಣಕ್ಕಾಗಿ ಹಂಚಿಕೆ ಮಾಡಿಕೊಂಡಿದ್ದು, ಮುಂಗಡವಾಗಿ ರೂ.25.00 ಲಕ್ಷಗಳನ್ನು ಸದರಿ ಯೋಜನೆಯಡಿ ಬಿಡುಗಡೆ ಮಾಡಲಾಗಿರುತ್ತದೆ.	ಕೆ.ಹೆಚ್.ಬಿ
	ಅಂಬಾಜಿದುರ್ಗ	3,52,634-00	3,52,634/-	ನಿರ್ಮಿತಿ ಕೇಂದ್ರ
	ಚಿಲಕಲನೇರ್ಪು	3,52,634-00	3,52,634/-	ಕೆ.ಹೆಚ್.ಬಿ

ಟಿಪ್ಪಣಿ: (*)-ನಿರ್ದೇಶನಾಲಯದಿಂದ ಕೈವಾರ ನಾಡಕಛೇರಿ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆ ಮಾಡಿದ ಅನುದಾನ ರೂ.18,84,000-00 ಗಳನ್ನು ಗೌರಿಬಿದನೂರು ತಾಲ್ಲೂಕು, ನಗರಗೆರೆ ಹೋಬಳಿ ನಾಡಕಛೇರಿ ಕಟ್ಟಡ ನಿರ್ಮಾಣಕ್ಕೆ ಜಿಲ್ಲಾಧಿಕಾರಿಗಳ ಹಂತದಲ್ಲಿಯೇ ವರ್ಗಾಯಿಸಿ ಕೊಳ್ಳಲಾಗಿರುತ್ತದೆ.

ಉ) ಯಾವ ಕಾಲಮಿತಿಯೊಳಗೆ ಬಾಕಿ ಮೊತ್ತ ಬಿಡುಗಡೆ ಮಾಡಲಾಗುವುದು?

ಸರ್ಕಾರದ ಆದೇಶ ಸಂಖ್ಯೆ:ಕಂಇ 28 ಎಜೆಎಸ್ 2020; ದಿನಾಂಕ:26.11.2020 ರನ್ವಯ, 2020-21ನೇ ಸಾಲಿನಲ್ಲಿ ಹಂಚಿಕೆಯಾಗಿರುವ ರೂ.1500.00 ಲಕ್ಷಗಳ ಪೈಕಿ, ರೂ.750.00 ಲಕ್ಷಗಳನ್ನು ಬಿಡುಗಡೆ ಮಾಡಿ ಆದೇಶಿಸಲಾಗಿರುತ್ತದೆ. ಸದರಿ ಮೊತ್ತದಲ್ಲಿ, ಚಿಲಕಲನೇರ್ಪು ಹಾಗೂ ಅಂಬಾಜಿದುರ್ಗ ನಾಡಕಛೇರಿಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಎರಡನೇ ಕಂತಿನ ಅನುದಾನದಲ್ಲಿ ಪ್ರತಿ ನಾಡಕಛೇರಿಗೆ ರೂ.9,14,634-00 ಗಳಂತೆ ಒಟ್ಟು ರೂ. 18,29,268-00ಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಕಂಇ 51 ಎಜೆಎಸ್ 2020

(ಆರ್. ಅಶೋಕ)
ಕಂದಾಯ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	150
ಸದಸ್ಯರ ಹೆಸರು	:	ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ)
ಉತ್ತರಿಸುವ ದಿನಾಂಕ	:	07.12.2020.
ಉತ್ತರಿಸುವ ಸಚಿವರು	:	ಉಪಮುಖ್ಯಮಂತ್ರಿ ಲೋಕೋಪಯೋಗಿ ಇಲಾಖೆ

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ರಾಷ್ಟ್ರೀಯ ಹೆದ್ದಾರಿ-373ರ ದೊಡ್ಡಹಳ್ಳಿ-ಬಿಳಿಕೆರೆ ಜಂಕ್ಷನ್ ರಸ್ತೆಯ ಸರಪಳಿ 537.500 ಕಿ.ಮೀ ರಿಂದ 581.700 ಕಿ.ಮೀ. ರವರೆಗೆ ಅಭಿವೃದ್ದಿ ಕಾಮಗಾರಿ (ಪ್ಯಾಕೇಜ್-4) ಕಾಮಗಾರಿಗಾಗಿ 2019-20ನೇ ಸಾಲಿನಲ್ಲಿ ಡಿ.ಪಿ.ಆರ್. ಅನ್ನು ಅನುಮೋದನೆಗಾಗಿ ಎನ್.ಹೆಚ್.ಎ.ಐ. ನ ಸಿ.ಇ.ಆರ್.ಓ. ರವರಿಗೆ ಸಲ್ಲಿಸಿದ್ದು, ಸದರಿ ಕಾಮಗಾರಿಯ ಅನುದಾನವನ್ನು ಬೇರೆಡೆಗೆ ವರ್ಗಾಯಿಸಿ ಸದರಿ ಡಿ.ಪಿ.ಆರ್. ಗೆ ಅನುಮೋದನೆ ನೀಡಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಹೆದ್ದಾರಿ 373 ರ ಬೇಲೂರು-ಬಿಳಿಕೆರೆ ರಸ್ತೆಯ ಸರಪಳಿ 537.500 ರಿಂದ 581.700 ಕಿ.ಮೀ. ವರೆಗೆ (ಯಡೇಗೌಡನಹಳ್ಳಿ ಬಳಿಯಿಂದ-ಬಿಳಿಕೆರೆ ಜಂಕ್ಷನ್‌ವರೆಗೆ : ಪ್ಯಾಕೇಜ್-4) ರಸ್ತೆ ಅಭಿವೃದ್ಧಿಯನ್ನು 2019-20ನೇ ಸಾಲಿನ ವಾರ್ಷಿಕ ಕಾಮಗಾರಿಗಳ ಯೋಜನೆಯಡಿಯಲ್ಲಿ ಸೇರ್ಪಡೆಗೊಳಿಸಲಾಗಿತ್ತು. ಅದರಂತೆ, ಸದರಿ ಕಾಮಗಾರಿಯ ರೂ.361.62 ಕೋಟಿ ಅಂದಾಜು ಮೊತ್ತದ ವಿವರವಾದ ಯೋಜನಾ ವರದಿಯನ್ನು ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು ರವರ ವತಿಯಿಂದ ಪ್ರಾದೇಶಿಕ ಅಧಿಕಾರಿ, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ಬೆಂಗಳೂರುರವರಿಗೆ ದಿನಾಂಕ: 21.01.2020 ರಂದು ಸಲ್ಲಿಸಲಾಗಿತ್ತು. ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯವು ಸದರಿ ಯೋಜನಾ ವರದಿ ಕುರಿತು ಕೆಲವು ಮಾರ್ಪಾಡುಗಳನ್ನು ಮಾಡಲು ಸೂಚಿಸಿದ್ದ ಮೇರೆಗೆ ಮಾರ್ಪಾಡುಗಳನ್ನು ಮಾಡಿ ಯೋಜನಾ ವರದಿಯನ್ನು ಸಲ್ಲಿಸಲು ಕ್ರಮ ವಹಿಸಲಾಗಿತ್ತು. ಈ ನಡುವೆ 2019-20ನೇ ಆರ್ಥಿಕ ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ 2020-21ನೇ ಸಾಲಿನ ವಾರ್ಷಿಕ ಕಾಮಗಾರಿಗಳ ಕ್ರಿಯಾ ಯೋಜನೆಯಲ್ಲಿ ಸದರಿ ಕಾಮಗಾರಿಯನ್ನು ಪ್ರಸ್ತಾಪಿಸಲಾಗಿದೆ. ಸದರಿ ಕಾಮಗಾರಿಯ ಅನುದಾನವನ್ನು ಬೇರೆಡೆಗೆ ವರ್ಗಾಯಿಸಿ ಡಿ.ಪಿ.ಆರ್.ಗೆ ಅನುಮೋದನೆ ನೀಡಿರುವುದಿಲ್ಲ. ಪ್ರಸ್ತುತ, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದ ವತಿಯಿಂದ ಅನುಮೋದನೆ ಯಾಗಿರುವ 2020-21ನೇ ಸಾಲಿನ ವಾರ್ಷಿಕ ಕಾಮಗಾರಿಗಳ ಯೋಜನೆಯಲ್ಲಿ ಸದರಿ ಕಾಮಗಾರಿಯು ಸೇರ್ಪಡೆಗೊಂಡಿರದ ಕಾರಣ, ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.
ಆ.	ಹಾಗಿದ್ದಲ್ಲಿ, ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳದಿರಲು ಕಾರಣಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	

ಇ.	ಸದರಿ ಕಾಮಗಾರಿಯನ್ನು 2020-21ನೇ ಸಾಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಿ ಅನುಮೋದನೆ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು).	ಪ್ರಸ್ತುತ, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದ ವತಿಯಿಂದ ಅನುಮೋದನೆಯಾಗಿರುವ 2020-21ನೇ ಸಾಲಿನ ವಾರ್ಷಿಕ ಕಾಮಗಾರಿಗಳ ಯೋಜನೆಯಲ್ಲಿ ಸದರಿ ಕಾಮಗಾರಿಯು ಸೇರ್ಪಡೆ ಗೊಂಡಿರುವುದಿಲ್ಲ. ಮುಂದುವರೆದು, 2020-21 ರಿಂದ 2024-25ನೇ ಸಾಲಿನ ಅವಧಿಯಲ್ಲಿ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದ ವತಿಯಿಂದ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಪಟ್ಟಿಯಲ್ಲಿ ಅನುಮೋದನೆ ನಿರೀಕ್ಷಿಸಿದೆ. ಅನುಮೋದನೆ ದೊರೆತ ನಂತರ ಕಾಮಗಾರಿಯ ಅನುಷ್ಠಾನ ಪ್ರಕ್ರಿಯೆ ಮುಂದುವರಿಸಲಾಗುವುದು.

ಕಡತ ಸಂಖ್ಯೆ: ಲೋಇ 239 ಸಿಎನ್‌ಹೆಚ್ 2020 (ಇ)

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿ
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	173
ಸದಸ್ಯರ ಹೆಸರು	:	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸುವ ದಿನಾಂಕ	:	07.12.2020
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ

	ಪ್ರಶ್ನೆಗಳು	ಉತ್ತರಗಳು
ಅ)	2019-20 ಮತ್ತು 2020-21 ನೇ ಸಾಲಿನಲ್ಲಿ ಭೀಕರ ಮಳೆ ಮತ್ತು ಪ್ರವಾಹದಿಂದ ಬೆಳಗಾವಿ ಜಿಲ್ಲೆ ಕಿತ್ತೂರು ಮತಕ್ಷೇತ್ರದ ರಸ್ತೆಗಳು ತುಂಬಾ ಹಾನಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಸದರಿ ಹಾನಿಗೊಳಗಾದ ಪಟ್ಟಿಯಲ್ಲಿ ಎಂ.ಕೆ. ಹುಬ್ಬಳ್ಳಿ, ಬೈಲವಾಡ, ಸಂಪಗಾಂವ-ಕರಡಿಗುದ್ದಿ ಮತ್ತು ಚಿಕ್ಕಬಾಗೇವಾಡಿ, ಎಂ. ಕೆ. ಹುಬ್ಬಳ್ಳಿ ರಸ್ತೆಗಳು ಸೇರಿರುವುದೇ;	ಅತೀವೃಷ್ಠಿ ಪ್ರವಾಹದಿಂದ ಹಾನಿಗೊಳಗಾದ ಕಾಮಗಾರಿ ಪಟ್ಟಿಗಳಲ್ಲಿ ಬೆಳಗಾವಿ ಜಿಲ್ಲೆ ಕಿತ್ತೂರು ಮತಕ್ಷೇತ್ರದ ಈ ಕೆಳಗಿನ ರಸ್ತೆ ಭಾಗಗಳು ಸೇರಿರುತ್ತದೆ. 1. ಎಂ. ಕೆ. ಹುಬ್ಬಳ್ಳಿ ಬೈಲಹೊಂಗಲ ಜಿ.ಮು.ರ (ಕಿಮೀ. 0.00 ರಿಂದ 2.07, 13.80 ರಿಂದ 16.17) 5.69 ಕಿ.ಮೀ. 2. ಸಂಪಗಾಂವ ಕರಡಿಗುದ್ದಿ ಜಿ.ಮು.ರ (ಕಿಮೀ. 0.40 ರಿಂದ 2.00 & 10.45 ರಿಂದ 11.20) 2.20 ಕಿ.ಮೀ. ಆದರೆ, ಚಿಕ್ಕಬಾಗೇವಾಡಿ-ಎಂ.ಕೆ.ಹುಬ್ಬಳ್ಳಿ ರಸ್ತೆಯು ನಾಗರಗಾಳಿ-ಕಟಕೋಳ ರಾಜ್ಯ ಹೆದ್ದಾರಿ-138 ರ ಭಾಗವಾಗಿದ್ದು, ಈ ರಸ್ತೆಯು ರಾಷ್ಟ್ರೀಯ ಹೆದ್ದಾರಿಯಿಂದ ಬರುವ ಭಾರಿ ಹಾಗೂ ಲಘು ವಾಹನಗಳ ಹೆಚ್ಚಿನ ಸಂಚಾರದಿಂದ ಹಾಳಾಗಿದ್ದರಿಂದ ಚಿಕ್ಕಬಾಗೇವಾಡಿ-ಎಂ.ಕೆ.ಹುಬ್ಬಳ್ಳಿ ರಸ್ತೆಯು ಅತಿವೃಷ್ಟಿಯಿಂದ ಹಾಳಾದ ರಸ್ತೆಯ ಪಟ್ಟಿಯಲ್ಲಿ ಸೇರಿರುವುದಿಲ್ಲ.
ಇ)	ಹಾಗಿದ್ದಲ್ಲಿ, ಈ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;	1) ಎಂ. ಕೆ. ಹುಬ್ಬಳ್ಳಿ ಬೈಲವಾಡ ಸದರಿ ರಸ್ತೆ ಕಿ.ಮೀ. 2.00 ರಿಂದ 3.00 ಹಾಗೂ 5.00 ರಿಂದ 6.00 ಕಾಮಗಾರಿಯನ್ನು ರೂ.200.00 ಲಕ್ಷಗಳ ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲು ಟೆಂಡರ್ ಕರೆದಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. 2) ಸಂಪಗಾಂವ ಕರಡಿಗುದ್ದಿ ರಸ್ತೆ ಕಿ.ಮೀ. 0.40 ಹಾಗೂ 1.80 ರಲ್ಲಿ ಹಾನಿಗೊಳಗಾದ ಸೇತುವೆ ಮರು ನಿರ್ಮಾಣವನ್ನು ರೂ.100.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಂಡಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. 3) ಎಂ. ಕೆ. ಹುಬ್ಬಳ್ಳಿ ಚಿಕ್ಕಬಾಗೇವಾಡಿ ರಸ್ತೆಯು ನಾಗರಗಾಳಿ ಕಟಕೋಳ ರಾಜ್ಯ ಹೆದ್ದಾರಿ-138 ರ ಭಾಗವಾಗಿದ್ದು, ಸದರಿ ರಸ್ತೆಯ ಚೈ. 53.85 ರಿಂದ 56.48 ರವರೆಗೆ ಈಗಾಗಲೇ 2015-16ನೇ ಸಾಲಿನಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಅಭಿವೃದ್ಧಿಪಡಿಸಲಾಗಿರುತ್ತದೆ. ಬಾಕಿ ಉಳಿದ ಕಿಮೀ. 51.65

		ಪ್ರಶ್ನೆಗಳು	ಉತ್ತರಗಳು
			ರಿಂದ 53.85 ರವರೆಗಿನ ರಸ್ತೆಯು ರಾಷ್ಟ್ರೀಯ ಹೆದ್ದಾರಿಯಿಂದ ಬರುವ ಭಾರಿ ಹಾಗೂ ಲಘು ವಾಹನಗಳ ಹೆಚ್ಚಿನ ಸಂಚಾರದಿಂದ ರಸ್ತೆಯು ಹಾಳಾಗಿದ್ದು, ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ಮುಂದಿನ ಸಾಲಿನ ಅಪೆಂಡಿಕ್ಸ್-ಇ ನಲ್ಲಿ ಪ್ರಸ್ತಾಪಿಸಲಾಗುವುದು.
ಈ)	ಯಾವ ಕಾಲಮಿತಿಯಲ್ಲಿ ಸದರಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು?		2020-21ನೇ ಸಾಲಿನಲ್ಲಿ ಈಗಾಗಲೇ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುವ ಕಿತ್ತೂರು ಮತಕ್ಷೇತ್ರದ ಎಂ.ಕೆ.ಹುಬ್ಬಳ್ಳಿ ಬೈಲಹೊಂಗಲ ಜಿ.ಮು.ರ (ಕಿಮೀ. 0.00 ರಿಂದ 2.07, 13.80 ರಿಂದ 16.17) 5.69 ಕಿ.ಮೀ. ಮತ್ತು ಸಂಪಗಾಂವ ಕರಡಿಗುದ್ದಿ ಜಿ.ಮು.ರ (ಕಿಮೀ. 0.40 ರಿಂದ 2.00 & 10.45 ರಿಂದ 11.20) 2.20 ಕಿ.ಮೀ. ಕಾಮಗಾರಿಗಳನ್ನು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು ಹಾಗೂ ಎಂ.ಕೆ.ಹುಬ್ಬಳ್ಳಿ ಚಿಕ್ಕಬಾಗೇವಾಡಿ ಕಿ.ಮೀ. 51.65 ರಿಂದ 53.85 ರವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಮುಂದಿನ ಸಾಲಿನ ಅಪೆಂಡಿಕ್ಸ್-ಇ ನಲ್ಲಿ ಪ್ರಸ್ತಾಪಿಸಲಾಗುವುದು.

ಲೋಇ 103 ಸಿಕ್ಯೂಎನ್ 2020(ಇ)

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	191
ಮಾನ್ಯ ವಿಧಾನಸಭೆಯ ಸದಸ್ಯರ ಹೆಸರು	:	ಶ್ರೀ ಹ್ಯಾರಿಸ್ ಎನ್. ಎ (ಶಾಂತಿನಗರ)
ಉತ್ತರಿಸುವ ದಿನಾಂಕ	:	07.12.2020
ಉತ್ತರಿಸುವ ಸಚಿವರು	:	ಮಾನ್ಯ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಮತ್ತು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.

ಕ್ರ. ಸಂ ಖ್ಯೆ	ಪ್ರಶ್ನೆ	ಉತ್ತರ
1	ರಾಜ್ಯದಲ್ಲಿ ವಿಶಾಲ ವಿಸ್ತೀರ್ಣದ ಕರಾವಳಿ ಪ್ರದೇಶಗಳನ್ನು ಹೊಂದಿರುವ ಕಾರಣ ಒಳನಾಡು ಜಲಸಾರಿಗೆ ವಲಯವನ್ನು ಬಳಸಿಕೊಳ್ಳುವಲ್ಲಿ ಸರ್ಕಾರದ ಮುಂದಿರುವ ಪ್ರಸ್ತಾವನೆಗಳು ಯಾವುವು;	ರಾಜ್ಯದ ಕರಾವಳಿ ತೀರದಲ್ಲಿರುವ ಗುರುಪುರ, ಕಾಳಿ, ನೇತ್ರಾವತಿ, ಶರಾವತಿ ನದಿಗಳಲ್ಲಿ ಮತ್ತು ಕಬಿನಿ, ಹಂಗಾರಕಟ್ಟೆ ಹಾಗೂ ಆಲಮಟ್ಟಿಯಿಂದ ಬಾಗಲಕೋಟೆ ಪ್ರದೇಶಗಳಲ್ಲಿ ಜಲಮಾರ್ಗಗಳ ಅಭಿವೃದ್ಧಿಗಾಗಿ ಈಗಾಗಲೇ ಕಾರ್ಯಸಾಧ್ಯತೆ ವರದಿಯನ್ನು (Feasibility Report) ತಯಾರಿಸಲಾಗಿದೆ. ಈ ವರದಿಯನ್ನು ಆಧಾರಿಸಿ ಜಲಮಾರ್ಗಗಳ ಅಭಿವೃದ್ಧಿಗಾಗಿ ವಿಸ್ತೃತ ಯೋಜನಾ ವರದಿಗಳನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುವುದು.
2	ಸಾರ್ವಜನಿಕರಿಗೆ ಮತ್ತು ಸರಕು ಸಾಗಾಣಿಕೆಗೆ ಪೂರಕ ವ್ಯವಸ್ಥೆಯನ್ನು ಮಾಡುವ ನಿಟ್ಟಿನಲ್ಲಿ ಸರ್ಕಾರದ ಕ್ರಮಗಳೇನು:	ಭಾರತೀಯ ಒಳನಾಡು ಜಲಮಾರ್ಗ ಪ್ರಾಧಿಕಾರ (National Waterways Authority of India) ಇವರು ಕರ್ನಾಟಕ ರಾಜ್ಯದಲ್ಲಿ 11 ರಾಷ್ಟ್ರೀಯ ಒಳನಾಡು ಜಲಮಾರ್ಗಗಳನ್ನು ಘೋಷಿಸಿರುತ್ತಾರೆ. ಈ 11 ಜಲಮಾರ್ಗಗಳಲ್ಲಿ 5 ರಾಷ್ಟ್ರೀಯ ಒಳನಾಡು ಜಲಮಾರ್ಗಗಳಾದ ಗುರುಪುರ, ಕಬಿನಿ, ಕಾಳಿ, ನೇತ್ರಾವತಿ ಮತ್ತು ಶರಾವತಿ ನದಿಗಳನ್ನು ಸರಕು ಸಾಗಾಣಿಕೆಗಾಗಿ ಅಭಿವೃದ್ಧಿಪಡಿಸಲು 2016-17ನೇ ಸಾಲಿನಲ್ಲಿ inland waterways authority of india (IWAI) ರವರು ಸಮಾಲೋಚಕರ ಮುಖಾಂತರ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿರುತ್ತಾರೆ.

...2/-

ಕ್ರ. ಸಂ ಖ್ಯೆ	ಪ್ರಶ್ನೆ	ಉತ್ತರ
		ಆದರೆ, ಸರಕು ಸಾಗಾಣಿಕೆಗಾಗಿ ಮೇಲ್ಕಾಣಿಸಿದ 5 ಜಲಮಾರ್ಗಗಳನ್ನು ಅಭಿವೃದ್ಧಿಪಡಿಸುವುದು ಆರ್ಥಿಕವಾಗಿ ಲಾಭದಾಯಕವಾಗದಿರುವುದರಿಂದ, ಅವುಗಳಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಸೂಕ್ತ ಕ್ರಮಕೈಗೊಳ್ಳಲಾಗುವುದು.
3	ಒಳನಾಡು ಜಲಸಾರಿಗೆ ವ್ಯವಸ್ಥೆಯನ್ನು ಬಳಸಿಕೊಂಡು ಪ್ರವಾಸೋದ್ಯಮ ಕ್ಷೇತ್ರಕ್ಕೂ ನೆರವಾಗುವ ಕ್ರಿಯಾ ಯೋಜನೆಗಳನ್ನು ಸರ್ಕಾರ ಸಿದ್ಧಪಡಿಸಿದೆಯೇ; ಹಾಗಿದ್ದಲ್ಲಿ, ಆ ಕುರಿತಾದ ವಿವರಗಳೇನು;	ಹೌದು. ವಿವರವಾದ ಯೋಜನಾ ವರದಿಯು ತಯಾರಿಯ ಹಂತದಲ್ಲಿದೆ.
4	ಇತರ ಕರಾವಳಿ ಮತ್ತು ಒಳನಾಡು ಜಲಸಾರಿಗೆ ವ್ಯವಸ್ಥೆಯನ್ನು ಹೊಂದಿರುವ ರಾಜ್ಯಗಳು ಮತ್ತು ವಿದೇಶಗಳಲ್ಲಿ ಆಧುಮೀಕರಣ ತಂತ್ರಜ್ಞಾನ ಬಳಕೆ ವ್ಯವಸ್ಥೆಗಳನ್ನು ಸಮೀಕ್ಷಿಸಿ, ರಾಜ್ಯದಲ್ಲೂ ಅಂತಹ ಬಹುಪಯೋಗಿ ವ್ಯವಸ್ಥೆಯನ್ನು ಒದಗಿಸಿಕೊಡುವಲ್ಲಿ ಸರ್ಕಾರದ ನಿಲುವೇನು?	ಇತರ ರಾಜ್ಯ ಹಾಗೂ ವಿದೇಶಗಳಲ್ಲಿನ ಆಧುನೀಕರಣ ತಂತ್ರಜ್ಞಾನವನ್ನು ಅಳವಡಿಸಿಕೊಂಡು ರಾಜ್ಯದ ಕರಾವಳಿ ಹಾಗೂ ಒಳನಾಡು ಜಲಸಾರಿಗೆಯನ್ನು ಅಭಿವೃದ್ಧಿ ಪಡಿಸಲು ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು

ಕಡತ ಸಂಖ್ಯೆ: IDD 106 PSP 2020 (E-388045)

(ಕೋಟ ಶ್ರೀನಿವಾಸ ಪೂಜಾರಿ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	217
ಸದಸ್ಯರ ಹೆಸರು	:	ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ)
ಉತ್ತರಿಸುವ ದಿನಾಂಕ	:	07.12.2020
ಉತ್ತರಿಸುವ ಸಚಿವರು	:	ಉಪಮುಖ್ಯಮಂತ್ರಿ ಲೋಕೋಪಯೋಗಿ ಇಲಾಖೆ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರಗಳು
ಅ)	ರಾಷ್ಟ್ರೀಯ ಹೆದ್ದಾರಿ 373 ರ ಬೇಲೂರು-ಬಿಳಿಕೆರೆ ರಸ್ತೆ ಸರಪಳಿ 455.845 ರಿಂದ 489.845 ಕಿ.ಮೀಟರ್‌ರವರೆಗೆ ಅಭಿವೃದ್ಧಿ ಕಾಮಗಾರಿ (ಪ್ಯಾಕೇಜ್ 2 ಬೇಲೂರು-ಹಾಸನ ರಸ್ತೆ) ಕಾಮಗಾರಿಗೆ ಅಡಿಗಲ್ಲನ್ನು ಹಾಕಿದ್ದು, ಈ ಕಾಮಗಾರಿಗೆ ಸಂಬಂಧಪಟ್ಟಂತೆ ಎನ್.ಹೆಚ್.ಎ.ಐ.ಆರ್.ಒ.ರವರು ಡಿ.ಪಿ.ಆರ್ ಅನ್ನು ಸಲ್ಲಿಸಲಾಗಿದ್ದು, ಸದರಿ ಡಿ.ಪಿ.ಆರ್.ಗೆ ಅನುಮೋದನೆ ದೊರೆಯದೆ ಕಾಮಗಾರಿ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಷ್ಟ್ರೀಯ ಹೆದ್ದಾರಿ 373 ರ ಬೇಲೂರು-ಬಿಳಿಕೆರೆ ರಸ್ತೆಯ ಸರಪಳಿ 455.845 ರಿಂದ 489.845 ಕಿ.ಮೀ.ವರೆಗೆ (ಬೇಲೂರಿನಿಂದ-ಹಾಸನದವರೆಗೆ : ಪ್ಯಾಕೇಜ್-2) ರಸ್ತೆ ಅಭಿವೃದ್ಧಿ ಕಾಮಗಾರಿಯ ಯೋಜನಾ ವರದಿ ಮಂಜೂರಾತಿಗೆ ಮೊದಲೇ ಕಾಮಗಾರಿಗೆ ಅಡಿಗಲ್ಲನ್ನು ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ನವದೆಹಲಿ ಕಛೇರಿಗೆ ಸಲ್ಲಿಸಲಾಗಿದ್ದು, ಸದರಿ ಕಛೇರಿಯಲ್ಲಿ ವಿವರವಾದ ಯೋಜನಾ ವರದಿ (ಡಿ.ಪಿ.ಆರ್) ಪರಿಶೀಲನಾ ಹಂತದಲ್ಲಿದೆ ಹಾಗೂ ಅನುಮೋದನೆ ನಿರೀಕ್ಷಿಸಿದೆ.
ಆ)	ಹಾಗಿದ್ದಲ್ಲಿ, ಸದರಿ ಕಾಮಗಾರಿಗೆ ಅನುಮೋದನೆ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು)?	ರಾಷ್ಟ್ರೀಯ ಹೆದ್ದಾರಿ-373 ರ ಬೇಲೂರು-ಬಿಳಿಕೆರೆ ರಸ್ತೆಯ ಸರಪಳಿ 455.845 ರಿಂದ 489.845 ಕಿ.ಮೀ.ವರೆಗೆ (ಬೇಲೂರಿನಿಂದ-ಹಾಸನದವರೆಗೆ : ಪ್ಯಾಕೇಜ್-2) ರಸ್ತೆ ಅಭಿವೃದ್ಧಿ ಕಾಮಗಾರಿಯು ರೂ.205.00 ಕೋಟಿ ಅಂದಾಜು ಮೊತ್ತದಲ್ಲಿ 2019-20ನೇ ಸಾಲಿನ ಪ್ರಸ್ತಾಪಿತ ವಾರ್ಷಿಕ ಕಾಮಗಾರಿಗಳ ಯೋಜನೆಯಲ್ಲಿ ಸೇರ್ಪಡೆಗೊಳಿಸಲಾಗಿತ್ತು. ಅದರಂತೆ, ಸದರಿ ಕಾಮಗಾರಿಯ ವಿವರವಾದ ಯೋಜನಾ ವರದಿಯನ್ನು ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರುರವರ ವತಿಯಿಂದ ಮುಖ್ಯ ಇಂಜಿನಿಯರ್-ಪ್ರಾದೇಶಿಕ ಅಧಿಕಾರಿಗಳು, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ಬೆಂಗಳೂರು ರವರಿಗೆ ದಿನಾಂಕ:12.12.2019 ರಂದು ಸಲ್ಲಿಸಲಾಗಿದೆ. ಮುಖ್ಯ ಇಂಜಿನಿಯರ್-ಪ್ರಾದೇಶಿಕ ಅಧಿಕಾರಿಗಳು, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ಬೆಂಗಳೂರುರವರ ಕಛೇರಿ ವತಿಯಿಂದ ಸದರಿ ಯೋಜನಾ ವರದಿ ಕುರಿತು ಕೆಲವು ಮಾರ್ಪಾಡುಗಳನ್ನು ಮಾಡಲು ಸೂಚಿಸಿದ್ದ ಮೇರೆಗೆ ಮಾರ್ಪಾಡುಗಳನ್ನು ಮಾಡಿ ಯೋಜನಾ ವರದಿಯನ್ನು ಸಲ್ಲಿಸಲು ಕ್ರಮ ವಹಿಸಲಾಗಿತ್ತು. ಈ ನಡುವೆ 2019-20ನೇ ಆರ್ಥಿಕ ವರ್ಷ

		ಪೂರ್ಣಗೊಂಡ ಹಿನ್ನೆಲೆಯಲ್ಲಿ 2020–21ನೇ ಸಾಲಿನ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದ ಅನುಮೋದಿತ ವಾರ್ಷಿಕ ಕಾಮಗಾರಿಗಳ ಯೋಜನೆಯಲ್ಲಿ ಸದರಿ ಕಾಮಗಾರಿಯು ರೂ.216.00 ಕೋಟಿಗಳಿಗೆ ಸೇರ್ಪಡೆಗೊಂಡಿರುತ್ತದೆ. ಮುಂದುವರೆದು, ಸದರಿ ಕಾಮಗಾರಿಯ ರೂ.222.05 ಕೋಟಿಗಳ ಅಂದಾಜು ಮೊತ್ತದ ವಿವರವಾದ ಯೋಜನಾ ವರದಿಯನ್ನು ಮುಖ್ಯ ಇಂಜಿನಿಯರ್–ಪ್ರಾದೇಶಿಕ ಅಧಿಕಾರಿಗಳು, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ಬೆಂಗಳೂರು ರವರಿಗೆ ದಿನಾಂಕ:03.10.2020 ರಂದು ಸಲ್ಲಿಕೆಯಾಗಿರುತ್ತದೆ. ತದನಂತರ, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದ ಬೆಂಗಳೂರು ಕಛೇರಿಯಿಂದ ಸದರಿ ವಿವರವಾದ ಯೋಜನಾ ವರದಿಯನ್ನು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ನವದೆಹಲಿ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಪ್ರಸ್ತುತ ಪರಿಶೀಲನಾ ಹಂತದಲ್ಲಿರುತ್ತದೆ. ವಿವರವಾದ ಯೋಜನಾ ವರದಿಗೆ ಅನುಮೋದನೆ ಪಡೆಯುವ ಸಂಬಂಧ ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು ಮತ್ತು ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಹಾಸನ ರವರು ದಿನಾಂಕ: 26.11.2020 ಮತ್ತು 27.11.2020 ರಂದು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದ ನವದೆಹಲಿ ಕಛೇರಿಗೆ ಹಾಜರಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾಮಗಾರಿಯ ಯೋಜನಾ ವರದಿ ಕುರಿತು ವಿವರಣೆ ನೀಡಿರುತ್ತಾರೆ. ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದ ನವದೆಹಲಿ ಕಛೇರಿ ವತಿಯಿಂದ ಕಾಮಗಾರಿಯ ವಿವರವಾದ ಯೋಜನಾ ವರದಿ ಕುರಿತು ಕೆಲವು ಮಾರ್ಪಾಡುಗಳನ್ನು ಸೂಚಿಸಿದ್ದು, ಶೀಘ್ರವೇ ಯೋಜನಾ ವರದಿ ಮಾರ್ಪಡಿಸಿ, ಸಮಂಜಸ ವಿವರಣೆಗಳನ್ನು ಸಲ್ಲಿಸಿ, ವಿವರವಾದ ಯೋಜನಾ ವರದಿಗೆ ಅನುಮೋದನೆ ಪಡೆಯಲು ಕ್ರಮ ವಹಿಸಲಾಗುವುದು.

ಕಡತ ಸಂಖ್ಯೆ: ಲೋಇ 240 ಸಿಎನ್‌ಹೆಚ್ 2020 (ಇ)

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿ
ಲೋಕೋಪಯೋಗಿ ಇಲಾಖೆ

4

ಕರ್ನಾಟಕ ವಿಧಾನಸಭೆ
15ನೇ ವಿಧಾನಸಭೆ
8ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	255
ಮಾನ್ಯ ಸದಸ್ಯರ ಹೆಸರು	:	ಶ್ರೀ. ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)
ಉತ್ತರಿಸುವ ದಿನಾಂಕ	:	07-12-2020
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಗಳು, (ಲೋಕೋಪಯೋಗಿ ಇಲಾಖೆ)

ಕ್ರಸಂ	ಪ್ರಶ್ನೆಗಳು	ಉತ್ತರ
ಅ)	ಹಗರಿ ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಹಂಪಿ- ಕಮಲಾಪುರ ರಾಜ್ಯ ಹೆದ್ದಾರಿ 131 ರ ಕಿ.ಮೀ 158.00 ರಿಂದ 180.75 ರವರೆಗೆ ರಸ್ತೆ ತೀರಾ ಹದಗೆಟ್ಟು ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
ಆ)	ಬಂದಿದ್ದಲ್ಲಿ, ದುರಸ್ತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಅನುದಾನದ ವಿವರ ನೀಡುವುದು)	ಸದರಿ ರಸ್ತೆ ದುರಸ್ತಿಗಾಗಿ ಕೈಗೊಂಡ ಕ್ರಮಗಳ ವಿವರಗಳು.

ಕ್ರಸಂ.	ಲೆಕ್ಕ ಶೀರ್ಷಿಕೆ	ವರ್ಷ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಕಾಮಗಾರಿಯ ಪ್ರಸ್ತುತ ಹಂತ
1	5054-ಅಪೆಂಡಿಕ್ಸ್-ಇ ರಾಜ್ಯ ಹೆದ್ದಾರಿ	2016-17	2016-17ನೇ ಸಾಲಿನಲ್ಲಿ ರಾಜ್ಯ ಹೆದ್ದಾರಿ-131 ಹಂಪಿ-ಕಮಲಾಪುರ-ಹಗರಿಬೊಮ್ಮನಹಳ್ಳಿ ರಸ್ತೆ ಕಿ.ಮೀ 177.26 ರಿಂದ 178.00 ರವರೆಗೆ ಅಭಿವೃದ್ಧಿ	125.00	ಕಾಮಗಾರಿ ಪೂರ್ಣಗೊಂಡಿದೆ.
2	5054-ಅಫೆಂಡಿಕ್ಸ್-ಇ ರಾಜ್ಯ ಹೆದ್ದಾರಿ	2018-19	2018-19ನೇ ಸಾಲಿನಲ್ಲಿ ರಾಜ್ಯ ಹೆದ್ದಾರಿ-131 ಹಂಪಿ-ಕಮಲಾಪುರ-ಹಗರಿಬೊಮ್ಮನಹಳ್ಳಿ ರಸ್ತೆ ಕಿ.ಮೀ 174.80 ರಿಂದ 177.20ರವರೆಗೆ ಅಭಿವೃದ್ಧಿ	300.00	ಕಾಮಗಾರಿ ಪೂರ್ಣಗೊಂಡಿದೆ.

		3	ಡಿ.ಎಂ.ಎಫ್.	2019–20	2019–20ನೇ ಸಾಲಿನಲ್ಲಿ ರಾಜ್ಯ ಹೆದ್ದಾರಿ–131 ಹಂಪಿ–ಕಮಲಾಪುರ–ಹಗರಿಬೊಮ್ಮನಹಳ್ಳಿ ರಸ್ತೆ ಕಿ.ಮೀ 178.00 ರಿಂದ 178.30ರವರೆಗೆ ಅಭಿವೃದ್ಧಿ	60.00	ಕಾಮಗಾರಿ ಪ್ರಗತಿಯಲ್ಲಿದೆ
ಇ)	ಸದರಿ ರಸ್ತೆ ದುರಸ್ತಿ ಕುರಿತಂತೆ ರೂ.1650.00 ಲಕ್ಷಗಳ ಮೊತ್ತಕ್ಕೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಸದರಿ ಪ್ರಸ್ತಾವನೆ ಯಾವ ಹಂತದಲ್ಲಿದೆ;	ಹಗರಿ ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಅರಭಾವಿ–ಚಳ್ಳಕೆರೆ ರಾಜ್ಯ ಹೆದ್ದಾರಿ–45 ರ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಂತ–4 ಘಟ್ಟ–2 ರಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. ಕಾಮಗಾರಿ ಅನುಮೋದನೆ ನಂತರ, DPR ತಯಾರಿಕೆ ಹಾಗೂ ಇನ್ನಿತರೆ ಸಂಬಂಧಿತ ಕಾರ್ಯಗಳನ್ನು ಕೈಗೊಳ್ಳಲಾಗುವುದು.					
ಈ)	ಹಗರಿ ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಕೊಟ್ಟೂರು ತಾಲ್ಲೂಕಿನಲ್ಲಿ ಸರ್ಕ್ಯೂಟ್ ಹೌಸ್ ಅನ್ನು ಯಾವ ಕಾಲಮಿತಿಯೊಳಗೆ ಎಲ್ಲಿ ನಿರ್ಮಾಣ ಮಾಡಲಾಗುವುದು ಹಾಗು ಒದಗಿಸಲಾಗಿರುವ ಅನುದಾನವೆಷ್ಟು ?	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಕೊಟ್ಟೂರು ತಾಲೂಕಿನಲ್ಲಿ ಸರ್ಕ್ಯೂಟ್ ಹೌಸ್‌ನ್ನು ಕೊಟ್ಟೂರು ಪಟ್ಟಣದಲ್ಲಿ ಇರುವ ಪ್ರವಾಸಿ ಮಂದಿರದ ಖಾಲಿ ಜಾಗದಲ್ಲಿ, 2020–21ನೇ ಸಾಲಿನಲ್ಲಿ ಸರ್ಕ್ಯೂಟ್ ಹೌಸ್ ನಿರ್ಮಾಣದ ಪ್ರಸ್ತಾವನೆಯು "ಅಪೆಂಡಿಕ್ಸ್–ಇ" ಯೋಜನೆಯಲ್ಲಿ ಒಳಗೊಂಡಿರುವುದಿಲ್ಲ. ಆರ್ಥಿಕ ಇಲಾಖೆಯ ಅನುದಾನ ಲಭ್ಯತೆಯನುಸಾರ ಪ್ರಸ್ತಾಪಿಸಲಾಗುವುದು.					

ಸಂಖ್ಯೆ:ಲೋಇ E- 170 ಇಎಪಿ 2020

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1**
ಸದಸ್ಯರ ಹೆಸರು	:	ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)
ಉತ್ತರಿಸಬೇಕಾದ ದಿನಾಂಕ	:	07-12-2020
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

ಪ್ರಶ್ನೆ	ಉತ್ತರ
(ಅ) ರಾಜ್ಯದಲ್ಲಿ 2019-20ನೇ ಸಾಲಿನ ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಯಲ್ಲಿ ಉಂಟಾದ ಅತೀವೃಷ್ಟಿಯಿಂದಾಗಿ ಪ್ರವಾಹಕ್ಕೆ ತುತ್ತಾದ ಜಿಲ್ಲಾ ಮತ್ತು ತಾಲ್ಲೂಕುಗಳ ವಿವರಗಳೇನು (ಸಂಪೂರ್ಣ ವಿವರ ನೀಡುವುದು);	2019-20ನೇ ಸಾಲಿನ ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಯಲ್ಲಿ ಉಂಟಾದ ಅತೀವೃಷ್ಟಿಯಿಂದಾಗಿ ರಾಜ್ಯದ 119 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. ಪ್ರವಾಹಕ್ಕೆ ತುತ್ತಾದ ಜಿಲ್ಲಾ ಮತ್ತು ತಾಲ್ಲೂಕುಗಳ ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಿದೆ.
(ಆ) ಈ ಪೈಕಿ ಎಷ್ಟು ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಸರ್ಕಾರ ಘೋಷಣೆ ಮಾಡಲಾಗಿದೆ (ಸಂಪೂರ್ಣ ವಿವರ ನೀಡುವುದು)	
(ಇ) ಈ ಪೈಕಿ ಬೆಳಗಾವಿ ಜಿಲ್ಲೆ ರಾಯಭಾಗ ಮತಕ್ಷೇತ್ರದ ವ್ಯಾಪ್ತಿಯ ರಾಯಭಾಗ ತಾಲ್ಲೂಕು ಹಾಗೂ ಚಿಕ್ಕೋಡಿ ತಾಲ್ಲೂಕನ್ನು ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿ ಪರಿಹಾರ ವಿತರಿಸಲಾಗುವುದು; ಇಲ್ಲವಾದಲ್ಲಿ, ಕಾರಣಗಳೇನು;	2019-20ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ ರಾಯಭಾಗ ಮತ್ತು ಚಿಕ್ಕೋಡಿ ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲೂಕು ಎಂದು ಘೋಷಿಸಲಾಗಿದ್ದು, ನಿಯಮಾನುಸಾರ ಪರಿಹಾರ ವಿತರಿಸಲಾಗಿದೆ.

..2

(ಇ) ಈ ಪ್ರವಾಹ ಪೀಡಿತ ತಾಲ್ಲೂಕುಗಳ ಅಭಿವೃದ್ಧಿಗೆ ಮತ್ತು ಆಸ್ತಿ-ಪಾಸ್ತಿ ಕಳೆದುಕೊಂಡ ಸಾರ್ವಜನಿಕರಿಗೆ ಪರಿಹಾರವಾಗಿ ಸರ್ಕಾರ ನಿಗದಿಪಡಿಸಿರುವ ಅನುದಾನ ಹಾಗೂ ಈ ಪೈಕಿ ಬಿಡುಗಡೆ ಮಾಡಲಾಗುವ ಅನುದಾನವೆಷ್ಟು;	ಪ್ರವಾಹ ಪರಿಹಾರಕ್ಕಾಗಿ ಬೆಳಗಾವಿ ಜಿಲ್ಲೆಗೆ ತುರ್ತು ಪರಿಹಾರಗಳಿಗಾಗಿ ರೂ.151.10 ಕೋಟಿ, ಮನೆ ಹಾನಿ ಪರಿಹಾರಕ್ಕಾಗಿ ರೂ.352.74 ಕೋಟಿ, ಬೆಳೆ ಪರಿಹಾರಕ್ಕಾಗಿ ರೂ.268.96 ಕೋಟಿ ಹಾಗೂ ಮೂಲಸೌಕರ್ಯಗಳ ತುರ್ತು ದುರಸ್ತಿಗಾಗಿ ರೂ.177.88 ಕೋಟಿಗಳನ್ನು ಎಸ್.ಡಿ.ಆರ್.ಎಫ್ ನಿಧಿಯಿಂದ ಬಿಡುಗಡೆ ಮಾಡಲಾಗಿದೆ.
(ಉ) ಈ ಅತೀವೃಷ್ಠಿಯಲ್ಲಿ ಮನೆ ಮತ್ತು ಜಾನುವಾರು ಹಾಗೂ ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡ ಸಾರ್ವಜನಿಕರಿಗೆ ಈವರೆವಿಗೂ ಬಿಡುಗಡೆ ಮಾಡಿ ವಿತರಿಸಿರುವ ಪರಿಹಾರ ಧನವೆಷ್ಟು (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)?	ಪ್ರಕೃತಿವಿಕೋಪ ಪರಿಹಾರ ನಿಧಿಯಡಿ ಅತಿವೃಷ್ಟಿಯಿಂದ ಹಾನಿಯಾದ 126701 ಮನೆಗಳಿಗೆ ಪರಿಹಾರಕ್ಕಾಗಿ ರೂ.1587.07 ಕೋಟಿಗಳನ್ನು ನೆರೆ ಸಂತ್ರಸ್ಥರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ. (ಜಿಲ್ಲಾವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ) ಮೂಲಭೂತ ಸೌಕರ್ಯಗಳ ತುರ್ತು ದುರಸ್ತಿಗಾಗಿ ರೂ.500.00 ಕೋಟಿ ಬಿಡುಗಡೆಯಾಗಿದ್ದು, ರೂ.395.00 ಕೋಟಿ ವೆಚ್ಚವಾಗಿರುತ್ತದೆ. (ಜಿಲ್ಲಾವಾರು ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ) ಪ್ರವಾಹದಿಂದ 3400 ಜಾನುವಾರು ಜೀವಹಾನಿಯಾಗಿದ್ದು, ಮಾರ್ಗಸೂಚಿಯನ್ವಯ ರೂ.6.18 ಕೋಟಿಗಳನ್ನು ಪಾವತಿಸಲಾಗಿದೆ.

ಕಂಇ 601 ಟಿಎನ್‌ಆರ್ 2020

(ಆರ್. ಅಶೋಕ)

ಕಂದಾಯ ಸಚಿವರು

(7)

ವಿಧಾನ ಸಭೆಯ ಚು.ರ.ಪ್ರಸಂ: 1 ಕ್ಕೆ ಅನುಬಂಧ-1

2019-20ನೇ ಸಾಲಿನಲ್ಲಿ ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಿಸಿರುವ ಪಟ್ಟಿ

ಕ್ರಸಂ	ಜಿಲ್ಲೆ	ಕ್ರ. ಸಂ.	ತಾಲ್ಲೂಕು
1	ಬೆಳಗಾವಿ	1	ಅಥಣಿ
		2	ಬೈಲಹೊಂಗಲ
		3	ಬೆಳಗಾವಿ
		4	ಚಿಕ್ಕೋಡಿ
		5	ಗೋಕಾಕ್
		6	ಹುಕ್ಕೇರಿ
		7	ಖಾನಾಪುರ
		8	ರಾಮದುರ್ಗ
		9	ರಾಯಬಾಗ
		10	ಸವದತ್ತಿ
2	ಬಾಗಲಕೋಟೆ	11	ಬಾದಾಮಿ
		12	ಬಾಗಲಕೋಟೆ
		13	ಬೀಳಗಿ
		14	ಹುನಗುಂದ
		15	ಜಮಖಂಡಿ
		16	ಮುಧೋಳ
3	ರಾಯಚೂರು	17	ದೇವದುರ್ಗ
		18	ಲಿಂಗಸೂರು
		19	ರಾಯಚೂರು
		20	ಮಾನ್ವಿ
		21	ಸಿಂಧನೂರು
4	ಕಲಬುರಗಿ	22	ಜೇವರ್ಗಿ
		23	ಅಫ್ಜಲ್‌ಪುರ
		24	ಚಿತ್ತಾಪುರ
		25	ಕಲಬುರಗಿ
5	ಯಾದಗಿರಿ	26	ಶಹಪುರ
		27	ಶೋರಪುರ
		28	ಯಾದಗಿರಿ
6	ವಿಜಯಪುರ	29	ಬಸವನಬಾಗೇವಾಡಿ
		30	ಮುದ್ದೇಬಿಹಾಳ
		31	ಇಂಡಿ
		32	ಸಿಂದಗಿ
7	ಗದಗ	33	ನರಗುಂದ
		34	ರೋಣ
		35	ಶಿರಹಟ್ಟಿ

ಕ್ರಸಂ	ಜಿಲ್ಲೆ	ಕ್ರ. ಸಂ.	ತಾಲ್ಲೂಕು
8	ಹಾವೇರಿ	36	ಹಾನಗಲ್
		37	ಹಾವೇರಿ
		38	ಸವಣೂರು
		39	ಶಿಗ್ಗಾವಿ
		40	ಬ್ಯಾಡಗಿ
		41	ಹಿರೇಕೆರೂರು
		42	ರಾಣೆಬೆನ್ನೂರು
9	ಧಾರವಾಡ	43	ಧಾರವಾಡ
		44	ಹುಬ್ಬಳ್ಳಿ
		45	ಕಲಘಟಗಿ
		46	ಕುಂದಗೋಳ
		47	ನವಲಗುಂದ
10	ಶಿವಮೊಗ್ಗ	48	ಹೊಸನಗರ
		49	ಸಾಗರ
		50	ಶಿಕಾರಿಪುರ
		51	ಶಿವಮೊಗ್ಗ
		52	ಸೊರಬ
		53	ತೀರ್ಥಹಳ್ಳಿ
		54	ಭದ್ರಾವತಿ
11	ಹಾಸನ	55	ಸಕಲೇಶಪುರ
		56	ಬೇಲೂರು
		57	ಆಲೂರು
		58	ಅರಕಲಗೂಡು
		59	ಹಾಸನ
		60	ಹೊಳೆನರಸಿಪುರ
12	ಚಿಕ್ಕಮಗಳೂರು	61	ಕೊಪ್ಪ
		62	ಮೂಡಿಗೆರೆ
		63	ನರಸಿಂಹರಾಜಪುರ
		64	ಶೃಂಗೇರಿ
		65	ಚಿಕ್ಕಮಗಳೂರು
		66	ತರೀಕೆರೆ
13	ಕೊಡಗು	67	ಮಡಿಕೇರಿ
		68	ಸೋಮವಾರಪೇಟೆ
		69	ವಿರಾಜಪೇಟೆ
14	ದಕ್ಷಿಣ ಕನ್ನಡ	70	ಬೆಳ್ತಂಗಡಿ
		71	ಬಂಟ್ವಾಳ
		72	ಮಂಗಳೂರು
		73	ಪುತ್ತೂರು
		74	ಸುಳ್ಯ
15	ಉಡುಪಿ	75	ಕಾರ್ಕಳ
		76	ಕುಂದಾಪುರ
		77	ಉಡುಪಿ

ಕ್ರಸಂ	ಜಿಲ್ಲೆ	ಕ್ರ ಸಂ.	ತಾಲ್ಲೂಕು
16	ಉತ್ತರ ಕನ್ನಡ	78	ಅಂಕೋಲಾ
		79	ಭಟ್ಕಳ
		80	ಹಳಿಯಾಳ
		81	ಹೊನ್ನಾವರ
		82	ಕಾರವಾರ
		83	ಕುಮಟಾ
		84	ಮುಂಡಗೋಡ
		85	ಸಿದ್ದಾಪುರ
		86	ಶಿರಸಿ
		87	ಸೂಪ
		88	ಯಲ್ಲಾಪುರ
17	ಮೈಸೂರು	89	ಹೆಗ್ಗಡದೇವನಕೋಟೆ
		90	ನಂಜನಗೂಡು
		91	ಟಿ. ನರಸಿಪುರ
		92	ಹುಣಸೂರು
		93	ಪಿರಿಯಾಪಟ್ಟಣ
18	ದಾವಣಗೆರೆ	94	ಹರಿಹರ
		95	ಹೊನ್ನಾಳಿ
		96	ದಾವಣಗೆರೆ
		97	ಜಗಳೂರು
		98	ಚನ್ನಗಿರಿ
19	ಚಾಮರಾಜನಗರ	99	ಕೊಳ್ಳೆಗಾಲ
20	ಮಂಡ್ಯ	100	ಕೃಷ್ಣರಾಜಪೇಟೆ
		101	ಮಳವಳ್ಳಿ
		102	ಪಾಂಡವಪುರ
		103	ಶ್ರೀರಂಗಪಟ್ಟಣ
21	ಬಳ್ಳಾರಿ	104	ಹಡಗಲಿ
		105	ಬಳ್ಳಾರಿ
		106	ಹಗರಿಬೊಮ್ಮನಹಳ್ಳಿ
		107	ಹರಪ್ಪನಹಳ್ಳಿ
		108	ಸಿರುಗುಪ್ಪ
22	ಕೊಪ್ಪಳ	109	ಗಂಗಾವತಿ
		110	ಕೊಪ್ಪಳ
23	ಚಿತ್ರದುರ್ಗ	111	ಹೊಳಲ್ಕೆರೆ
		112	ಹೊಸದುರ್ಗ
		113	ಚಳ್ಳಕೆರೆ
		114	ಚಿತ್ರದುರ್ಗ
		115	ಹಿರಿಯೂರು
		116	ಮೊಳಕಾಲ್ಮೂರು
24	ಬೆಂಗಳೂರು ನಗರ	117	ಬೆಂಗಳೂರು ದಕ್ಷಿಣ
25	ತುಮಕೂರು	118	ಚಿಕ್ಕನಾಯಕನಹಳ್ಳಿ
		119	ಗುಬ್ಬಿ
ಒಟ್ಟು	**25 ಜಿಲ್ಲೆಗಳು**	**ಒಟ್ಟು**	**119 ತಾಲ್ಲೂಕುಗಳು**

ವಿಧಾನ ಸಭೆಯ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 1 ಕ್ಕೆ ಅನುಬಂಧ-2

Districtwise details of Fund release for housing during Flood 2019

		A Category		B2 Category		B1 Category		C Category		Total	
		Houses	Amount	Houses	Amount	Houses	Amount	Houses	Amount	Houses	Amount
1	Bagalkot	555	19.49	2398	83.04	172	4.39	8688	4.44	11813	111.36
2	Ballari	1	0.01	92	2.9	7	0.18	2363	11.82	2463	14.91
3	Belagavi	5972	201.59	11249	364.36	457	8.93	26527	132.64	44205	707.52
4	Chamarajanagar	27	0.89	23	0.74	3	0.03	64	0.32	117	1.98
5	Chikkamagaluru	463	11.54	368	13.49	168	3.95	1587	7.94	2586	36.92
6	Chitradurga	4	0.04	0	0	0	0	614	3.07	618	3.11
7	DakshinaKannada	305	9.02	97	2.99	94	1.31	284	1.42	780	14.74
8	Davanagere	13	0.42	24	0.85	0	0	1510	7.55	1547	8.82
9	Dharwad	116	4.1	1474	55.98	160	2.73	19135	95.68	20885	158.49
10	Gadag	400	13.1	697	22.01	153	3.92	1580	7.9	2830	46.93
11	Hassan	143	4.18	623	17.23	227	4.04	1045	5.23	2038	30.68
12	Haveri	366	11.82	5462	161.02	677	6.79	14999	75	21504	254.63
13	Kalburgi	0	0	0	0	0	0	0	0	0	0
14	Kodagu	217	4.89	125	2.16	163	2.2	1541	7.71	2046	16.96
15	Koppal	0	0	0	0	0	0	3	0.02	3	0.02
16	Mandya	27	0.37	0	0	0	0	17	0.09	44	0.46
17	Mysuru	207	5.95	1039	31.98	267	5.51	3241	16.21	4754	59.65
18	Raichur	8	0.11	12	0.26	5	0.08	380	1.9	405	2.35
19	Shivamogga	344	9.81	514	12.6	83	1.4	3328	16.64	4269	40.45
20	Udupi	47	0.67	32	0.83	100	0.74	416	2.08	595	4.32
21	UttaraKannada	123	3.55	488	15.29	96	1.95	2239	11.2	2946	31.99
22	Vijayapura	0	0	10	0.37	8	0.22	144	0.72	162	1.31
23	Yadgiri	0	0	3	0.12	0	0	88	0.44	91	0.56
Grand Total		**9338**	**301.55**	**24730**	**788.21**	**2840**	**48.34**	**89793**	**448.97**	**126701**	**1587.07**

ವಿಧಾನ ಸಭೆಯ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 1 ಕ್ಕೆ ಅನುಬಂಧ-3

Floods 2019-20 Infrastructure repair physical and financial progress as on 24-11-2020

Sl. No	District Name	Amount released for reconstruction / repair of damaged infrastructure in lakhs	Action plan prepared for number of works	Out of col 4, number of works completed	Expenditure in lakhs
1	2	3	4	5	6
1	Haveri	3500.00	1913	1777	3033.50
2	Hassan	2784.00	752	224	1048.00
3	Mysuru	1800.00	844	737	1149.93
4	Uttara Kannada	2500.00	1541	1326	1862.30
5	Dakshina Kannada	3500.00	1182	954	2328.58
6	Gadag	2227.00	660	633	1722.87
7	Udupi	2000.00	814	767	1886.50
8	Dharwad	3258.00	1418	1418	2864.27
9	Belagavi	17775.00	4341	3749	14942.90
10	Chikkamagaluru	2000.00	851	812	1878.11
11	Bagalkot	5000.00	840	840	4903.84
12	Shivamogga	2656.00	289	278	897.09
13	Kodagu	1000.00	537	534	994.00
		50000.00	**15982**	**14049**	**39511.89**

ಕರ್ನಾಟಕ ವಿಧಾನಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 5

2) ಸದಸ್ಯರ ಹೆಸರು : ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)

3) ಉತ್ತರಿಸುವ ದಿನಾಂಕ : 07-12-2020

4) ಉತ್ತರಿಸಬೇಕಾದ ಸಚಿವರು : ಹಿಂದೂ ಧಾರ್ಮಿಕ ಮತ್ತು ಧರ್ಮದಾಯ ದತ್ತಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಿಂದ ಕೊಡಗು ಜಿಲ್ಲೆಯ ಮೀನುಗಾರಿಕೆ ಇಲಾಖೆಗೆ ಬಿಡುಗಡೆ ಮಾಡಲಾಗಿರುವ ಅನುದಾನವೆಷ್ಟು;	ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲೆಗೆ ಮೀನುಗಾರಿಕೆ ಇಲಾಖೆಯಿಂದ ರಾಜ್ಯವಲಯ, ಜಿಲ್ಲಾ ವಲಯ ಯೋಜನೆಗಳಡಿ ಬಿಡುಗಡೆಮಾಡಲಾದ ಅನುದಾನಸ ವಿವರಗಳು ಕೆಳಗಿನಂತಿರುತ್ತದೆ:-
ಆ)	ಯಾವ ಯಾವ ಉದ್ದೇಶಗಳಿಗೆ ಬಿಡುಗಡೆಗೊಳಿಸಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)	ರಾಜ್ಯ ವಲಯ ಮತ್ತು ಜಿಲ್ಲಾ ವಲಯ ಯೋಜನೆಗಳಡಿ ಬಿಡುಗಡೆ ಮಾಡಲಾದ ಅನುದಾನದ ತಾಲ್ಲೂಕುವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.

ಕ್ರ. ಸಂ.	ವರ್ಷ	ವಲಯ	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)
